861

ಪುಸ್ತಕ ನಿಧಿ
49, ಅಕ್ಷಯ ತೋಟಗಾರಿಕೊಪ್ಪಲು ಬಡಾವಣೆ
ಸರಸ್ವತಿಪುರಂ. ಮೈಸೂರು-570 009

797



ಅರ್ಧನಾರೀಶ್ವರ

ಶ್ರೀಮಾನ್ ಕೆ. ವೆಂಕಟಪ್ಪನವರ ಕೃತಿ

55-89

ಗೀತಗಳು

(ಕವನ ಸಂಗ್ರಹ)

ಶ್ರೀಮಾನ್

ಬಿ.ಎಂ.ಶ್ರೀಕಂಠಯ್ಯನವರ

ಮುನ್ನುಡಿಯೊಡನೆ

ವಿ.ಸೀ.

ಗೀತಾ ಬುಕ್ ಹೌಸ್

ನ್ಯೂ ಸ್ಟ್ಯಾಚ್ಯು ಸರ್ಕಲ್, ಮೈಸೂರು

Gītagaḷu—'Songs and Lyrics' (Collection of Poems) — By V. Sitaramiah. First Published by Karnataka Sahitya Prakatana Mandira, Bangalore (1931); Second Edition (with a New Introduction by the Author) Published by Geetha Book House, New Statue Circle, Mysore 570001, 1974.

8K1·7
SIT
292306

ಮೊದಲನೆಯ ಮುದ್ರಣ : 1931
ಎರಡನೆಯ ಮುದ್ರಣ : 1974
ಕಾಪಿರೈಟ್ © 1974, ವಿ. ಸೀತಾರಾಮಯ್ಯ

5589
4-4-95

ಮುದ್ರಕರು
ವೆಸ್ಲಿ ಪ್ರೆಸ್, ಮೈಸೂರು

ಮುನ್ನುಡಿ

ಶ್ರೀಮಾನ್ ಎ. ಸೀತಾರಾಮಯ್ಯನವರ **ಪಂಪಾಯಾತ್ರೆ** ಮತ್ತು **ಸೊಹ್ರಾಬ್-ರುಸ್ತುಂ** ಇವುಗಳನ್ನು ಓದಿ, ನೋಡಿ ಸಂತೋಷಪಟ್ಟವರು ಅವರ ಈ ಗೀತಗಳನ್ನು ಉತ್ಸಾಹದಿಂದ ಒರಮಾಡಿಕೊಳ್ಳದೆ ಬಿಡರು. ಈ ಭರವಸೆ ಇರುವುದರಿಂದ ಈ ಗೀತಗಳ ಪ್ರಶಂಸೆಯನ್ನು ನಾನು ಬೇರೆ ಮಾಡಬೇಕಾಗಿಲ್ಲ. ಇದಲ್ಲದೆ ಅವರಿಗೂ ನನಗೂ ಇರುವ ವಿಶ್ವಾಸದ ಕಟ್ಟು ನನ್ನ ಬಾಯನ್ನು ಕಟ್ಟುತ್ತಿದೆ.

ಇಷ್ಟು ಹೇಳಬಹುದು. ಒಂದು ಕ್ರಮಕ್ಕೆ ತಂದ, ನವೆದ ಹಾದಿಯ ಹಿಂದಿನ ಕವಿತ್ವದಲ್ಲಿ ಓದುವವರಿಗೆ ಗೊತ್ತು—ಬರೆಯುವವರಿಗೂ ಗೊತ್ತು—ಹೀಗೆಯೇ ಹೇಳುತ್ತಾರೆ, ಹೀಗೆಯೇ ಬರೆಯುತ್ತಾರೆ ಎಂಬುದಾಗಿ. ಸ್ವಾತಂತ್ರ್ಯದಿಂದ ಹೊಮ್ಮುತ್ತಿರುವ ಹೊಸ ಕವಿತ್ವದಲ್ಲಿ—ಅದರಲ್ಲಿಯೂ ಈ ಕಾಲದ ಮನೋಭಾವಗಳನ್ನು ಹಾಡಿ ತೋರಿಸುವ ಭಾವಗೀತದಲ್ಲಿ—ಒಬ್ಬರ ಹಾಗೆ ಒಬ್ಬರಿರುವುದಿಲ್ಲ; ಒಬ್ಬರೇ ಇರುವುದಿಲ್ಲ ಒಂದೇ ರೀತಿ, ಒಂದೇ ಮಟ್ಟಿನಲ್ಲಿ. ಭಾವಗೀತೆಗಳಲ್ಲಿ ಸೌಂದರ್ಯ ಪರಿಪೂರ್ಣತೆಯನ್ನು ಪಡೆಯುವುದೂ ಸುಲಭವಲ್ಲ. ಏಕೆಂದರೆ, ಗೀತಕ್ಕೆ ಆತ್ಮವೆಂದು ಹೇಳಬಹುದಾದ ಆ ಮಾತಿನ, ಶೈಲಿಯ, ಭಾವದ, ರೀತಿಯ, ಛಂದಸ್ಸಿನ ಸಮ್ಮಿಳಿತ ಸೌಭಾಗ್ಯವನ್ನು ಸರಸ್ವತಿ ಮಿಂಚಿ ಬಂದು ಚಿಮ್ಮಿ ಹೋದಾಗ ಹೊರತು ಬಹುಕಾಲ ಸೆರೆಹಿಡಿದು ನಿಲ್ಲಿಸಿಕೊಳ್ಳುವುದು ಸಾಧ್ಯವಲ್ಲ. ಇದನ್ನು ಬಲ್ಲ ಸಹೃದಯರು ಹೊಸ ಬಗೆಯ ಗೀತ ಕವನಗಳನ್ನು ಸ್ನೇಹದೃಷ್ಟಿಯಿಂದಲೂ ಸಹಾನುಭೂತಿಯಿಂದಲೂ ಓದುವವರೇ ಆಗಿರುತ್ತಾರೆ.

ಈ ಗೀತಗಳಲ್ಲಿ ಸಂಗೀತ ಕ್ರಮದಲ್ಲಿ ಹಾಡತಕ್ಕುವು ಕೆಲವು; ಛಂದಸ್ಸಿಗನುಸಾರವಾಗಿ ಹೇಳತಕ್ಕುವು ಕೆಲವು. ಹೊಸ ಛಂದಸ್ಸುಗಳ ಆವಶ್ಯಕತೆಯನ್ನು ತಿಳಿದ ವಿಮರ್ಶಕರು ಇಲ್ಲಿ ಕೆಲವು ಸುಂದರ ರೂಪಗಳನ್ನು ಕಾಣಬಹುದಾಗಿದೆ. ಭಾಷೆಯಲ್ಲಿ ಒಂದು ಬಗೆಯ ಸರಳತೆ, ಓಜಸ್ಸು, ಗಾಂಭೀರ್ಯ ತುಂಬಿದೆ. ಯುವಕರ ರಕ್ತವನ್ನು ಕುದಿಸುವ ದೇಶಾಭಿಮಾನ ಮತ್ತು ಪ್ರೇಮ; ಪ್ರಕೃತಿ ಮಾತೆಯ ಭಯಂಕರವಾದ ಮತ್ತು ಸೌಮ್ಯವಾದ ದರ್ಶನಗಳು;

ಋತುಗಳ ಕುಣಿತ; ದೇವತಾ ವಿಷಯದಲ್ಲಿ ಮನಸ್ಸನ್ನು ತೂಗಾಡಿಸುವ ಸಂದೇಹ, ಭಕ್ತಿ; ಪಾಪದ ಭಯ; ಧರ್ಮಪ್ರೀತಿ; ಮುಖ್ಯವಾಗಿ ಎಲ್ಲಾ ಕಡೆಯಲ್ಲಿಯೂ ಕಾಣುವ ಸೂಕ್ಷ್ಮವಾದ, ಉದಾರವಾದ, ನಿರ್ಮಲವಾದ ಮನಸ್ಸು—ಇವು ಸಹಾನುಭೂತಿಯಿಂದ ನೋಡತಕ್ಕವರಿಗೆ ಈ ಗೀತಗಳಲ್ಲಿ ಚೆನ್ನಾಗಿ ಪ್ರತಿಬಿಂಬಿತವಾಗಿವೆ. ಒಬ್ಬೊಬ್ಬರ ಅಭಿರುಚಿಗೆ ಒಂದೊಂದು ಬಗೆ ಸೊಗಸಬಹುದಾದರೂ ಸರ್ವರೂ ಮೆಚ್ಚತಕ್ಕ ರತ್ನಗಳು ಈ ಕವನಮಾಲೆಯಲ್ಲಿ ದೊರೆಯುವುವೆಂದು ನಾನು ನಂಬಿರುತ್ತೇನೆ.

ಈ ನಂಬಿಕೆಯಲ್ಲಿ ಈ ಗ್ರಂಥವನ್ನು ಕರ್ಣಾಟಕಾಭಿಮಾನಿಗಳ ಸನ್ನಿಧಿಯಲ್ಲಿ ಕವಿಯೂ ಕವಿಯ ಮಿತ್ರರೂ ನಮ್ರತೆಯಿಂದ ಅರ್ಪಿಸಿರುತ್ತಾರೆ.

ಬಿ. ಎಂ. ಶ್ರೀಕಂಠಯ್ಯ

ಮೊದಲ ಮಾತು

ಸುಮಾರು 1930-31 ಕ್ಕೆ **ಗೀತಗಳ** ಪ್ರಕಟನೆ ಆಯಿತು. ಈ 40 ವರ್ಷಗಳಿಂದಲೂ ಅದರ ಪ್ರತಿಗಳು ದೊರಕುತ್ತಿಲ್ಲ. ಅದಕ್ಕಾಗಿ ಯಾರಿಗೂ ನಷ್ಟ ತೋರಿಲ್ಲ. ಯಾವುದಿಲ್ಲದಿದ್ದರೂ ಪ್ರಪಂಚ ನಡೆಯುತ್ತದೆ; ಯಾರಿಗೆ ನಷ್ಟ ತೋರಲಿ ತೋರದಿರಲಿ ಬರೆದವರಿಗೆ ತಾವಿರುವವರೆಗಾದರೂ ಅವನ್ನು ಕಣ್ಣೆದುರಿಗೆ ಕಾಣುತ್ತಿದ್ದರೆ ಮನಸ್ಸಿಗೆ ಹಿತ. ಅದು ಎಲ್ಲ ಕಾಲಕ್ಕೂ ಉಳಿಯಬೇಕು ಎಂಬ ಆಸೆ ಎಂಥವರಿಗೂ ಇದ್ದರೂ ಆ ನಂಬಿಕೆ, ಭರವಸೆ ಪ್ರಮಾಣಗೊಳ್ಳುವಷ್ಟು ಇಲ್ಲಿ ಇದೆಯೆಂದು ನಾನು ಎಣಿಸಲಾರೆ. ಹೇಗೊ ನಾಲ್ಕು ಸಾಲುಗಳನ್ನು ಬರೆಯತೊಡಗಿದಾಗ **ಪ್ರಬುದ್ಧ ಕರ್ಣಾಟಕ**ದಲ್ಲಿ ಗೆಳೆಯ ಕೃಷ್ಣಶಾಸ್ತ್ರಿಗಳು ಅದನ್ನು ಅಚ್ಚುಮಾಡಲು ಅವಕ್ಕೆ ಉತ್ತೇಜನ ಬಂದಿತು. ಅಂಥವನ್ನು ಒಂದು ಕಡೆ ಸೇರಿಸಿ ಪುಸ್ತಕವಾಗಿ ಪ್ರಕಟಿಸುವ ಯೋಚನೆ ಬಂತು. ಗೆಳೆಯರಾದ ಶ್ರೀ ನಿಟ್ಟೂರು ಶ್ರೀನಿವಾಸರಾಯರು ಪ್ರೋತ್ಸಾಹ ಕೊಟ್ಟು ಎಷ್ಟು ಶಕ್ಯವಾದರೆ ಅಷ್ಟು ಚೆನ್ನಾಗಿ ಅದನ್ನು ಮಾಡೋಣ ಎಂದು ಮುಂದೆ ಬಂದರು. ಬರೆದವರಿಗೆ ಮಮತೆ; ಕರ್ಣಾಟಕ ಸಾಹಿತ್ಯ ಪ್ರಕಟನ ಮಂದಿರದ ಗೆಳೆಯರಿಗೆ ಬಂಧುಕೃತ್ಯ, ಪಕ್ಷಪಾತ ಆಯಿತು. ಆವರೆಗಾಗಲೇ ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘ ಕೆಲವು ಪುಸ್ತಕಗಳನ್ನು—ಉತ್ತಮ ಅಚ್ಚು, ಕಟ್ಟು ಉಳ್ಳ ಪದ್ಯದ ಪುಸ್ತಕಗಳನ್ನು—ಹೊರತಂದಿತ್ತು. ಒಳ್ಳೆಯ ಕಾಗದ, ಬೈಂಡು ಹಾಕಿ ಚಿತ್ರಗಳನ್ನು ಸೇರಿಸಿ ಪ್ರಕಟಿಸಬೇಕೆಂದಾಯಿತು. ಆ ಕಾಲದಲ್ಲಿ ಹೆಸರಾದ ನಂದಲಾಲ ಬಸು ಅವರ ಒಂದೆರಡು ಚಿತ್ರಗಳನ್ನು, ನಮ್ಮ ಕಲೆಗಾರರಾದ ವೆಂಕಟಪ್ಪನವರ ಎರಡು ಮೂರನ್ನು ಬಳಸುವುದೆಂದಾಗಿ ಅವರ 'ಅರ್ಧನಾರೀಶ್ವರ' ಚಿತ್ರವನ್ನು—ಇಲ್ಲೆಲ್ಲಿಯೂ ಉತ್ತಮ ಪಡಿಯಚ್ಚಾಗದೆ ಇರಲು—ಲಂಡನಿನ **Studio** ಪತ್ರಿಕೆಯ ಸಂಪಾದಕರಾದ ಹೋಮ್ಸ್ ಅವರ ನೆರವಿಂದ 'ಕಾಲೊಟೈಪ್' ಮುದ್ರಣ ಮಾಡಿಸಿ ತರಿಸಿ ಹಾಕಿಸಿತು. ನನ್ನ ಈ ಅವಿವೇಕಕ್ಕೆ ನಿಟ್ಟೂರರು ಸಮ್ಮತಿಸಿದುದು ಅವರ ದೊಡ್ಡತನ. ಆಗ ಅದು ಶಕ್ಯವಾಯಿತು. ಬಿಳಿಕಾಗದ ಆಗ ನಾಲ್ಕಾಣೆಗೆ ಪೌಂಡು; ಬೆಂಡು ಕಾಗದ ಆರಾಣೆ, ಪಡಿಯಚ್ಚು ಮಾಡಿದರೆ ಚದರಂಗುಲಕ್ಕೆ ಎಂಟಾಣೆ,

ಹನ್ನೆರಡಾಣೆ ಇತ್ತು. ರೂಪಾಯಿಗೆ ಮೂರು ಪ್ರತಿಗಳನ್ನು ಬೆಂಗಳೂರು ಪ್ರೆಸ್ಸಿನವರು ಕ್ಯಾಲಿಕೊ ಬೈಂಡು ಮಾಡಿಕೊಡುತ್ತಿದ್ದರು. ಇಂದು ಜೀವಕ್ಕಿಂತ ಜೀವನದ ವೆಚ್ಚ ಹೆಚ್ಚಾಗಿ ಇಂಥವು ಕನಸುಗಳಾಗಿವೆ. ಆ ನೆನಪು ಸಿಹಿ. ಪುನಃ ಆ ಧಾರಾಳಕ್ಕೆ ಕೈ ಹಾಕಲಾಗದೆ ಇಲ್ಲಿಯೇ ಚಿತ್ರಗಳನ್ನು ತಯಾರಿಸಿ ಪ್ರಕಟಿಸುತ್ತಿದೆ.

ಈ ನನ್ನ ಚೊಚ್ಚಿಲ ಸಂಕಲನ ಪುನಃ ಅಚ್ಚಾಗಲು ಮೈಸೂರಿನ ಗೀತಾ ಬುಕ್ ಹೌಸ್ ಗೆಳೆಯರಾದ ಶ್ರೀ ಎಂ. ಸತ್ಯನಾರಾಯಣರಾಯರು ಒಪ್ಪಿಕೊಂಡಾಗ ನನಗೆ ಸಂತೋಷವಾಯಿತು. ಇದಕ್ಕೆ ನನ್ನ ಗುರುಗಳಾದ 'ಶ್ರೀ'ಯವರು ಮುನ್ನುಡಿ ಬರೆದುಕೊಟ್ಟಿದ್ದರು: ಗೀತಗಳು ಯೋಗ್ಯತೆಯಲ್ಲಿ ಹೇಗೊ: ಅವರ ಪ್ರೀತಿಯು ಪಕ್ಷಪಾತವೇ ಅತಿಶಯವಾಯಿತು. ನಮ್ಮ ಕಾಲದ ತಿಳಿವಿನಂತೆ ನಾವು ನಡೆದೆವು. ಹೊಸಕಾಲದ್ದೆನ್ನಬಹುದಾದ ಕವಿತೆಯ ಪುಸ್ತಕಗಳು ಇಲ್ಲದಿದ್ದ ಕಾಲದಲ್ಲಿ ಇದು ಅಚ್ಚಾಯಿತೆಂಬುದು, ಇದು ನನ್ನದೆಂಬುದು, ಇದರಲ್ಲಿ 'ಶ್ರೀ'ಯವರ ಆಶೀರ್ವಚನ ಇದೆಯೆಂಬುದು ಇದರ ಈ ಪ್ರಕಟಣೆಗೂ ಕಾರಣವಾಗಿದೆ. ಈ 40 ವರ್ಷಗಳ ಕಾಲದಲ್ಲಿ ನೂರಾರು ಮಂದಿ ಕವಿಗಳು ದೊಡ್ಡ ಚಿಕ್ಕ ಕವಿತೆಗಳ ಗ್ರಂಥಗಳನ್ನು ಅಚ್ಚುಮಾಡಿಸಿ ಖ್ಯಾತರಾಗಿದ್ದಾರೆ; ಕನ್ನಡ ಕಾವ್ಯ ಸಂಪತ್ತು ಬೆಳೆದಿದೆ. ಅವುಗಳಲ್ಲಿ ಉತ್ತಮವಾದವುಗಳ ಎತ್ತರಕ್ಕೆ ಅಥವಾ ಗುಣಸಂಪತ್ತಿಗೆ ಇದು ತೂಗೀತು ಎಂಬ ವಿಶ್ವಾಸ ನನಗಿಲ್ಲ. ಆಟದಲ್ಲಿ ನಾನೂ ನನ್ನ ಕಾಲದಲ್ಲಿ ಭಾಗವಹಿಸಿದವನು ಎಂದುಕೊಳ್ಳಲು ನನಗೆ ಸಂತೋಷ. ಈಚಿನ ಇನ್ನೊಂದು ಪುಸ್ತಕದಲ್ಲಿ 'ಮಮತೆ' ಎಂಬ ಪದ್ಯವನ್ನು ಬರೆದು ಸ್ವನಿವೇದನೆ ಮಾಡಿಕೊಂಡುದುಂಟು. ಆ ಮಮತೆ ಮಾತ್ರ ಇಲ್ಲಿನ ಗುಣ. ಇದನ್ನು ಕವಿತೆ ಎಂದು ಒಪ್ಪುವವರು ಒಪ್ಪಬಹುದು; ಬಿಡುವವರು ಬಿಡಬಹುದು. ಕೆಲವು ಜನ ಗಣ್ಯರಾದ ಸ್ನೇಹಿತರು ಆಗ ಇದನ್ನು ಸ್ವಾಗತಿಸಿದರು. ಅವರ ಸ್ನೇಹ ನನ್ನ ಬದುಕಿನ ಒಂದು ಭಾಗ್ಯವಾಗಿದೆ. ಅದರ ಕುರುಹಾಗಿ ಇದನ್ನು ಪುನಃ ಹೊರತರುತ್ತಿದ್ದೇನೆ.

ಕನ್ನಡ ಸಾಹಿತ್ಯದಲ್ಲಿ ನವೋದಯದ ಕಾಲ ಎಂಬ ಹೆಸರಿಟ್ಟು ಅದನ್ನು ಎತ್ತಿ ಹಿಡಿದದ್ದು ಒಂದಾಗಿದ್ದರೆ 'ಇದರೊಳ್ ಗುಣಂ ಅಣಮಿಲ್ಲಂ ಗಡ' ಎಂದು ಬೇರೊಂದು ಸಂದರ್ಭದಲ್ಲಿ ಮುದ್ದಣನು ಹೇಳಿದ ಮಾತನ್ನು ಬಳಸಿ ರಚನೆಯ ಬೇರೆ ದೃಷ್ಟಿ, ರೀತಿ, ಧೋರಣೆಯ ಸಾಹಸಗಳು ಈಚೆಗೆ ಬಂದಿವೆ. ತಾವು

ಬರೆಯುವವರೆಗೂ ಕವಿತೆಯೇ ಬರಲಿಲ್ಲ, ಇರಲಿಲ್ಲ ಎಂಬವರೆಗೂ ಇಂದಿನ ಕೆಲವು ವಾಣಿಗಳು ಬೆಳೆದಿವೆ. ಜೀವಂತವಾದ ಎಲ್ಲ ಸಾಹಿತ್ಯಗಳಲ್ಲಿಯೂ ಹಾಗೆಯೇ. 'ಕಾಲೇ ಕಾಲೇ ನವಾಚಾರಾ' ಅಥವಾ 'ನವೋ ನವೋ ಭವತಿ ಜಾಯಮಾನಃ' ಎಂಬ ಸೂತ್ರಕ್ಕೆ ಇದು ನಿದರ್ಶನ. ನಮ್ಮಜ್ಜನ ರೀತಿ ನನ್ನದಲ್ಲ! ನನ್ನವು ನನ್ನ ಮಕ್ಕಳ ಕಾಲದ್ದಲ್ಲ, ಅಲ್ಲವೆ? ನುಡಿ, ನಡೆ, ಎಡೆ, ಊಟ, ಮನಸ್ಸು ಎಲ್ಲ ಬೇರೆ. ಆಶೋತ್ತರ ಇಂಥ ವಿಷಯಗಳನ್ನು ಆರಿಸಿಕೊಂಡು, ವ್ಯಕ್ತಿಲಕ್ಷಣಗಳು ಕಾಣಿಸುವಂತೆ ಹಿಂದೆ ಕಾಣದಿರುತ್ತಿದ್ದ ಬಂಧಗಳಲ್ಲಿ ಸಣ್ಣವಾಗಿ, ದೊಡ್ಡವಾಗಿ, ಭಾವಗೀತೆ, ಕಥಾಕೃತಿ, ನಾಟಕಗಳ ರಚನೆ ಇರಲಿಲ್ಲ. ಅವು ನಮ್ಮ ಕಾಣಿಕೆಯಾಯಿತು. ಇನ್ನೂ ಹತ್ತು ವರ್ಷಗಳ ಕಾಲ, ಪೂರ್ಣ, ಪ್ರಗತಿಶೀಲ ಸಾಹಿತ್ಯ ಎಂಬ ಕೃತಿಗಳು ಬರುವವರೆಗೂ — ಇದಕ್ಕೆ ಸ್ವಲ್ಪ ಪ್ರೋತ್ಸಾಹವಿತ್ತು. ಆ ಕಾಲದಲ್ಲಿ ಇನ್ನೂ ಇಂಗ್ಲಿಷಿನ ಪಾಲ್‌ಗ್ರೇವರ **Golden Treasury** ಮುಂತಾದ ಸಂಕಲನಗಳ ಬಗೆಗೆ ನಮ್ಮ ದೇಶದಲ್ಲಿ ವಿಶ್ವಾಸವಿತ್ತು. ಇಂಗ್ಲಂಡಲ್ಲಿ ಪಾಲ್‌ಗ್ರೇವಿಗೇ ಅದು ತಪ್ಪಿ, ಎಜ್ರಾ ಪೌಂಡ್, ಎಲಿಯಟ್ ಮುಂತಾದವರ ರೀತಿಗಳೂ ಅವರ ತರುವಾಯದ ಸುಮಾರು 1930 ರಿಂದ ಪ್ರಾಧಾನ್ಯ ಪಡೆಯುತ್ತ ಬಂದ ಆಡೆನ್, ಸ್ಪೆಂಡರ್, ಆಮೇಲೆ ಡಿಲನ್ ಥಾಮಸ್, ಗ್ಯಾಸ್ಕಾಯ್ನ್, ಮೆಕ್ನೀಸ್ ಮುಂತಾದವರ ತಲೆಮೊರೆಯ ಕಾಲ ಬಂದಿತು. ಇಂದು ಅವರನ್ನು ದಾಟಿ ನಡೆದ ಊರುಗಳವರವೇ—ಕೃತಿಗಳು ಬರಲು ತೊಡಗಿ ಸಮಾಜ ಕ್ರಾಂತಿ ವಿಧಾನಗಳನ್ನು ರೂಪಿಸುವ, ತತ್ಸಾಧಕವೆಂದುಕೊಂಡ — ಕಡೆಗೆ ಪ್ರತಿನಿಧಿ, ವಾಣಿ ಎನ್ನುವ — ಛಂದೋವೃತ್ತಿ, ಸಾಹಿತ್ಯ, ವಿಮರ್ಶಕ ದೃಷ್ಟಿಗಳ ಮಾತು, ಬರಹ ಬಂದಿತು. ಭಾರತದಲ್ಲಿ—ಬಹುಶಃ ಬಂಗಾಳಿಯನ್ನು ಬಿಟ್ಟು—ಅವಕ್ಕೆ ಇನ್ನೂ ಪುರಸ್ಕಾರ ಅಥವಾ ಉತ್ಸಾಹ ತೊಡಗಿರಲಿಲ್ಲ. ನಮ್ಮಲ್ಲಿಯೂ ಕೆಲವರಿಗೆ ಆ ಹೊಸ ವಾಣಿಗಳ ಪರಿಚಯವಿದ್ದರೂ ಈ ನವೋದಯದ್ದೆಂಬ ರೀತಿಯನ್ನು ನೆಲೆಗೊಳಿಸಿದ ತರುವಾಯ ಮಾತ್ರ ಕಾಲ ಕ್ರಮದಲ್ಲಿ ಮುಂದಿನ ಹೆಜ್ಜೆ ಬೇಕಾದರೆ ಇಟ್ಟುಕೊಳ್ಳಬಹುದಾದೀತು ಎನ್ನಿಸಿತು. ಗಮಕ ರೀತ್ಯಾ ಹಿಂದಿನ ಷಟ್ಪದಿ ಗ್ರಂಥಗಳು ಪ್ರಚಾರಕ್ಕೆ ಬಂದಿದ್ದರೂ ಹೊಸಕಾಲದ ಬರವಣಿಗೆಗೇ ವೇದಿಕೆಗಳಿಂದ ಆ ಪ್ರಚಾರ ಬರುವುದಕ್ಕೆ ಸ್ವಲ್ಪ ಕಾಲ ಹಿಡಿಯಿತು: ನಮ್ಮ ಕಡೆ ಪ್ರಧಾನವಾಗಿ ಶ್ರೀ ಪುಟ್ಟಪ್ಪನವರೂ ಉತ್ತರ ಕರ್ನಾಟಕದ ಕಡೆ ಶ್ರೀ ಬೇಂದ್ರೆಯವರೂ ತಮ್ಮ ಕವಿತೆಗಳನ್ನು

ಓದಿ ಈ ಬಗೆಗೆ ಉತ್ಸಾಹವನ್ನು ಸೆಳೆದರು. ಅವೆರಡೂ ವಿಶಿಷ್ಟ ಶೈಲಿಗಳು. ನಮ್ಮಲ್ಲಿ ಕೆಲವರು ಗೀತೆಗಳನ್ನು ರಾಗಗಳಿಗೆ ಹೊಂದಿಸಿ ಬರೆಯತೊಡಗಿದ್ದರು. ಇದರ ಅನುಕೂಲ ಪ್ರತಿಕೂಲಗಳು ಅನೇಕ. ದಾಸರ ಪದ, ತ್ಯಾಗರಾಜರ ಕೀರ್ತನೆಗಳು ಇವುಗಳಲ್ಲಿ ಇರುತ್ತಿದ್ದ ಖಚಿತ ರಾಗತಾಳಗಳ ಕಟ್ಟಿಗೆ ಸಿಕ್ಕಿಸದೆ, ಬರಿಯ ಲಯಬಂಧದ ಗತಿಗಿಂತ ಸ್ವಲ್ಪ ಹೆಚ್ಚು ಗೇಯತೆಯುಳ್ಳ (**Recitative, Cantata** ಕೂಡ ಅಲ್ಲ) ಧಾಟಿಗಳನ್ನು ನಿರ್ಮಾಣ ಮಾಡಿಕೊಂಡು ಸಾಹಿತ್ಯದಲ್ಲಿ ಈ ಹೊಸ ಮಾರ್ಗವನ್ನು ಬಳಕೆಗೆ ತಂದು, ಹೊಸ ಕಾಲದ ನಡೆಯನ್ನೂ ಭಾವಗಳನ್ನೂ ಹೊರಕ್ಕೆ ತರಬೇಕು ಎಂದು ಪ್ರಯೋಗ ನಡೆದು ಕೆಲವು ಸುಂದರ ಗೇಯಗಳು ಹುಟ್ಟಿದುವು. ಅವಕ್ಕೆ ಯಾರೂ ಸಿಗ್ಗು ಪಡಬೇಕಿಲ್ಲ ;— ಕೊರಲಿಗೆ ಸುನಾದ ಸುಳಿಯದ, ಕಿವಿ ಮದಡಾದ ನಿರ್ಭಾಗ್ಯರು ಹೊರತು. ಆದರೆ, ಅದರ ಗುಣ ಎಷ್ಟು ಜನಪ್ರಿಯವಾಗಬಹುದಿತ್ತೊ, ಅಷ್ಟು ಆಗಲಿಲ್ಲ. ಕನ್ನಡಿಗರ ಅಭಿಮಾನಶೂನ್ಯತೆ ಎಲ್ಲ ರಂಗಗಳಲ್ಲಿಯೂ ಹೀಗೇ—ಎಂದಿಗೂ. ಅವರಿಗೆ ಯಾವುದೊ ಶಾಪವಿರಬೇಕು ... ಕಾವ್ಯವೆಂದರೆ ವೃತ್ತ, ಕಂದ, ಷಟ್ಪದಿ, ಸಾಂಗತ್ಯ, ತ್ರಿಪದಿಗಳಲ್ಲಿ ಬರೆದ ಹಿಂದಿನ ಬಗೆಯ ರಾಮಾಯಣ, ಭಾಗವತ, ಪುರಾಣಗಳ ಕಥೆಗಳುಳ್ಳವೇ ಕವಿತೆ ಎಂದುಕೊಂಡಿದ್ದ ಕಾಲಕ್ಕೆ ಈ ಪ್ರಾಸರಹಿತ, ಕ್ರಮರಹಿತ, ನೇರ ನುಡಿ, ಪದ, ಕೃತಿ, ಕವಿತೆಯೆಂದು ಹೇಗೆ ಒಪ್ಪಬೇಕು? ಬ್ಲ್ಯಾಂಕ್ ವರ್ಸ್ ಎಂಬುದನ್ನು ಬೋಳು ಕವಿತೆ ಎಂದರು ... ಇಂದಿನವರ ಓಲು ಮತ್ತೊಂದು ತೀರಿನದು—ಕಮ್ಮಿಂಗ್ಸ್, ಕಾರ್ಲೋಸ್ ವಿಲಿಯಮ್ಸ್, ಗಿನ್ಸ್‌ಬರ್ಗ್ ಮುಂತಾದವರ ಜಾಡಿನದು.

ಸ್ವಲ್ಪ ಕಾಲದಲ್ಲಿಯೇ ದೇಶಪ್ರೇಮದ ಗೀತೆಗಳನ್ನು ಹೆಚ್ಚು ಬರೆಯಬೇಕಾದ ಅಗತ್ಯ ಒದಗಿ ಯಾವುದನ್ನೂ ದೊಡ್ಡ ಗಂಟಲಲ್ಲಿ ನುಡಿದು ಜನವರ್ಗಕ್ಕೆ ಕಳಕಳಿ ತರಬೇಕಾಯಿತು ; ಸುಶ್ರಾವ್ಯವಾಗಿ ಹಾಡಿಬಿಟ್ಟರಾಯಿತೆಂಬಂತೆಯೂ ಪ್ರಚೋದನೆ ಬೆಳೆಯಿತು. ಗೇಯಗುಣವೇ ಅಗತ್ಯವಿಲ್ಲ, ಅದು ಕವಿತೆಗೆ ಹಾನಿ, ಇವೆರಡೂ ಬೇರೆ ಬೇರೆ ಕಲೆಗಳು ಎಂಬ ಅಭಿಪ್ರಾಯ ಬೆಳೆದು ಇವೊತ್ತು ಕವಿತೆಯಿಂದ ಗೇಯತೆ ಗಡಿಪಾರಾಗಿದೆ. ಅರ್ಥ, ಛಂದ, ರೀತಿ, ನೀತಿ, ಯಾವುದೂ ಲಕ್ಷ್ಯವಿಲ್ಲವೆಂಬ ಮಹಾನುಭಾವತ್ವವೂ ವರ್ಧಿಸಿದೆ. ಇಲ್ಲಿನ ಕವನಗಳಲ್ಲಿ ಕೆಲವುಗಳಲ್ಲಿನ ಭಾವ ತೆಳುವಾಗಿಯೊ ಆಳವಾಗಿಯೊ ಗೇಯತೆಯೊಡಗೂಡಿ ಹುಟ್ಟಿದ್ದು. ಹಿಂದಿನ ಕಾಲದ ಕೃತಿಗಳಲ್ಲಿ ಇರುತ್ತಿದ್ದ ದೈವಶ್ರದ್ಧೆ,

ಪುಣ್ಯ ಪಾಪಗಳ ಎಣಿಕೆ, ಪುರಾಣಕಾಲದ ಸಂಗತಿಗಳ ಪ್ರಕಾಶನ — ಇಲ್ಲಿಲ್ಲ. ಬಹುಶಃ ಈ 40 ವರ್ಷಗಳಲ್ಲಿ ದೇವರು, ಆತ್ಮ, ಮುಕ್ತಿ, ಪಾಪ-ಪುಣ್ಯ, ಸ್ವರ್ಗ-ನರಕ ಮುಂತಾದ ಹೆಸರುಗಳನ್ನು ಉಚ್ಚರಿಸುವ ಕವಿತೆ ಶೂನ್ಯವಾಗಿದೆ. ಕೆಲವಾದರೂ ವಿಚಾರ ಪ್ರಮುಖವಾಗಿವೆ. ವ್ಯಕ್ತಿ ವೈಚಕ್ಷಣ್ಯಕ್ಕೆ ಅದೇ ಆಗ ಪ್ರಾಧಾನ್ಯ ಬರುತ್ತಿತ್ತು. ಅದೂ ಹಿಡಿಹಿಡಿದು, ಅಡಗಿಸಿ ಅಡಗಿಸಿ. ಬೆದರಿಕೆಯಿಂದಲ್ಲ, ಜನಕ್ಕೆ ಸಣ್ಣಸಣ್ಣ ಒಬ್ಬೆಗಳಲ್ಲಿ ಕೊಡಬೇಕೆಂದು. ನೀರಿಳಿಯದ ಗಂಟಲಲ್ಲಿ ಕಡುಬನ್ನು ತುರುಕಬಾರದೆಂದು ಮನೋರಮೆ ನುಡಿದಿದ್ದಳು. ದಿನಚರಿಯ ಜೀವನಕ್ಕೆ ಸಾಮಾನ್ಯ ಜನರ ರೀತಿ ನೀತಿಗಳ ಕಡೆ ಹೆಚ್ಚು ಒಲುಉಂಟಾಗುತ್ತಿದ್ದ ಕಾಲ; ಹಾಡೆಂದುಕೊಂಡು ಒಂದು ಪಲ್ಲವಿ, ಅನುಪಲ್ಲವಿ 3-4 ಚರಣ ಇರುತ್ತಿದ್ದಾಗಲೂ ಭಾವ ಬೆಳೆಯುವುದಕ್ಕೊ, ಬೇರೊಂದು ರೀತಿಯಲ್ಲಿ, ಭಾವದಲ್ಲಿ ಕೂಡ ಮುಗಿವುದಕ್ಕೊ ಮನಸ್ಸು ಹರಿವ ರೀತಿ ಬೆಳೆಯಿತು. ಅದಕ್ಕೆ ತಕ್ಕಂತೆ ತಾಳ ಶಕ್ಯವಾಗದಿದ್ದರೆ ಹೋಗಲಿ,—ರಾಗವನ್ನಾದರೂ ವ್ಯತ್ಯಾಸ ಮಾಡಿಕೊಂಡು ಹಾಡಿದರೆ ಆದೀತು. . . ರಾಗ ತಾಯಿ, ತಾಳ ತಂದೆ ಎನ್ನುತ್ತ, ತಾಳ ತಪ್ಪಿದವು ಎಂದರೆ ಅಪ್ಪನಿಲ್ಲದವು ಎಂದು ಕೂಡ ಕರೆದವರುಂಟು. ರಾಗವ್ಯತ್ಯಾಸ ಮಾಡದಾಗಲೂ ಭಾವದ ಒತ್ತಡ ನಡಸಿದಂತೆ ರಾಗದ ಸ್ವರೂಪವನ್ನು ತೋರುವಂತೆ ಅವನ್ನು ಧ್ವನಿವಿಲಾಸ ಹಾಯಿಸಿ ಹಾಡಿದ್ದರೆ ಸಾರ್ಥಕ ಪ್ರಯೋಗಗಳಾಗುತ್ತಿದ್ದುವು. ಆ ಅವಕಾಶ ಬರಲಿಲ್ಲ. ಏನೊ ಹೇಗೊ? ಹುಸಿಗಾಯಿಗಳ ಹಾಗೆ. ನಮ್ಮ ಸಂಗೀತದ ತಾಳಗಳು ನಮ್ಮ ಈ 50 ವರ್ಷಗಳ ಕಾಲದ ನಡೆಯುವಲ್ಲವೆಂಬುದನ್ನು ಬಹುಮಂದಿ ಇನ್ನೂ ಗಮನಿಸಿಲ್ಲ. ಆದರೆ ಆ ಕಾಲದ ಲಕ್ಷಣವನ್ನು ತೋರಿಸುವುದಕ್ಕಾಗಿಯಾದರೂ ಇಲ್ಲಿನ ಕೆಲವು ಒದಗಿಯಾವು. ನಿಜವಾಗಿ ಅದು ಸಂಧಿಕಾಲ. ಹಳತಿನಿಂದ ಹೊಸತಿಗೆ ಕಣ್ಣು, ದನಿ ತೆರೆದದ್ದು ಕಾಲದ ಒಂದು ತುಣುಕಾದ ನಮ್ಮ ನಿವೇದನೆಯಿಂದ.

ಚಂಪೂ, ಷಟ್ಪದಿ ಕಾಲ ಮುಗಿದು ವೃತ್ತ ಕಂದಗಳ ಬಿಗಿಕಟ್ಟು ಹೊಸ ಕನ್ನಡಕ್ಕೆ ಹೊಂದದೆಂದು ಅರ್ಧ ಹೊಸ, ಅರ್ಧ ನಡು ಕನ್ನಡ ರೂಪಗಳನ್ನು ಬಳಸಿ ಆ ಕಾಲದ ಕೃತಿಗಳು ಬಂದವು. ವ್ಯಾಕರಣ ಅಲಂಕಾರ ಗ್ರಂಥಗಳು ಅಸಾಧುವೆಂಬುದನ್ನು ಪೂರ್ತಿ ತಳ್ಳಿಹಾಕಿದರೂ ಸಂಪ್ರದಾಯದವರನ್ನೂ ಜೊತೆಗೆ ತೆಗೆದುಕೊಳ್ಳಬೇಕೆಂಬ ಮನಸ್ಸಿತ್ತು. ಮೊದಲ ಆವೃತ್ತಿಯಲ್ಲಿ ಕಾಣು

ತ್ತಿದ್ದ ಆ ರೂಪಗಳಲ್ಲಿ ಹಲವನ್ನು ಮಾರ್ಪಡಿಸಿದ್ದೇನೆ. ಕೆಲವು ಕಡೆ ಇನ್ನೂ—ಉದಾ. 'ನನ್ನ' ಎಂಬಲ್ಲಿ 'ಎನ್ನ' ಇದೆ; 'ಹಾಡು' ಎಂಬಲ್ಲಿ 'ಪಾಡು'—ಇದೆ. ಕೆಲ ಅನುಸ್ವಾರಗಳೂ ಆಧುನಿಕವೆನ್ನಲಾಗದವು. ಅವು ಕಾಲಹತ (dated). ಅವನ್ನು—ಸ್ವರಸಾಮರಸ್ಯಕ್ಕಾಗೆಂದೆನ್ನಲೇ—ಉಳಿಸಿದ್ದೇನೆ. ಈ ವಯಸ್ಸಿನಲ್ಲಿ ನನಗೆ ಸಹಜವಾಗಿ ನನ್ನಂತೆಯೇ ಇನ್ನೂ ಕೆಲವು ಪ್ರಾಚೀನತೆಗಳು ಉಳಿದಿವೆ. ನನ್ನ ಸ್ನೇಹಿತರೊಬ್ಬರು "ನೀವಿನ್ನೂ 'ಏನು'—ಬುದ್ಧಿ ಇಟ್ಟುಕೊಂಡಿದ್ದೀರಿ" ಎಂದರು. ಎಷ್ಟು, ಅಷ್ಟು—ಎಂಬವು ಇನ್ನೂ ನಮ್ಮ ಕಿವಿಗೆ ಕಷ್ಟವಾಗಿಯೇ ಇವೆ.— ಪದ್ಯದ ಸಾಲುಗಳಲ್ಲಿ. ಕನ್ನಡ ಕಿವಿಗಳು ಪೂರ್ತಿ ಉದ್ದವಾಗಲು ಒಪ್ಪುತ್ತಿಲ್ಲ. ವ್ಯಂಜನಾಂತವಾದ ಶಬ್ದರೂಪ ನಷ್ಟವಾಗಿ ಛಂದಸ್ಸಿನ ಮೇಲೆ ಏನು ಪರಿಣಾಮವುಂಟುಮಾಡಿತೆಂಬುದನ್ನು ಯಾರಾದರೂ ಬರೆದರಾಗುತ್ತಿತ್ತು. ಪೂರ್ತಿ ಇಂದಿನ ಕನ್ನಡ ನುಡಿಗಟ್ಟನ್ನೂ ಈ **ಗೀತಗಳಲ್ಲಿ** ಬಳಸುವುದಕ್ಕಾಗಿಲ್ಲ. ಬಳಸಬೇಕೆಂದರೆ;—ಬೇರೆ ಕವಿತೆಗಳನ್ನೇ ಬರೆಯಬೇಕಾಗಿ ಬರುತ್ತದೆ ಯಾದ್ದರಿಂದ. ಈ ಸಂಗತಿಯನ್ನು ದಯಮಾಡಿ ಮನಸ್ಸಿಗೆ ತಂದುಕೊಂಡು ಓದುವವರು ಇದನ್ನು ಸ್ವೀಕರಿಸಬೇಕೆಂದು ಬೇಡುತ್ತೇನೆ. ಉಡೆ ಬಹು ಸ್ವಲ್ಪ ಹೊಸದಾದರೂ ಮಾತಿನಲ್ಲಿ, ಫ್ಯಾಷನುಗಳಲ್ಲಿ ಈಗ ಪೂರ್ತಿ ವ್ಯತ್ಯಾಸವಾಗಿದೆ; ಮುಖಮುಂಡನ, ಕೇಶಮುಂಡನ, ವೇಷ ಈ 50 ವರ್ಷಗಳಲ್ಲಿ ಎಷ್ಟುಸಲ ಬದಲಾಗಿಲ್ಲ! ಯಾವುದೇ ತೆರನಾದರೂ ಜೀವಗುಣ ಒಂದೇ. ಅಲ್ಲಿಯೂ ಎಲ್ಲಿಯೂ ಗಂಡು ಗಂಡೇ ಹೆಣ್ಣು ಹೆಣ್ಣೇ. ಮೂಲತಃ ಮಾನವವಾಗಿ ಪ್ರಕೃತಿಯನ್ನು ನೋಡುವ ರೀತಿ, ಅದಕ್ಕೆ ಮಿಡಿಯುವ ಮನಸ್ಸು, ಸುಖ ದುಃಖ, ಆಸೆ ಆಳದಲ್ಲಿ ಅಂತರ್ಯದಲ್ಲಿ ಒಂದೇ ಧಾತುವಿನವು. ಹಾಗಿರುವಲ್ಲಿಯಾದರೂ ಇವಕ್ಕೆ ಓರ್ಪು ದೊರಕೀತೆಂಬ ಚಪಲ. ಹಿಂದಿನ ಕಾಲದ ಒಂದು ಪುಸ್ತಕವೆಂದು ಇದನ್ನು ಹೊಸತಾಗಿ ಪ್ರಕಟಿಸುತ್ತಿರುವ ಈಗ ಸ್ವವಾದ — apologia—ಎಂದು ಎಣಿಸುವವರು ಎಣಿಸಬಹುದು. ಹೇಗೊ: ಇದು ಎರಡನೆಯ ಆವೃತ್ತಿ ಕಂಡಿತು. ಧೈರ್ಯ ಮಾಡಿ ಇದನ್ನು ಎತ್ತಿಕೊಂಡು ಪುನರ್ಮುದ್ರಣ ಮಾಡಲೊಪ್ಪಿದ ಶ್ರೀ ಸತ್ಯನಾರಾಯಣರಾವ್ ಸೋದರರಿಗೆ ನಾನು ಕೃತಜ್ಞ. ಹಿಂದಿನ ಅಚ್ಚಿನಂತೆ ಇದಕ್ಕೆ ಶೃಂಗಾರ ಮಾಡುವುದು ತುಟ್ಟಿ, ಎಲ್ಲ ಬೆಲೆಗಳೂ ಒಂದಕ್ಕೆ ಐದರಷ್ಟು, ಹತ್ತರಷ್ಟು ಹೆಚ್ಚಿವೆ. ಆ ಸಾಹಸಕ್ಕೆ ಹೋಗದೆ ತಕ್ಕಮಟ್ಟಿನ ಒಪ್ಪದಲ್ಲಿ ಇದನ್ನು ಹೊರತರುತ್ತಿದೆ. ಇಷ್ಟಾದರೂ ಸಾಧ್ಯವಾದ ಭಾಗ್ಯಕ್ಕೆ ನಾನು ಋಣಿ.

ಮೊದಲ ಮಾತು

ವೆಂಕಟಪ್ಪನವರ ಚಿತ್ರಗಳ ಛಾಯಾ ಚಿತ್ರಗಳನ್ನು (Photographs) ಬಳಸಿಕೊಳ್ಳಲು ಒಪ್ಪಿಕೆ ಕೊಟ್ಟ ವೆಂಕಟಪ್ಪನವರ ಸೋದರಳಿಯಂದಿರು ಶ್ರೀ ರಾಮರಾಜು ಅವರಿಗೆ ನನ್ನ ಧನ್ಯವಾದಗಳು.

ಇದನ್ನು ಮೈಸೂರಿನ ವೆಸ್ಲಿ ಪ್ರೆಸ್ಸಿನವರು ಪ್ರೀತ್ಯಾದರಗಳಿಂದ ಅಚ್ಚು ಮಾಡಿಕೊಟ್ಟಿರುವುದಕ್ಕಾಗಿ ಅವರಿಗೆ ವಂದನೆಗಳು.

ಬೆಂಗಳೂರು
ಅಕ್ಟೋಬರ್ 2, 1973

ವಿ. ಸೀ.

ವಿಜ್ಞಾಪನೆ
(ಮೊದಲ ಮುದ್ರಣಕ್ಕೆ)

ಇಲ್ಲಿ ಪ್ರಕಟಿಸಿರುವ ಕವನಗಳೆಲ್ಲ ಬಹುಶಃ ಹಾಡುಗಳಾಗಿಯೇ ಹುಟ್ಟಿದವು. ನಾನು ಕೇಳಿರುವ 'ರಾಗ'ಗಳು ಯಾವ ಭಾಗದಲ್ಲಿ ಸವಿಯಾಗಿವೆಯೆಂದೂ ಅರ್ಥಪೂರ್ಣವಾಗಿವೆಯೆಂದೂ ನನಗೆ ತೋರಿದುವೊ ಅಲ್ಲಿ ಧಾಟಿಯನ್ನು ಕಲ್ಪಿಸಿಕೊಂಡು ಹಲವನ್ನು ಬರೆದಿದ್ದೇನೆ. ಅವುಗಳನ್ನು ಹಾಡಿಕೊಳ್ಳದಿದ್ದರೆ ಇರಬಹುದಾದ ಅಲ್ಪ ಸ್ವಲ್ಪ ಸ್ವಾರಸ್ಯವನ್ನೂ ಅನುಭವಿಸುವುದು ಕಷ್ಟ ವಾದೀತು. ಪ್ರತಿಯೊಂದರಲ್ಲಿಯೂ ಗುರುತಿಸಬಹುದಾದ ಒಂದು ಬಗೆಯ ಓಟವೂ ಕಟ್ಟೂ ಇರುವುವೆಂದು ಹೇಳಬಲ್ಲೆನಾದರೂ ವಿಶೇಷವಾಗಿ ಕೆಲವಕ್ಕಾದರೂ, ಮಾತ್ರೆ ಗಣಗಳ ಲೆಕ್ಕವನ್ನು ಹಾಕಿ ನಿಷ್ಠುರವಾಗಿ ತೂಗುವ ಪ್ರಯತ್ನವು ಸಲ್ಲದಾದೀತು.

ಇಲ್ಲಿನ ಕೆಲವು ಶಬ್ದರೂಪಗಳೂ ಮಿಶ್ರ ಪ್ರಯೋಗಗಳೂ ಕೆಲವರಿಗೆ ಅಸಾಧುವೆಂದು ತೋರಿಯಾವು. ದೃಷ್ಟಿಭೇದದಿಂದ ಗುಣಭೇದವು ತೋರುವುದು ಸಹಜವೇ. ಆದರೆ ಕೆಲವು ಬಳಕೆಯಲ್ಲಿದ್ದು ನನ್ನ ಅರ್ಥವನ್ನು ಚೆನ್ನಾಗಿ ಹೇಳುವುವು; ಕೆಲವಕ್ಕೆ ಆಯಾ ರಾಗದ ಧಾಟಿಗಳಲ್ಲಿ ಜೀವಸ್ಥಾನವಿದೆ; ಕೆಲವಕ್ಕೆ ನನಗೆ ಬೇಕಾದ ಒಂದು ಬಗೆಯ ನಾದಗುಣವಿದೆ ಎಂದು ನಾನು ಎಣಿಸಿರುವುದರಿಂದ, ಅವುಗಳನ್ನು ಉಪಯೋಗಿಸಿಕೊಂಡಿದ್ದೇನೆ. ನೂರಾರು ವರ್ಷಗಳಿಗೆ ಹಿಂದೆ ರಚಿತವಾಗಿ ಹಿಂದೆಬಿದ್ದ ಕಾವ್ಯಭಾಷೆಯ ಆಧಾರದ ಮೇಲೆ ಏರ್ಪಟ್ಟ ವ್ಯಾಕರಣ ಸೂತ್ರಗಳನ್ನೂ, ಛಂದಸ್ಸಿನ ಕಟ್ಟಡಕ್ಕೆ ಸಂಬಂಧಿಸಿದ ನಿಯಮಗಳನ್ನೂ ಕಣ್ಣು ಚುಚ್ಚುವಂತೆ ಮುಂದೆ ಹಿಡಿಯದೆ; ಜೀವಂತವಾದ, ದಿನ ದಿನವೂ ಬೆಳೆಯುತ್ತಿರುವ, ಬನಿಗೊಳ್ಳುತ್ತಿರುವ,—ಬನಿಗೊಳ್ಳಬೇಕಾಗಿರುವ—ಈಗಿನ ಭಾಷೆಯ ಗತಿಗೆ ತಡೆಯಾಗಿ ತಂದೊಡ್ಡದೆ; ಕವಿತೆಯಲ್ಲಿ ಕೇವಲ ಸಂಪ್ರದಾಯಬದ್ಧವಾದ ಶಬ್ದರೂಪಕ್ಕೂ ಸಂಧಿ ನಿಯಮಗಳಿಗೂ ಕಡೆಗೆ ನಿರ್ದುಷ್ಟತೆಗೂ ಮೀರಿದ ಗುಣವೊಂದಿದೆ ಎಂಬುದನ್ನು ಒಪ್ಪುವವರು ಯಾರೂ ಇಲ್ಲಿನ ದೋಷಗಳ ಕಡೆಗೆ ಹೆಚ್ಚು ಗಮನ ಹರಿಸಲಾರರೆಂದಿದ್ದೇನೆ.

ವಿಜ್ಞಾಪನೆ

ಇಲ್ಲಿರುವ ಹಲವು ಗೀತಗಳು ಈಗಾಗಲೆ **ಪ್ರಬುದ್ಧ ಕರ್ಣಾಟಕ**ದಲ್ಲಿಯೂ, ಕೆಲವು **ದೇಶೀಯ ವಿದ್ಯಾಶಾಲಾ ಪತ್ರಿಕೆ, ಸ್ಕೌಟು ಗೀತೆಗಳು, ರಾಷ್ಟ್ರಬಂಧು, ಅರುಣ**—ಇವುಗಳಲ್ಲಿಯೂ ಮುದ್ರಿತವಾಗಿವೆ. ಅವುಗಳನ್ನು ಪ್ರಕಟಿಸಿ ಪ್ರೋತ್ಸಾಹವಿತ್ತುದಕ್ಕಾಗಿ ಆ ಸಂಸ್ಥೆಗಳ ಅಧಿಕಾರಿಗಳಿಗೆ ನಾನು ಕೃತಜ್ಞನಾಗಿದ್ದೇನೆ. ಅದರಲ್ಲಿಯೂ **ಪ್ರಬುದ್ಧ ಕರ್ಣಾಟಕ**ಕ್ಕೂ ಅದರ ಸಂಪಾದಕರೂ ನನ್ನ ಪೂಜ್ಯ ಮಿತ್ರರೂ ಆದ ಶ್ರೀಮಾನ್ ಎ. ಆರ್. ಕೃಷ್ಣಶಾಸ್ತ್ರಿಗಳಿಗೂ ನಾನು ಸರ್ವಥಾ ಋಣಿಯಾಗಿದ್ದೇನೆ. ಸುಮಾರು ನಲವತ್ತು ಗೀತಗಳಿಗೆ ಇದೇ ಮೊದಲ ಮುದ್ರಣ. ಇಲ್ಲಿ ಭಾಷಾಂತರವೆಂದೇ* ಸೂಚಿಸದಿರುವ 'ಶಿವನ ಕೋಪ' ಎಂಬ ಒಂದು ಗೀತವು ಕಿಪ್ಲಿಂಗ್ ಕವಿಯ "Last Came the God" ಎಂಬುದರ ಆಧಾರದ ಮೇಲೆ ಬರೆದದ್ದು. ಆದರೂ ಅಲ್ಲಿನ ಆಶಯ ಭಾವಪ್ರಕಾಶನಗಳಿಗೂ ಇಲ್ಲಿನವಕ್ಕೂ ವ್ಯತ್ಯಾಸವಿದೆ. ಇತರ ದಿವ್ಯ ವಾಣಿಗಳ ನೆಳಲೂ ಅಲ್ಲಿ ಇಲ್ಲಿ ಒಂದೆರಡು ಕಡೆ ಕಾಣಬಹುದು.

ಅಚ್ಚಾಗುವ ಮುಂಚೆ ಇದನ್ನು ಒಂದು ಸಲ ದಯವಿಟ್ಟು ನೋಡಬೇಕೆಂದೂ ಒಂದು ಮುನ್ನುಡಿ ಬರೆದುಕೊಡಬೇಕೆಂದೂ ಕೇಳಿದ ಕೂಡಲೇ ನನ್ನ ಪೂಜ್ಯ ಗುರುಗಳಾದ ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರು ಒಪ್ಪಿ, ತಿದ್ದಿ, ಮುನ್ನುಡಿ ಬರೆದು ನನಗೆ ಮಹೋಪಕಾರ ಮಾಡಿದ್ದಾರೆ. ಅವರೇ ನನಗೆ ಸಾಹಿತ್ಯದಲ್ಲಿ ಅಭಿರುಚಿ ಹುಟ್ಟಿಸಿ ಅದರ ತಾನಕ್ಕೆ ಹೃದಯವು ಮಿಡಿಯುವಂತೆ ಮಾಡಿದವರು. ಈ ಸಣ್ಣ ಪುಸ್ತಕವು ಶಿಷ್ಯನಾದ ನಾನು ಅವರಿಗೆ ಅರ್ಪಿಸುವ ಅಲ್ಪ ಕಾಣಿಕೆಯಾದರೂ ಅವರು ಇದನ್ನು ಸ್ವೀಕರಿಸಿ ನನ್ನನ್ನು ಅನುಗ್ರಹಿಸುವರೆಂದು ನಂಬಿದ್ದೇನೆ.

ನನ್ನ ಎಲ್ಲ ಸುಖಸಂತೋಷಗಳಿಗೂ ಬಹುವಾಗಿ ನನ್ನ ಸ್ನೇಹಿತರೇ ಎಂದೆಂದೂ ಕಾರಣರಾಗಿರುವರು. ಇಲ್ಲಿ ವ್ಯಂಜಿತವಾಗಿರುವ ಭಾವಗಳು ಅವರ ಸ್ನೇಹದಲ್ಲಿ ಬೆಳೆದ ನನ್ನ ಮನಸ್ಸಿನ ನಿವೇದನವೆಂದು ಕೃತಜ್ಞತೆಯಿಂದ ತಿಳಿಸಿ ಆ ಋಣಕ್ಕೆ ಬಾಗುತ್ತೇನೆ.

ಪ್ರಾರ್ಥಿಸಿದ ಕೂಡಲೆ ತಮ್ಮ ಉತ್ತಮ ಚಿತ್ರಗಳನ್ನು ಉಪಯೋಗಿಸಿಕೊಳ್ಳಲು ಉದಾರ ಮನಸ್ಸಿನಿಂದ ಅನುಮತಿಯಿತ್ತ ಶ್ರೀಮಾನ್ ಕೆ. ವೆಂಕಟಪ್ಪ

* Eg. Hardy, Swinburne, Shelley, Tennyson

ಸವರಿಗೂ, ಶ್ರೀಯುತ ನಂದಲಾಲ ಬಸು ಅವರಿಗೂ ನಾನು ಎಷ್ಟು ಕೃತಜ್ಞನಾಗಿದ್ದರೂ ಸಾಲದು. ಉತ್ತಮ ಕಲಾಕೃತಿಯ ಸ್ಥೂಲ ಪರಿಚಯವನ್ನೂ, ಅಚ್ಚಿನಲ್ಲಿ, ಅದರಲ್ಲಿಯೂ ನಮ್ಮ ದೇಶದಲ್ಲಿ ಮಾಡಿಕೊಡುವುದು ಕಷ್ಟ. ಆದರಲ್ಲಿಯೂ ಈ ಚಿತ್ರಕವರ್ಯರ ಒಟ್ಟು ಕೃತಿ ಹೋಗಲಿ, ಅವರ ರೇಖೆಗಳ ಜೀವಕಳೆಯನ್ನು ಸೂಚಿಸುವುದು ಕೂಡ ಅಸಾಧ್ಯ. ಈ ಅಚ್ಚಿನಲ್ಲಿ ಇರುವ ಎಲ್ಲ ಕೊರತೆಗಳನ್ನೂ ಮನ್ನಿಸಬೇಕೆಂದು ಈ ಕಲಾಚಾರ್ಯರನ್ನು ನಾನು ವಿನಯದಿಂದ ಪ್ರಾರ್ಥಿಸುತ್ತೇನೆ. ಈ ಮಹನೀಯರ ಚಿತ್ರ ಕೃತಿಗಳಲ್ಲಿನ ಭಾವ, ನಯ, ಗಾಂಭೀರ್ಯ ಭವ್ಯಗುಣಗಳಲ್ಲಿ ನೂರರಲ್ಲಿ ಒಂದು ಪಾಲೂ ಅಚ್ಚಿನಲ್ಲಿ ಬಾರದಿರುವುದಕ್ಕೆ ವಿಷಾದಪಟ್ಟು ಅವರ ಕ್ಷಮಾಪಣೆ ಬೇಡುತ್ತಿರುವೆನಾದರೂ, ಇಲ್ಲಿಯೂ ಅವು ತೇಜೋಮಯವಾಗಿಯೇ ಇರುವುವೆಂದು ಜನರು ಆನಂದಪಟ್ಟಾರೆಂಬ ಭರವಸೆಯು ಆ ವಿಷಾದವನ್ನು ಸ್ವಲ್ಪ ತಗ್ಗಿಸಿದೆ. ಯಾರೆಷ್ಟು ವಿಧವಾಗಿ ಕೆಡಿಸಿದರೂ ಉತ್ತಮ ಕೃತಿಗಳ ಸೌಂದರ್ಯಕ್ಕೆ ಚ್ಯುತಿಯಿಲ್ಲ. ಕಾಲವನ್ನೂ ದೇಶವನ್ನೂ ಜನರ ಅಭಿಪ್ರಾಯವನ್ನೂ ಜಯಿಸಿ ಅವು ಅಮೃತವಾಗುವುವು.

ಈ ಪುಸ್ತಕವನ್ನು ಆದಷ್ಟು ಚೆನ್ನಾಗಿ ಮಾಡಲು ಸಲಹೆ ಕೊಟ್ಟ ಎಲ್ಲ ಮಿತ್ರರಿಗೂ; ಇದರ ಎಲ್ಲ ಹೊಣೆಗಳನ್ನೂ ಹೊತ್ತು ನನ್ನ ಬೆನ್ನ ಹಿಂದೆ ನಿಂತು ಕೆಲಸಮಾಡಿರುವ ಪ್ರಕಾಶಕರಾದ ಕರ್ಣಾಟಕ ಸಾಹಿತ್ಯ ಪ್ರಕಟನ ಮಂದಿರದ ಸ್ನೇಹಿತರಿಗೂ; ನಾನು ಕೊಟ್ಟ ತೊಂದರೆಗಳನ್ನೆಲ್ಲಾ ಸಹಿಸಿ ಅಚ್ಚನ್ನು ಕಟ್ಟಿ, ಬಿಚ್ಚಿ ಹೊಂದಿಸಿಕೊಂಡು ಇಷ್ಟು ಚೆನ್ನಾಗಿ ಮುದ್ರಿಸಿರುವ ಬೆಂಗಳೂರು ಪ್ರೆಸ್ಸಿನವರಿಗೂ ನನ್ನ ಅನೇಕಾನೇಕ ವಂದನೆಗಳು.

ಬೆಂಗಳೂರು
ಮಾರ್ಚಿ 16, 1931

ವಿ. ಸೀ.

ಗೀತಗಳು

ಸಿಪಾಯಿಗಳ ಹಾಡು

1

ಹೋರುವೆವು ಮಲ್ಲರೊಲು ಕಾಲದೊಡನೆ
ಕಾಲವೆಮ್ಮಯದಾಗಿ ಆಗುವನಕ;
ಗರಿಯಿಕ್ಕದೆಳವಕ್ಕಿ ನಮ್ಮಾಸೆ ಇನ್ನೂ.
ತುಂಬುಗರಿವಕ್ಕಿಯಿದು ಆಗುವನಕ,—
ಆಗಿ ಭೋರಿಡುತಿರುವ ಬಿರುಗಾಳಿ ಸಮುಕೂ
ಗಾಳಿ ಕಡೆ ರೆಕ್ಕೆಗಳ ಹರಡುವನಕ.

2

ನೋಡಿ, ಅರುಣೋದಯುವ ನೋಡಿರೇಳಿ;
ಊಡಿ, ಎಲ್ಲರು ಬನ್ನಿ, ಆತ್ಮವನು ತಣಿಸಿ;—
ಹೊಲದಿಂದ ಪಥದಿಂದ ಸೆರೆಮನೆಗಳಿಂದ;
ಬನ್ನಿ, ಔತಣದೂಟ ಹರಡಿರುವುದು;
ಬಾಳಿ ಬನ್ನಿರಿ, ಸತ್ಯ ಉಳಿದಿರುವುದು;
ಏಳಿ, ಎಚ್ಚರಗೊಳಿರಿ ನಿಶಿಯು ಅಳಿದಿಹುದು.

—ಸ್ವಿನ್‌ಬರ್ನ್

ಗೀತಗಳ ವಿವರ

ಚಿತ್ರಗಳು ಚಿತ್ರಗಾರರು

1. ಅರ್ಧನಾರೀಶ್ವರಮೂರ್ತಿ .. .. ಕೆ. ವೆಂಕಟಪ್ಪ
2. ಪ್ರಳಯ ತಾಂಡವ .. .. ನಂದಲಾಲ ಬಸು
3. ವೀಣೆ ಶೇಷಣ್ಣನವರು .. .. ಕೆ. ವೆಂಕಟಪ್ಪ
4. ಕಾರಂಜಿಕೆರೆ ದಾರಿ .. .. (ಛಾಯಾಚಿತ್ರ)
5. ಸಿದ್ಧಾರ್ಥನ ರಾಜ್ಯ ಪರಿತ್ಯಾಗ .. .. ಕೆ. ವೆಂಕಟಪ್ಪ
6. ಶಿವ–ತಪೋನಿಷ್ಠ .. .. ನಂದಲಾಲ ಬಸು

ಚಿತ್ರಗಳ ಹಕ್ಕು ಚಿತ್ರಗಾರರಿಗೇ ಸೇರಿದೆ.

ಸಮರ್ಪಣ

ಕಮಾಚ್

ಪದತಲದೊಳಿದನರ್ಪಿಸುವೆ,
ಹೇ ಸದಯ – ಗುರುದೇವ — ॥

ಹೃದಯದ ಬಿಸಿರಕಂತವ ಬಸಿದು
ಪದವಿಯ ಭೋಗಭಾಗ್ಯಗಳನು ತೊರೆದು
ಮದಿಸಿ ಮೇಲ್ಕವಿವಾಸೆಗಳನು ಬಿಗಿದು
ಕುದಿದು ಕಂಗೆಡುವೀ ಬಾಳನು ತೊಳೆದು.

ಜನಪದದೇಳಿಗೆಯೊಂದನೆ ನೆನೆದು
ಘನತರ ಕಾರ್ಯ ಮರ್ಮಗಳನು ತಿಳಿದು
ಅನುವಿನೊಳೆಲ್ಲ ಸೋದರರನು ಗೆಲಿದು
ಅನವರತವು ಸೇವೆಯೊಳು ಮೈಮರೆತು.

ಅಚಲ ಮಾನಸ ವೃತ್ತಿಯೊಳು
ಉಚಿತವೆಂದಿಹ ನಡೆನುಡಿಗಳೊಳು
ಸುಚರಿತ ಸಜ್ಜನ ಸಂಗದೊಳು ನಾ
ನರ್ಚಿಸುತೆ – ಜಾನಿಸುತೆ – ವಂದಿಸುತೆ.

ಒಲವು

ಭೈರವ

ನಿಜ ತನುವನೆರೆದು ತೋಷಿಸುವುದೊಲವು
ಕಂಜನರನು ಕೂರ್ಮೆಯಿಂ ಗೆಲಿದು ಬೆಳೆದಪುದು— ॥

ಚಿಣ್ಣರಾಟದೊಳು ಕುಣಿದು ತಣಿದಪುದು ಮನದಣಿಯೆ,
ಭಿನ್ನ ಭಾವವನೆಣಿಸದೆಲ್ಲಿಯುಂ – ಯಾರೊಳಗೂ
ಚೆನ್ನೆಯರ ಕುಡಿನೋಟದೊಡನಾಡಿ ಪಾಡುತ್ತ
ಸನ್ನೆ ಪಡಿಸನ್ನೆಯಿಂ ಕೇಳಿಯಾಡುವುದು.

ಅರಳಿ ಹೂಮೊಗ್ಗು ಪರಿಮಳವ ಬೀರಿ ಕಡುಸುರ್ಕಿ ಬಳಲಿ ತಾ
ನೊರಗೆ ನೆಲದೆ; ಚಿಗಿವ ಹಾಸದಿ ಜನಿಸಿದಾ ಹಸುಳೆಗಾಯ್
ಏರು ಜವ್ವನದ ಸೊಂಪಿನೊಳು ಮಾಗಿ, ಫಲವಾಗಿ, ಹರುಷದಿಂ
ಬಿರಿದುಬ್ಬಿ ತೋರುವುದು ಮೈಗೊಂಡ ಬಸಿರ ಸಂತಸವ.

ಹಡೆವ ಮಾತೆಯುಂ ಹೊತ್ತ ಇನಿಯನನುರಾಗ ತಾ
ಕೊಡುವುದಲ್ಲವೆ ಜೀವನವ ನಿಜ ವಂಶಕೆ
ಕಂದನಂದಯೋತ್ಸವಕೆ ಒಡಲ ಬಲಿಗೊಟ್ಟೊಡಾ
ನಂದನನನಿತ್ತು ತಾನಸುವ ನೀಗುವಳು.

—ನಿಜತನುವನರೆದು ತೋಷಿಸುವುದೊಲವು. ॥

ಪ್ರಳಯ ತಾಂಡವ

ಪಂತುವರಾಳಿ

ಭೈರವಲೀಲಾಪ್ರಸಂಗವಿದು !
ಪ್ರಳಯದಬ್ಬರದೊಳಪ್ಪಳಿಪ ಭಂಗ ತರಂಗ !—॥

ಝಣಝಣರೆಂದು ಕಂಣಿವ ಕಾಲ್ ಕಿಂ
ಕಿಣಿಗಳ ಘನ ನಿನದ ! ಇಳಿದುಯ್ಯಾಲಾಡುವ
ಫಣಿ ಗಡಣಗಳ ಸೀಳುಸಿರಾವರಣ !
ಅಣುಬಿಡದೆಲ್ಲ ಲೋಕಗಳಂತ್ಯದಂತಕನ ನರ್ತನದಂದ !

ಸೃಷ್ಟಿಯ ನಿಮಿರೊಳು ಹುಟ್ಟಿ ಚಂದದೊಳಿದ್ದ
ದಿಟ್ಟ ಜೀವಿಗಳ ಭಂಗದ ಬರಿಯಂತರಂಗ !
ಕಟ್ಟಕಡೆಯ ಹೊಂದನೀಕ್ಷಿಸುತಲಿ ತಾ
ನಟ್ಟನಡುವಿನೊಳಡಿಯಿಟ್ಟು ಆಡುವ ತಾಂಡವದಾನಂದ !

ಗಗನದಿ ಸೂರ್ಯ ತಾರೆಗಳಿಲ್ಲ !
ಗಗನ ಭೂಮಿಂಗಳೆ ತಾವ್ ಮೊದಲಿಲ್ಲ !
ಹಗರಣ ಸಂತಸಗಳ ಸುಳಿವಿಲ್ಲ !
ಬಗೆ ಭಾವಗಳ ಮೇರೆಯ ಮೀರಿ ತೋರುವೀ ಉನ್ಮಾದದಾನಂದ !

ಕೊನೆಮೊದಲಿಲ್ಲವು ತಮಗೆಂದು ಮೆರೆದಿರ್ದ
ಅನಿಮಿಷರ್ಗು ಳಿವಾಶ್ರಯಗಳಿಲ್ಲ !
ಅನವರತವು ಹರಿವವಸರ ತೋರುವ ಕಲಿಕಾಲನಿಗೂ ಬದುಕಿಲ್ಲ !
ಅನಲ ಮಾರುತರಳಿವಿನೊಳು ಒಡ್ಡಿದಭಾವದೊಳಾಳುವ ಆನಂದ !

ವಿಶ್ವವ ಹೊರೆಯುವ ಚಿಂತೆಯ ತೊರೆದು,
ಸುಸ್ಮಿತ ವದನದೊಳೆಲ್ಲವನಗಿದು,
ಸುಸ್ವರ ಲಯ ತಾನಗಳನುವಿಡಿದು,
ಭಸ್ಮಲೇಪದ ಮೈಸಿರಿಯನು ಬೆಳಗುವ ಅಚ್ಚರಿಯಾನಂದ !

ಮನಸ್ಸು

ಭೈರವಿ

ಇನಿತು ಮರೆಯೇಕೆ ಎನ್ನಿದಿರೊಳು — ಮನ್ಮಾನಸವೆ,
ಇನಿತು ಚಿಂತೆಯಿದೇಕೆ, ಕಳವಳವೇಕೆ ?— ॥

ಹೂಲತೆಗಳಿಂದು ನಿನಗೀಯುವೆ ನಗೆಯ ? ಬೀಸು
ವೆಳಗಾಳಿಗಳ ಸುಯ್ಯೊಲುಮೆ ಸೂಸದೇ ಸೊದೆಯ ?
ನೀಲಮೇಘಗಳು ಆದರದಿ ಕರೆದೊಸೆಯುವೆ ? ವಿ
ಶಾಲ ಗಗನದ ರಾಗದೊಯ್ಯಾರಗಳು ಮೋಹಿಸವೆ ?

ಆಯುಸವನಿತ್ತವನಲ್ಲ ನಾನೆಂದಿಗೂ
ನೋಯಿಸಲು ಮೈಬಲುಮೆ ತೋರಿದವನಲ್ಲ
ಮಾಯೆ ಮೋಸಗಳಿಂದ ಬಂಧಿಸಿದನಲ್ಲ
ಕಾಯಸುಖ ಬೇಕೆಂದು ಬಳಲಿಸಿದನಲ್ಲ.

ಅಂತರಂಗದೊಳೇನಿಹುದು ಪೇಳೆನ್ನ ಮಾನಸಮೆ
ಸಂತಸವ ತಾಳು ಬೇಡುವೆನು ಕೊರಗಬೇಡಿಂತು
ಸ್ವಾಂತದಾಯಸವ ನೀಗಿ ಹಾಸವನು ಬೀರು ದಶ ದಿ
ಗಂತರಾಳಗಳ ಭೇದಿಸುವೆ ಜಯಸಿರಿಯ ಗೆಲುವೆ.

— ಇನಿತು ತಾಮಸವೇಕೆ ? ಇನಿತಸಂತುಷ್ಟಿಯೇಕೆ ? ॥

ಸೃಷ್ಟಿ ಸಂಭ್ರಮ

ಭೂಪಾಳಿ

ಹೊಸ ಲೋಕಗಳು ಹುಟ್ಟುವ ಸಂಭ್ರಮವಿದೆ ಗೋ !
ಆಗಸದುಜ್ವಲ ರಾಗ ಹಾಸಗಳಿದೆಗೋ ! — ॥

ಮಾಯೆಯು ಮೇಲ್ಮುಸುಕನಂ ಬಿಸುಡೆ; ಉ
ಪಾಯದಿ ತ್ರಿಗುಣ ಜಾಲಗಳೊಡ್ಡಿ ಹಸರೆ;
ರಾಯ ತೇಜದ ಸಿರಿ ಬೀರಿ ತೋರುತ ಬರೆ
ತಾಯಿತನದಿ ಶಕ್ತಿ ನೋಡಿ ಮೋಹಿಸುತಿರೆ —

ಎಲ್ಲೆಡೆಯೊಳು ಮಿಂಚಿನ ತಳಿರ್ದೋರಣ
ಚೆಲುವೆಳಗಿನೊಳೆಲ್ಲ ಭುವನಗಳ್ ಬೆಳಗೆ
ಫುಲ್ಲಮಾನಸದೀಶನ ರಾಗ ಹೊರಸೂಸು
ತೆಲ್ಲ ಜೀವದ ಮೂಲ ಸಾರ ತತ್ತ್ವವು ಹರಿಯೆ —

ನೆರೆದಿರಲೋಲಗದೊಳೆಲ್ಲ ಭೂತಗಳು
ಪರಿ ಪರಿ ವೈಖರಿಗಳೊಳು ಸ್ವಾಗತಗೊಡಲು
ಮೆರೆದು ಮೇಳದೊಳೆಲ್ಲ ತಾರೆಗಳ್ ಗತಿವೆರ
ಸಾರತಿ ಬೆಳಗಲು ವಿಶ್ವಮೋಹನ ಗಾನದೊಳು.

ಪ್ರಶ್ನೆ

ರೀತಿಗೌಳ

ಚಿತ್ರವಾಗಿಹುದೀ ಜಗದ ವ್ಯಾಪಾರ ವಿ
ಚಿತ್ರವಾಗಿಹುದಿದರ ಸಾರ — ॥

ಹೊಂದಲಾರದ ಸುಖಕೆ ನೊಂದು ಬಳಲುವೆವೇಕೊ
ಸಂದ ಸಂತಸಕೊಲಿದು ಮೈಗೊಡೆವಿದೇಕೊ
ಹಿಂದು ಮುಂದಕೆ ನೋಡಿ ಶಾಂತಿಯನು ಕಾಣದೆಯೆ
ಎಂದು ಎಂದೆಂದಿಗೂ ತೊಳಲ್ವೆವೇಕೊ !

ಹೆಸರು ರೂಪಗಳಿಗೇ ಸಂತತವು ಹೋರಾಡಿ
ಹೊಸ ಭಾವಗಳಿಗಿನಿಸು ಎಡೆಯಿಾಯೆವೇಕೊ
ಹುಸಿಯುಂತರವ ನಮ್ಮ ಮತಗಳಾಶ್ರಯಿಸಿರಲು
ಒಸಗೆ ಬಾರದು ಎಂದು ಶ್ರಮಿಪೆವೇಕೊ !

ಮೃದು ಮಧುರ ರೀತಿಯೊಳು ಜಗವು ಮೋದದೊಳಿರಲು
ಹೃದಯದುದ್ವೇಗದಲಿ ತಾಪಬಡುವೆವೇಕೊ
ಉದುರಲಿಹ ತರಗೆಲೆಯು ಅದುರಿ ಬೆಳ್ಚಿರುವಂತೆ
ಅದುರಿ ಬಸವಳಿದೆಂದಿಗೂ ದಣಿವೆವೇಕೊ !

ಮೋಕ್ಷಕ್ಕೆ ಸಾಧನವು ತಾನಿದೀ ಧರೆಯಿರಲು
ಲಕ್ಷಿಸದೆ ಪೆರತೊಂದನಾಶಿಪೆವಿದೇಕೊ
ಅಕ್ಷಯ್ಯ ಆನಂದಕವಕಾಶವಿರುತಿರಲು
ಅಕ್ಷಮಿಂತ ವೃತ್ತಿಯಿಂ ಚರಿಪೆವೇಕೊ !

ಆಸೆ

ಮಧ್ಯಮಾವತಿ

ಆಸೆಯ ರಂಗವೊ, ಈ ಭುವನವು
ಆಶಯಂಗಳ ಹಿರಿತವರೊ — ॥
ಆಶೆಪ್ರತ್ಯಾಶೆಗಳಾಸರೆಯೊಳು ವಿ
ಕಾಸವ ಹೊಂದಿ ಪ್ರಕಾಶಿಪುದೊ ॥

ಹಿರಿಯಂತನವ ಬಯಸಿ, ಜೀವಿಗಳೆಲ್ಲ
ಗುರುತರ ಧರ್ಮವನೊತ್ತರಿಸಿ
ಧರೆಯ ಸಂಪದಕಧಿಕಾರವ ಪಡೆಯಲು
ನಿರುತವು ಹಾತೊರೆದರಸುವುವೋ !

ಸೋಲು ಬೀಳುಗಳೆಂಬ ಭಾವ ಬಾರದು ಮನಕೆ
ಕಾಳ ಕರ್ಮಗಳಿಂದ ಜನಿಸುವಂಜಿಕೆಯಿರದು
ಕೀಳು ಮೇಲುಗಳ ಚಿಂತನ ಸರಿಬರ ದವಿ
ಚಾರಿಗಳೈಸಿರಿಯಿಚ್ಛಿಪೆವೊ ಆತ್ಮವಂಚಕರೋ !

ಹಣ್ಣು ಹೂಲತೆಗಳು ಗಾಡಿವೆತ್ತಿಹವೆಮ್ಮವು
ಬಣ್ಣ ಕಾಂತಿಗಳಿಂದ ಹೊಳೆಯುವಿಳೆಯೆಮ್ಮದು
ಕಣ್ಣು ಮುಂದಿರುವೀ ಸೊಬಗು ಸೌಖ್ಯಗಳೆಲ್ಲ
ಬಣ್ಣಿಪುದೇನಿಡಿ ಜಗವೆಮ್ಮದೆಂಬೆವೋ !

ಜೀವವಾಹಿನಿ

ಪೀಲು

ಜೀವವೊಂದನಂತ ವಾಹಿನಿ
ವಿಶ್ವಪಾತ್ರದೊಳು ಪರಿದು ಪಾರುವೀ — ॥

ಜೀವಿಕೋಟಿಗಳ ಕೋಟಲೆಗಳಿಹವಿಲ್ಲಿ
ಭೀಮಸಂಭ್ರಮ ದಶಾಂತ ಲಹರಿಯಿಹುದು;
ಸಾವು ನೋವುಗಳ ಬಾಧೆ ಭೇದಗಳಿಹವು
ಬೇವ ಕುದಿವರಿಯುವ ಶೋಕವಿಹುದು.

ಗರುವ ಗಾಂಭೀರ್ಯಗಳು ಮೆರೆವ ವಯ್ಯಾರಗಳು
ಪರಿ ಪರಿಯ ಸೌಂದರ್ಯವೌದಾರ್ಯವಿಹುದು;
ಮರೆಸಿ ಮೋಹದೊಳಿಳಿಪ ಲಾಸ್ಯ ಜಾಲಗಳಿಹವು
ಉರುತರದ ರುಚಿ ಗಮನ ಮಂದಹಾಸಗಳು.

ಇದರಾಳ ಕಂಡವರಿಲ್ಲ, ಮೂಲವರಿತವರಿಲ್ಲ;
ನೀಲ ಹೃದಯವ ಹೊಕ್ಕು ಹುಡುಕಿದವರಿಲ್ಲ;
ಮೇಲೆ ಭೋರ್ಗರೆಯುತುರುಳಿ ರಭಸದಿ ಬರುವ
ಮಾಲೆಯಲೆಗಳ ಜೀವ ಶೋಧಿಸಿದರಿಲ್ಲ.

ಯಾವ ಸಾಗರಕೆಲ್ಲಿ ಹೋಗಿ ಸೇರುವುದೊ !
ಯಾವ ಕಡೆ ದುಮ್ಮಿಕ್ಕುತೆಲ್ಲಿ ಸುಳಿಯುವುದೊ !
ಯಾವ ದೋಣಿಯನೆಳೆದು ತಡಿಗೆ ನೂಕುವುದೊ !
ಯಾವ ನಾವಿಕನಿದನು ದಾಟಲರಿದಿಹನೋ !

ನೊರೆ

ಹಿಂದೋಳ

ಬಲ್ಲವನು ನಾನೆಂದು ಬಲ ಮೆರೆದೆನ್ನೈಯ
ಎಲ್ಲ ಬಲವೆನತೆಂದು ಮೈಮರೆತೆ
— ನೀನೆನ್ನ ಸಲಹಬೇಕೈಯ — ॥

ಎನ್ನ ಮಾನಸದಾಸೆ ಆಗಸಕೆ ಕೈನೀಡಿ
ನಿನ್ನ ಸಂಕಲ್ಪಗಳ ಲೆಕ್ಕಿಸದೆ ಚೀರಿಡೆ, ಸಂ
ಪನ್ನ ಬಲ, ದಯೆ ತೋರ್ದೆ, ದಾರಿವೆಳಗಾದೆ,
ಎನ್ನಹಂಕೃತಿ ತೊಲಗೆ ನೆರವಾದೆ,
— ನಿಜವನೊರೆದೆ.

ಎನ್ನ ಸಾಸಕೆ ಜಗವು ಅಡಿಯಾಳುತನ ಮಾಡಿ
ಮನ್ನಣೆಯ ತೋರುವುದು ತಾನೆಂದು ಬಗೆದೆ;
ಇನ್ನು ಮೇಲಿನ ಕಾರ್ಯವೆನ್ನಧೀನದ್ದೆಂದು
ಭಿನ್ನ ತತ್ತ್ವಕೆ ನಾನು ಶರಣುವೋದೆ,
— ನಿರ್ಬೋಧನಾದೆ.

ವಿಶ್ವ ಸಾಮ್ರಾಜ್ಯದಧಿಕಾರ ನಿನಗಿರಲು
ಅಸ್ವತಂತ್ರನು ಅದನು ಅಣಕಿಸುತೆ ಮಲೆತೆ;
ನಿಸ್ಸೀಮ ಸಾಹಸದ ಬೆಡಗಿನಾತ್ಮನೆ, ಪಿತನೆ,
ವತ್ಸನೆಂತಾದೊಡಂ ಬೇಡಿ ಬಂದಿಹೆನ್ನೈಯ
— ಕರುಣೆದೋರ್ಯೆಯ.

ಭ್ರಮೆ

ಕೇದಾರಗೌಳ

ಅರಿವೊ ಮಾಯೆಯ ಮಂಕೊ ಭ್ರಮೆಯೊ ಬೇಸರವೊ
ಬರಿಯ ನೆಳಲ ಬೇಂಟೆಯೊ — ಪಗಿಯೆಂತೊ ! — ॥
ಇರವಿನ ಸಹಜ ವೃತ್ತಾಂತವೆಂತುಟೊ
ಪರವೆಂಬುದೊಂದಿರ್ದಪುದೊ — ಇಲ್ಲವೊ ॥

ಪಾಪ ಪುಣ್ಯಗಳಿವು ಕೋಪ ತಾಪಗಳವು
ಆಪದ ಸುಖಸಾಧನಗಳಿಲ್ಲಿಯವು
ಶಾಪವೊ ದುರ್ವಿಧಿ ಲೇಖನವೊ
ಲೋಪಗಳೆಲ್ಲಿಹವೊ ಎಮ್ಮೊಳಗೊ ಹೊರಗೊ !

ಯುಗಯುಗಗಳ ಪರಿವಿಡಿಯೊಳು ಕೈ
ಮುಗಿದತಿವಿನಯದಿ ತಪಗೈದೊಡಮೇಂ ?
ಅಗಣಿತ ಮಹಿಮರನನುಸರಿಸುತಲೆಲ್ಲ
ನಿಗಮಕೋವಿದರನು ಗೆಲಿದೊಡಮೇಂ ?

ನಿಜವೊಂದರಿಯದೆ ಪರಿತಪಿಸುತೆ ಜನವನುದಿನ ಸಂಕಟ
ಬಡುತಲಿರೆ,
ಸುಜನರಿಗೆಡಬಲದೊಳು ದುಃಖವಿರಲ್ಕದು ಶಾಂತಿಗೆ
ಭಂಗವನಾಚರಿಸೆ
ಭಜಿಪನ ಹೃದಯುವ ಸೀಳುತೆ ಕೀಳುತೆ ಮನದೊಳು
ಸಂಶಯುವೂರುತಿರೆ
ಕಂಜನರಿಗಾಶ್ರಯುವೀಯುತಲೀ ಧರೆ ವರವಿಭವಗ
ಳವರ್ಗೀಯುತಿರೆ.

ಚಿತ್ತ

ನಗುವ ಹಗಲ ಕೋರಿ ಕೋರಿ
ಮುಗಿಲ ಮೋಹರಗಳ ತೂರಿ
ಗಗನಪಥವ ನೇರಿ ಸಾರಿ
ಖಗಗಳಂತೆ ಹಾರಿ ಹಾರಿ
ನಲಿ ನಲಿವುದು ಚಿತ್ತವು

ಹಗಲ ಕಣಗಳೊಂದುಗೂಡಿ
ಬಗೆಗೆ ಬಂದ ಪರಿಯೊಳಾಡಿ
ಜಗವ ದೂರದಿಂದ ನೋಡಿ
ಹಗುರ ಮನದೆ ಹಾಡಿ ಹಾಡಿ
ಮೊರೆಮೊರೆವುದು ಚಿತ್ತವು.

ಕೋಮಲಾಂಗಿ ಲತೆಯು ಇಲ್ಲಿ, ಭಾಮೆಯರ ಚೆಲುವು ಅಲ್ಲಿ
ಈ ಮರ ತನಿ ಸೊಂಪಿದಿಲ್ಲಿ ಕರೆ ಕರೆವುವು ಪ್ರೇಮದಿ;
ಆ ಸರಸಿಯು ಹೂದಳಗಳು ತೆರೆದರಳುತೆ ತೋರುತಿರಲು
ಈ ಸರಸದ ಸೌಖ್ಯ ಬಯಸಿ ಕುಣಿಕುಣಿವುದು ಚಿತ್ತವು.

ನಡುಹಗಲೊಳು ಕನಸುಗಳನು ಪರಿಪರಿಯೊಳು ತರಿಸುವುದು
ಬಡತನ ಮನಕೇಕೆಯೆಂದು ನೆನವುಗಳನು ನೆನೆಸುತೆ
ನೊರೆ ಮೊರೆಗಳನುಳಿದೇಳುತೆ ಉರುಳೇರುವ ತೆರೆಗಳಂತೆ
ಹರಿವಿನೊಳೇ ನಿದ್ರಿಪಂತೆ ಮರೆಮರೆಸುತೆ ಹರಿವುದು.

ವೈಶಾಖದ ಸೊಬಗಿನಂತೆ
ಪಯಿರ್ಗರುಕೆಯು ಹಸುರಿನಂತೆ
ಕಾರ್ತೀಕದ ಚಂದ್ರನಂತೆ
ಫಲಗಾಲದ ತುಂಬಿನಂತೆ
ಮೆರೆಮೆರೆವುದು ಚಿತ್ತವು.

ತಾಯ ಕಣ್ಣ ಚಿಣ್ಣನಂತೆ
ಕುಲದ ಬೆಳಗು ಸೂರ್ಯನಂತೆ
ಜಲಧಿತಲದ ರತುನದಂತೆ
ಗುಣಗಡಣದ ವಿನಯದಂತೆ
ಹೊಳೆ ಹೊಳೆವುದು ಚಿತ್ತವು.

ಚೆಂದಳಿರಿನ ತೋರಣದೊಳು ತೆಂಗಿನ ಹೊಂಬಾಳೆಯೊಳಂ
ಮುಂಬೆಳೆ ಹೂತೋಂಗಲೊಳು ಸುಳಿಸುಳಿವುದು ಚಿತ್ತವು.
ಬಂಡುಣಿಗಳು ಇಂಚರದೊಳು ಸಂಚರಿಸುತೆ ಝೇಂಕರಿಪೊಲಂ
ಕಂಗಾಣದ ಪ್ರೇಮಿಯಂತೆ ತನು ಮರೆಯುತೆ ಮಲೆವುದಂ.

ತೆಂಬೆಲರೊಳು ತೇಲಿ ತೇಲಿ
ಹೊಂಬಣ್ಣವ ತಾಳಿ ತಾಳಿ
ಸಿಂಗರದಲಿ ಉಯ್ಯಲಾಡಿ
ಕಂಗೊಳಿಸುವ ಹಣ್ಗಳಂತೆ
ಬಿರಿ ಬಿರಿವುದು ಚಿತ್ತವು.

ಮನದರಸಿಯನರಸಿ ಹೋಗಿ ಇನಿನುಡಿಗಳ ಹೇಳಿ ಕೇಳಿ
ಮುನಿಸುಂಗಳನು ಹರಿಸಿ ಚರಿಸಿ ನರ್ತಿಸುವುದು ಚಿತ್ತವು;
ಕೊನೆಮೊದಲ್ಕಾಣದೆಯೇ ಒಲವಾಸೆಯು ತೀರದೆಯೇ
ಕಣುಮನಗಳು ತಣಿಯದೆಯೇ ನಿಲು ನಿಲುವುದು ಅಲ್ಲಿಯೇ.

ತಿರುಕ

ಆನಂದಭೈರವಿ

ಹತ್ತಾರು ಸಾವಿರ ಜನರು ಉಂಬುದು ಊರು
ತುತ್ತೊಂದ ನೀಡಿರಮ್ಮ— ಮಾತಾಯಿಗಳಿರಾ — ॥
ಹುಟ್ಟಿದೆ ಕಡುಪಾಪಿ ಧರೆಗೆ ಬರಿ ಹೊರೆಯಾಗಿ
ಕೊಟ್ಟರೆ ಮನೆ ಮನೆ ತಿರಿದುಂಬೆನಮ್ಮಾ ॥

ಇಂದಿತ್ತವರು ನಾಳೆಗೆ ಹೋಗೆನ್ನುವರು
ಮಂದಭಾಗ್ಯನ ಜರೆದೋಡಿಪರು;
ಕರುಣೆ ನಿಲ್ಲದು ಹಲಕಾಲವೀ ಜನರೊಳು
ಹರಣವ ಪೊರೆವುದು ಕಠಿಣವಮ್ಮಾ,
ಮರಣ ಲೇಸಮ್ಮಾ.

ಓರಾಗು ಸಾರುವೆವೆನ್ನುವರು
ಊರ ನಾಯ್ಗಳು ಕಾಡುವುವು;
ಊರೆಗೋಲಿಲ್ಲದೆ ಮುಂದಡಿಯಿಡಲಾರೆ
ತೀರ ಕಾಣವಮ್ಮಾ ಕಂಗಳು,
ಕಾಲ್ಗಳು ಕಾಯುವವಮ್ಮಾ.

ಮನದಪಮಾನವ ಸೈಸಲಾರೆ
ತನುವಿನ ದೈನ್ಯವ ತಾಳಲಾರೆ;
ಮನುಜರೆಲ್ಲರವೋಲು ದುಡಿಯಲಾರೆ ನೆ
ಳ್ಳನಿತೀ ಜಗಕಾನುಪಕಾರಿಯಾಗೆ.

ನಿಶಿ ಹಗಲುಗಳರಿವೆನಗಿಲ್ಲ
ಶಶಿಸೂರ್ಯರ ಕಂಡವನಲ್ಲ;
ಎಸೆವ ಸೊಬಗುಗಳಾವುವೆನೆಗಿಲ್ಲ, ಈ
ಪಶುವಿನ ಜೀವನ ಬಯಸಿದನಲ್ಲ.

ಏನು ಕರ್ಮವಗೈದು ಜನಿಸಿದೆನೊ
ನನಗೀಗತಿ ಏಕಿಂತು ಸಮನಿಸಿತೊ
ಏನು ಕಂಗಳು ಕಾಣದನೊ ನಾಲ್ಮೊಗ ನಹ !
ಏನು ಕಂಡರು ಕಾಣದನೋಲಿರುತಿಹನೋ.

ಶಿಖರದಲ್ಲಿ

ಸಾವೇರಿ

ಗಿರಿಯ ಶಿಖರವನೇರಿ, ತೆರವಿನೆಳ್ಚರದಿರುವ
ನರರೆರೆಯನಿವನದಾರೊ — ಅರಿವಿನಾ — ॥
ಮರೆವಿನಲಿ ನಿದ್ರೆಯಲಿ ತಮದ ಅರೆತಿಳಿವಿನಲಿ
ಧರೆಯುಂ ಮುಳುಗಿರಲಿವನು ಅಗ್ರಕೈದಿಹನು ॥

ತಮವು ತೊಲಗುವ ಸಮಯ ಒದಗಿಬಂದಿರುವೀಗ
ಭುವನ ರಮಣೀಯತೆಯ ನೋಳ್ಪೆನೆಂದೊ;
ನವ ಉದಯದುತ್ಸಾಹವಿಳೆಯನಾವರಿಸಿರಲು
ಭವದ ಭಾಗ್ಯದ ಬರವ ಬಯಸಿ ಬಂದೊ !

ಹಾರುವಕ್ಕಿಗಳ ಜೊತೆಗಾರನಾಗಿಹ ತಾನುಂ,
ಏರುತೇರುತೆ ಮೈಯ ಮರೆತು ಹಾಡಿ,
ಪಾರವಿಲ್ಲದ ಪ್ರೇಮವರಳಿಸುತ್ತಿರೆ ಮನವ
ತೀರಿಸುವೆ ಧಾರಿಣಿಯ ಋಣವನೆಂದೊ

ಇತರರೇಳದ ಮುನ್ನ ಅವರ ಸಾರುವ ವರ್ಣ
ಮತಿಯ ಮಾಂದ್ಯವ ಕಳೆವೆನೇಳ್ವೆನೆಂದೋ•
ಅತಿದೀಪ್ತಿಯಿಾಯುತಿಹ ಗಿರಿಯೆಲರ ಸೇವಿಸು
ತ್ತಿತರರಿಗೆ ಮೇಲ್ದಾರಿ ತೋರ್ವೆನೆಂದೋ

ಪರತತ್ತ್ವ

ಪೂರ್ವಿಕಲ್ಯಾಣಿ

ಅರಿಯುವರೊ ಪರವೆಂದು
ಪರಮ ತತ್ತ್ವದ ಸಾರವೆಂದು — ॥

ಮಲಿನ ಮನವನು ತೊಳೆವ ಅಮಲ ಗಂಗಾಜಲವು
ಇಳೆಯ ಬೆನ್ನಲಿ ನಿಂದು ಕಾಯ್ವ ಬಲವು
ಬೆಳೆವ ಜೀವಿಗಳ್ಗೆಲ್ಲ ನಿಜ ಜೀವಕಳೆ ಇತ್ತು
ಕುಲವನೇಳ್ಗೆಗೆ ತರುವ ಧರ್ಮವೆಂದು.

ಕುಹಕಭಾವಗಳೆದ್ದು ತನುವ ತಲ್ಲಣಗೊಳಿಸೆ
ವಿಹಿತ ಮಾರ್ಗವ ತೋರಿ ಹೊರೆವ ದೈವವನು;
ಅಹಿತ ಸಂತತಿಜಾಲ ಮೊನೆಗೊಂಡು ಮುಸುಕಿರಲು
ಮಹಿಯ ಮಂಗಳವೆಳಸಿ ಮರುಗುವಾತ್ಮವನು.

ಕಂಗಳಿಗೆ ಕಾಣದಂತೆಂದಿಗೂ ಮರೆಯಾಗಿ
ಮಂಗಳದ ಕಾರ್ಯಗಳಿಗಾಧಾರವಾಗಿ
ತುಂಗಬಲಯುತರಿಂಗೆ ಬಲದಾತೃವಾಗುತ
ತ್ತುಂಗ ಮಾನಸದರಿಗೆ ನೆರವಾಗುತಿಹುದ.

ನಿನ್ನ ಕೃಪೆ

ವರಾಳಿ

ಯಾವ ಗುಣವನು ನೋಡಿ ಒಲಿದಿತ್ತೆಯೊ ಕಾಣೆ
ಮಾವರಾ, ನಿನ್ನನೆಂತು ನಾ ಗೆಲಿದೆನರುಹಾ — ॥

ನಿನ್ನವನು ನಾನೆಂಬ ಮಮತೆಯಿಂದಿತ್ತೆಯೊ
ನಿನ್ನ ಮೃದುಂಪದತಲದಿ ನೆಲೆಯು ?
ಉನ್ನತರು ಮಹಿಮಾನ್ವಿತರು ಎನಿಬರೊ ಇರುತಿರಲು
ನಿನ್ನ ಸಿರಿಕೃಪೆಯಿಂದು ನನ್ನಮೇಲೇನು ?

ದೋಷಿ ದುರ್ಬಲನು ಬಲುಚಪಲನಿವನೆಂದೊ
ದ್ವೇಷಮಾಡಿದೊಡಿವಗೆ ಹೊಗಲಿಲ್ಲವೆಂದೊ
ವೇಷ ಭಾಷೆಗಳೆಲ್ಲ ಹೊರಗಣಾರ್ಭಟೆ ಇವನ
ಭೂಷಣವು ಸೌಜನ್ಯ ವಿನಯುವೆಂದೊ.

ಒಂದುದಿನ ನಾನಿನ್ನ ಭಜಿಸಿದವನಲ್ಲ
ಒಂದುದಿನ ಹೂಗಳಿಂ ಸಿಂಗರಿಸಲಿಲ್ಲ;
ಕಂಗಳಿದ್ದರು ಕಾಣದಂಧನಂತಿರುತಿದ್ದೆ
ನಿಂದಿನೀ ಕರುಣೆಗೆ ಕಾರಣವನರಿಯೆ.

ಮನಕೆ ಬಂದುದ ಮಾಳ್ಪವರ ಮಾತೆನಗೇಕೆ
ಇನ್ನುಳಿದರೆನ್ನವರವರ ಹೊರೆವೆನೆಂದು
ಜನರು ತೊರೆದರ ಪೊರೆವ ಭಾರವೆನ್ನದೆನುತ್ತ
ಅನುದಿನವು ನೀನೆಮ್ಮ ಸಲಹುತಿಹೆಯಾ ?

ಯಾನ

ಪೀಲು

ದೋಣಿಯೊಳು ಕುಳಿತು ನಾನು ಬಲುದೂರ ಬಂದಿಹೆನು
ಕಾಣೆನೆಲ್ಲಿಹುದೊ ತೀರವಿನ್ನು ಮುಂದೆ
ಕಾಣುವೆನೊ ಕಾಣೆನೊ ದಾಟುವೆನೊ ಸೇರುವೆನೊ
ಜಾಣರನಿಬರು ಪೇಳ್ವುದೆಲ್ಲ ಹುಸಿಯೊ.

ತಿಳಿದ ದೇಶವಿದಲ್ಲ ಅರಿದ ಮಾರ್ಗವದಿಲ್ಲ
ಉಳಿದರೆಮ್ಮವರೆಲ್ಲ ನಿಂದರಲ್ಲೇ;
ಬಳಸಿ ನಾಲ್ದೆಸೆಯಲ್ಲುಂ ಜಲರಾಶಿ ಹಬ್ಬಿಹುದು
ಬಳುಕಿ ಬೀಳುತಲೇಳುತಾಳುತಿಹುದು.

ಕಾಲ ಮುಂಬರಿಯುತಿದೆ ಗಾಳಿಮಳೆಗಳ ಭೀತಿ
ಕಾಳ ಕತ್ತಲೆ ಭೀತಿ ಸಂಜೆವೋಗೆ;
ಮೂಲೆ ಮೂಲೆಗಳಿಂದ ಘೋಷಿಸುವ ಗರ್ಜಿಸುವ
ಮೇಲೆ ಮೇಲ್ವಾಯುವ ಮುಗಿಲ ಭೀತಿ.

ಮೊದಲುರುಬಿನುತ್ಸಾಹ ನಿರ್ಧರಗಳೀಗಿಲ್ಲ
ಮೊದಲಿನವು ವೀರ ಭರವಸೆಗಳಿಲ್ಲ
ಹದಿನಾಲ್ಕು ಲೋಕದರ ಪೌರುಷವನಿಳಿಸುತ್ತ
ವಿಧಿಮಂದವ ಮುರಿವೆನೆಂಬಾಸೆಯಿಲ್ಲ.

ಬಂದಂದಕೆ ಭಯಪಡದೆ ನಂಬಿ ಮುಂಬರಿಯುವೆನು
ಅಂಬಿನಂದದಿ ನೇರ ಗುರಿಯನರಸಿ
ಕಂಡರದ ನೋಡುವೆನು ಇಲ್ಲದಿರೆ ಕತ್ತಲೆಯ
ನುಂಗಿನೊಳು ಸೇರಿ ನಾನಳಿಸಿಹೋಗುವೆನು.

ಬೈರಾಗಿ

ಮೋಹನ

ಜನರ ಹಂಗಿನ ಸಂಗವಿನ್ನೆನಗೆ ಬೇಕಿಲ್ಲ
ಘನರು ಮುನಿಯುವರೆಂಬ ಚಿಂತೆಯಿಲ್ಲ
ನನಗೆ ನಾ ಸಂಪೂರ್ಣ ಅಖಿಲ ಧೀ ಬಲಯುತನು
ಎನಿಬರೆಂತೆಂದೊಡೇನೆನಗೆ ಪೇಳು.

ಆಸೆಗಳ ತೊರೆದಿಹೆನು ಮೋಸಗಳನರಿಯೆನು
ದೇಶ ದೇಶದ ಜನರ ಸೌಖ್ಯವಳೆದಿಹೆನು
ಆ ಸುಖದ ಹಂಬಲದಿ ಸೋತಸುಖಿಯಾಗೆನು
ಈ ಶೋಕವೆಂದಂಜಿ ನೆಲಕಿಳಿಯೆನು.

ನಿರ್ಭಯದ ಸ್ವಾತಂತ್ರ್ಯದಿಂದಾನು ವರ್ತಿಸುವೆ
ದುರ್ಭರದ ವಿಕಟದೀ ವಿಧಿಯ ಲೆಕ್ಕಿಸದೆ
ಅಬ್ಬರಿಸದರಚದೆ ಕೊಬ್ಬಿದರ ಗಣಿಸದೆ
ತಬ್ಬಲಿಯ ನೀವುಳುಹಿಕೊಳಿರೆನ್ನದೆ.

ಮನದೊಳಗೆ ಬೇರೊಂದು ಜಗವ ನಿರ್ಮಿಸುತಲ್ಲಿ
ಮನಕೆ ಬಂದವೊಲಾಳ್ದು ವಿಹರಿಸುವೆನು
ಜನದ ಮುಚ್ಚರಗಳಿಂ ಬಲುದೂರವಾಗಲ್ಲಿ
ಬಿನದದನುವಿಂದಾನು ವಿಶ್ರಾಂತಿಯಿಂದ.

ಕ್ಷೇಮಕಾರಿ

ದೇಶಿ ತೋಡಿ

ಕೊನೆಗೆ ದರುಶನವಿತ್ತೆಯೈ ಕ್ಷೇಮಕಾರಿ
ಇನಿತು ದಿನ ಕೊರಗಿ ನಾ ತಪಿಸುತಿದ್ದುದಕೆ — ॥

೧

ಜೀವನದ ಕ್ಲೇಶಗಳು ಒಡಲ ದಹಿಸುತಲಿರಲು
ದೇವ, ನೀ ಕರೆದೆಯೈ ಅಮೃತಧಾರೆಗಳ
ಪಾವಕನ ಪಾವನನ ಗೈವ ಚರಿತನು ನೀನು
ಕಾವ ಪಳನುಡಿಯೊಡೆಯನ ವಾಹನನು ನೀನು.

ನನ್ನಂತೆ ಇರುವವರು ಇನ್ನೆನಿಬರೊ ನಿನಗೆ
ಇನ್ನು ಆರ್ತರು ಕಾತರರು ನಿರ್ಗತಿಕರು
ನಿನ್ನವರು ಸಂಗಡಿಗರಾರಾರು ಕರೆವರೊ
ನನ್ನ ಬೇಗೆಯ ಹರಿಸೆ ಬಂದು ಕಾಯ್ದೈಯ.

ಶಾಂತಿಗೋಸುಗ ನೆಲನ ಬಿಟ್ಟು ಪಾರ್ದವನಲ್ಲ ವಿ
ಶ್ರಾಂತಿಯಾಸೆಗೆ ರಂಗದಿಂ ಸರಿದನಲ್ಲ
ಕಾಂತಿಮಯ ಕಡುತೀಕ್ಷ್ಣ ಕಂಗಳಿಂದೆಲ್ಲವನು ವಿ
ಭ್ರಾಂತನಾಗದೆ ನೋಡಿ ತಿಳಿವೆಯೈಯ.

ನಿನ್ನ ಒಡವುಟ್ಟಿದರು ನಾವೆಂದು ಭಾವಿಸುತ
ನಮ್ಮ ಹಿತವನೆ ಬಯಸಿ ಶ್ರಮಿಸುತಿಹೆಯೈಯ
ನಮ್ಮ ಹೀನತೆಯರಿವ ನಮಗೀಯಲುಜ್ಜುಗಿಸಿ
ನಿನ್ನ ಪ್ರಿಯ ಕಾರ್ಯಗಳ ದೂರ ತಳ್ಳಿದೈಯ.

೨

ನಿಲ್ಲದೊಂದೆಡೆಯೊಳೆಲ್ಲೆಲ್ಲು ಹಾರುತ್ತೆ
ಸಲ್ಲಲಿತ ಮೃದುರವದಿ ಹಿತವನುಸಿರುತ್ತೆ
ಬಲ್ಲವರ ನೊಲ್ಲದರ ನಿಲ್ಲುವರ ನಿಲ್ಲದರ
ಎಲ್ಲರಾಲೋಕವನ್ನೆಳೆಯುತಿಹೆಯ್ಯೈಯು.

ಒಂದುಸಲ ಮೃದು ಮಧುರ ಗೀತೆವೊಲಂ ಕೇಳಂವುದುಂ
ತಂದೆ, ನಿನ್ನಿಂಚರವು ಇಳೆಯು ಮುಳುಗಿಸುತೆ !
ಕೊಂಬಿನವೊಲೊಂದುಸಲ ದೂರದಿಂ ಮೊಳಗುತ್ತೆ
ಮಂದರನು ಮಾಂದ್ಯದಿಂದೆಚ್ಚರಿಸುತೆ.

ಹಲಬಾರಿ ಕೇಳಿಹೆನಂ ! ಮೋಡಗಳ ಮಧ್ಯದಿಂ
ಮೊಳಗಿ ಮಾರ್ದನಿಗುಡುವ ನಿನ್ನ ದನಿಯು
ಬಳಲಿ ನಿದ್ರಿಸುತಿರುವ ನೆನವುಗಳ ಮೀಟುತ್ತೆ
ಕಳವಳದ ಕನಸುಗಳ ಹರಿಸುತಿಹುದ.

ಎಳವಗಲ ತಿಳಿಯಾಳದಾಗಸವ ಹೊಗಲೆಳಸಿ
ಸುಳಿ ಸುಳಿದು ಮೇಲೇರುತೇರುತಾಡುತೆ ಹಾಡಿ
ತಿಳಿ ಗಾಳಿಗಳ ಚಿಮ್ಮಿ ಹಾಡಿಹಾಡುತಲೇರಿ
ಸಲೆ ಸೂಸಿ ಚೆಲ್ಲುವ ಸಂತಸವು ನಿನ್ನದೈಯು.

ಧರೆಯುವರ ಜೀವನವು ಕಿರಿದೆಂಬ ಬೇಸರದ
ಭರದಿ ಹಾರುತೆ ಬೇರೆ ಲೋಕಗಳ ಸಾರಿ
ಪರಿಪರಿಯು ಮೇಲ್ತೆರದ ಮಾರ್ಗಗಳನರಿತುಂ ನೀ
ಮರಳಿಳಿದು ಬಂದೆಮಂಗೆ ಬಿತ್ತರಿಸುತಿಹೆಯ್ಯೈಯು.

೩

ಬಂದು ದರುಶನವಿತ್ತು ನಂಬುಗೆಯನುಳುಹಿದ್ಯೆ
ಕಂಬನಿಗಳಿಡುವವರ ಶೋಕವಾರಿಸುತೆ;
ನಂಬಿದರ ನಂಬದರನೆಲ್ಲರನು ಮಮತೆಯಿಂ
ತುಂಬಿದತಿ ಪ್ರೀತಿಯಿಂ ಹರಸಿದ್ಯೆಯ.

ಬೇರೆ ಭಿಕ್ಷೆಯ ನಾವು ಕೇಳಿ ಕಾಡುವರಲ್ಲ
ಬಾರಿಬಾರಿಗು ಕರುಣೆ ಬೇಡುವವರಲ್ಲ
ಏರುತಿವೆ ಬೇಗೆಗಳು ಊರುತಿದೆ ಸಂಶಯವು
ದೂರಗ್ಯೆಯಲು ಇವನು ಮೇಲ್ಮೇಲೆ ಬಾರ್ಯೆ.

ಅಂತಾಗೆ ನಂಬುಗೆಯು ದೃಢವೊಂದಿ ನಿಲ್ಲುವುದು
ನಂಬದಿರುವವರೆಲ್ಲರೆಮ್ಮ ಕೂಡುವರು
ನಂಬಿರುವ ಸಂಚರಿತರ ತೊರೆಯೆಯೆಂಬಾ ಕೀರ್ತಿ
ಎಂದಿನಂತೆಯೆಂ ನೆರೆದು ಪೂಜ್ಯವಾಗುವುದು.

ಬ್ರಹ್ಮರಥ

ಮಾಲಕೌಸ್

ಬ್ರಹ್ಮಾಂಡ ಗತಿಯ ತಾನನುಕರಿಸಿ ಬರುತಿಹುದು
ಬ್ರಹ್ಮರಥ ದಿಗ್ಗಜದೊಲೆಮ್ಮ ಕಡೆಗೆ — ॥
ಸಂಭ್ರಮವ ನೋಡತ್ತ ಕೋಲಾಹಲಂಗಳನು
ಅಂಬುಧಿವೊಲೊಡ್ಡಿರುವ ಸಂದಣಿಯನು ॥

ರಥವು ಮುಂಬರಿಯಲೆನಿತು ಯತ್ನವು ನೋಡಂ
ಪಥದೊಳುತ್ಸಾಹಿಗಳ ಸಡಗರವನು
ಅತಿಚಿತ್ರ ವಿಧಗಳಿಂ ಸಿಂಗರವಗೊಂಡಿರುವ
ಅದುಂಬುತದ ಸೌಂದರ್ಯದಾಳಿಕೆಯನು.

ಕೀಲಿಲ್ಲದಿಹ ಕಲ್ಲುಗಾಲಿಗಳ ರಥವಿದು
ಕಾಲದಾದಿಯಿನಿಂತು ನಡೆಯುತಿಹುದು
ಕಾಲಕಾಲಕೆ ನೆರೆದ ಜನ ಜನಾಂಗಗಳವರು
ಶೀಲವಂತ ರಶೀಲರೆಲ್ಲರೆಳೆದಿಹರು.

ಎನಿತಂ ಬಲಿ ಹೋಮಂಗಳೊ ಎನಿತಂ ತಪವಾಹುತಿಯೊ
ಎನಿತಂ ಜನರೆನಿತೆನಿತು ವಿಧದಿ ಪೂಜಿಪರೊ
ಘನರು ಸಾಮಾನ್ಯರು ಸಮದಿ ಶ್ರಮಿಸುತ್ತಿಲ್ಲಿ
ಮನಕೆ ತೋರುವ ತೆರದಿ ಸೇವೆಗೈದಿಹರು.

ಮಂತ್ರಗಳ ಸುಸ್ವರದಿ ಪಠಿಸುತಿರುವರು ಕೆಲರು
ತಂತ್ರಿ ಕಿನ್ನರಿಗಳನು ಬಾಜಿಪರು ಕೆಲರು
ತಂಬುರಿಯ ಮಿಾಟುತ್ತೆ ಭಜನೆಗೈವರು ಕೆಲರು
ತಂಬಟೆಯ ಹೊಯ್ದು ವೈಮರೆತು ಹಲರು.

ನಾದ ರವ ರಾಗಗಳು ವಾದ್ಯಗಳ ಮೊಳಗುಗಳು
ಭೇದವರಿಯದೆ ಕಲೆತು ಘೋಷಿಸುತ್ತಿಹವು
ಭೇದವರಿಯದೆ ಇಂತೆ ಕಾಲದಂತ್ಯದವರೆಗು
ಆದಿಶಕುತಿಯಂ ವೈಮೆ ಹೊಗಳುತಿಹವು.

ಕೆಲರಸವುಸಾಸಿಗಳು ಬಲುದೂರವೆಳೆಯುವರು
ಕೆಲ ರನತಿದೂರದಲೆ ಕೈಬಿಡುವರು
ಕೆಲವು ಸಲ ವಿದರ ಗತಿ ಅಸ್ತಿಮಿತವಾಗುವುದು
ನಿಲುತೆ ಓಲುತೆ ಕೂಲುವಾ ತೆರದಿ ತೋರುವುದು.

ಸಮಭೂಮಿ

ಭೈರವ

ಗರಿಮಾಂಶ ಅಣುವಿಲ್ಲ ಗುಣಲೇಶವಿಲ್ಲ
ಸರುವ ಸಾಮಾನ್ಯ ನಾ ನವಿಶೇಷನು;
ಗಿರಿದುರ್ಗ ಪರ್ವತಾಗ್ರಗಳಂತೆ ಮರನಂತೆ
ಧರೆಯೊಳುನ್ನತಿವೆತ್ತು ಬಾಳ್ವನಲ್ಲ.

ಝರಿಯಂತೆ ರಭಸದಿಂ ಹರಿದು ಓಡುವನಲ್ಲ
ನದಿಯಂತೆ ಗಂಭೀರ ಗಮನನಲ್ಲ
ಗಿರಿಯಂತೆ ಗಾಳಿಗಳ ತೀವ್ರತೆಯ ತಡೆದು ನಾ
ಮುಂದದಿಂದ ಮಳೆಗಳನು ಕರೆಯಿಸುವನಲ್ಲ.

ಉರಿವಗ್ನಿಮುಖಿಗಳಂ ಬಸಿರೊಳಾಂತವನಲ್ಲ
ಧರೆಯಸ್ಥಿಭಾರಗಳ ನಡುಗಿಸುವನಲ್ಲ
ಕಿರಣಗಳ ಪ್ರಸರದಿಂದಿರಿದು ಕತ್ತಲೆಯುರವ
ತರಣಿವೊಲು ಎಲ್ಲವನು ಬೆಳಗುವವನಲ್ಲ.

ನನ್ನ ವಕ್ಷದಮೇಲೆ ಸುಳಿವ ಗಾಳಿಗಳೆಲ್ಲ
ಖಿನ್ನತೆಯ ತೋರಿ ಬಿಸುಸುಯ್ಯುತಿಹವು.
ಉನ್ನತಿಯ ದೊರಕಿಸುವ ಆಸೆ ಭರವಸೆಯೆಲ್ಲ
ಮುಂನ್ನವೇ ಹೋದಂತೆ ನೈರಾಶ್ಯವಿಹುದು.

ನಿಲ್ಲಿಸಮ್ಮ

ಯರಕಲ ಕಾಂಭೋಜಿ

ಬಲುದಿನಕೆ ಬಂದಿಹನು ಬಲುಚತುರನಿವನಮ್ಮ
ನಿಲಲಿಲ್ಲಿ ನಾಲ್ಕುದಿನ ನಿಲ್ಲಿಸಮ್ಮಾ— ॥
ಮರುಳು ಮಾತುಗಳಾಡಿ ನುಸುಳಿಹೋಗುವನಮ್ಮ
ಮರಳಿ ಬಾರನು ಸುಲಭನಲ್ಲವಮ್ಮಾ ॥

ಮುಂಗುಡೆ ನಾನಿವನೊಳು ಸೋತಿಹುದನರಿತು ತಾ
ಬಗೆಗೆ ಬಂದಂತೆಲ್ಲ ಕಾಡುತಿಹನಮ್ಮ;
ಹಗಲೆನ್ನದಿರುಳೆನ್ನದಿವನ ಜಾನದೊಳಿರುವೆ
ಜಗದವರ ಸರಿಯುವರ ನಗುವ ಲೆಕ್ಕಿಸದೆ.

ಈಗ, ಅರೆಗಳಿಗೆಗೆ, ಬೇಗ ಬರುವೆನು ಎಂದು
ಹೋಗಿ ಮಾಸಗಳೆರಡು ಕಳೆದುವಮ್ಮಾ;
ಆಗ ಹೋದವ ತಿರುಗಿ ಈಗ ಮೊಗದೋರಿಹನು
ಈಗ ಹೋದೊಡೆ ಇನ್ನು ಬಾರನಮ್ಮ.

ಒಂದು ದಿನ ದೂತಿಯಿವ ಬಹನೆಂದು ಹೇಳಿರಲು
ಗಂಧ ಹೂವುಪಹಾರವಣಿಗೊಳಿಸಿದೆ
ಚೆಂದದಲಿ ವೀಣೆಯನು ಶ್ರುತಿಗೈದು ಕಾದಿದ್ದೆ
ನಿಂದಲಂಕಾರದಲಿ ಬಾಗಿಲೊಳಗೆ.

ಅಂದು ಬೆಳಗಾಡಿದ್ದ ಮಾತು ಅಂದೇ ಆಯ್ತು
ಹೊಂದಿದಾಸೆಯುದೆಲ್ಲ ಭಂಗವಾಯ್ತು
ಇಂದಿವನು ನೆವಹೇಳಿ ಹೋದೊಡಾನುಳಿದಿರೆನು
ನೊಂದು ಬಳಲಿದೆನೆನಿತೊ ಸೈಸೆನಿನ್ನು.

ಮಧುಮಾಸ

ಮಲಯಮಾರುತ

ಮಧುಮಾಸ ಬಂದಿಹುದು ಮಧುಕರಿಗಳೇ ಬನ್ನಿ,
ಮಧುರತರ ಗೀತಗಳಿನಾವು ನಲಿವ — ॥
ಹೃದಯದಾಸೆಗಳೆಲ್ಲ ಫಲಿತವಾಗುವ ಕಾಲ
ಮೃದು ಹೃದಯ ಕುಸುಮಗಳು ಅರಳ್ವ ಕಾಲ ॥

ಮಳೆಗಾಲ ಹಿಮಗಾಲ ಚಳಿಗಾಲ ಹೋಗಿಹವು
ತಳಿರ್ಗಾಲ ಬೆಳೆಗಾಲ ಫಲಗಾಲ ಬಹವು
ಇಳೆಯ ವಿಭವಗಳೆಲ್ಲ ಮೊಳೆತು ಬೆಳೆಯುವುವೆಂದು
ಹೊಳೆ ಹೊಳೆದು ಹೊತ್ತರೆಯ ರವಿಯು ಹೇಳುವನು.

ಎಲ್ಲ ತರುಗಳು ತಳಿರ್ವ ಮುನ್ನಮೇ ತಳಿರ್ವಿಡಿದ
ಬಿಲ್ವ ಬೇಲ ತಮಾಲ ಮೊದಲೆ ಬಂದು
ಎಲ್ಲವನು ಆಳ್ವರಸು ವಸಂತನೆಂದುಸಿರುತಿವೆ
ಎಲ್ಲ ಪರಿ ಜೀವನವು ಹೊಸತಪ್ಪುದೆಂದು.

ಹುಲ್ಗರಿಯ ಶಿರದಲ್ಲಿ ಮಾಂದಳಿರ ತಳದಲ್ಲಿ
ಮೊಲ್ಲೆ ಮಲ್ಲಿಗೆ ತೆರೆದು ಬಿರಿಯುತಿರುವಲ್ಲಿ
ಚೆಲ್ವ ಹಸುರ್ಗೊನೆಯಲ್ಲಿ ನೆಲ್ಲಹೊನ್ದೆನೆಯಲ್ಲಿ
ಚೆಲ್ಲಿಹವು ಇಬ್ಬನಿಯ ಮುತ್ತುಗಳಿವಿಲ್ಲಿ.

ಮೋಡಗಳು ನೇಮದಿಂ ಶುಭ್ರವಸನವನುಟ್ಟು
ಮೂಡುತಿಹ ಸೂರ್ಯನಿಗೆ ಅರ್ಘ್ಯವಿತ್ತು
ಮೂಡಣಾಗಸದೊಳಾಸನವ ರಚಿಸುತ್ತೆ
ನೀಡುತಿವೆ ತನುಗಳನ್ನಾತ್ಮಕಾಣಿಕೆಯಾಗಿ.

ಬೆಳಕು ಹರಿಯುದ ಮುನ್ನ ಮರದ ಮೇಲ್ಗೂಗೆ ಸೇರಿ
ಎಳಬೆಳಕು ಕಳೆಗಳನ್ನಿದಿರುಗೊಳಲೆಂದು
ಕೊಳೆ ನಿದ್ರೆಯೊಳು ಕಾಲ ಕಳೆಯದೇಳಿರೆನುತ್ತೆ
ಬಳಗವನು ಕೋಗಿಲೆಯು ಕೂಗಿ ಕರೆಯುತಿದೆ.

ನಿಶಿಯೆಲ್ಲ ನೀರಧಿ ಯಭಂಗ ಶಾಂತಿಯೊಳಿದ್ದು
ಮಸುಕು ಮುಂಜಾವದಲಿ ನಿದ್ರೆ ತಿಳಿದೆದ್ದು
ಶಿಶುಗಳಹ ತೆರೆಗಳನು ದೆಸೆದೆಸೆಗೆ ಕಳುಹುತ್ತೆ
ಹೊಸ ಸಖನು ಬರುತಿಹಂದ ಸಾರುತಿಹುದು.

ಸರಸಿಯು ಸುಶಾಂತವಕ್ಷದಲಿ ಕಣ್ಮುಚ್ಚಿ,
ಮರೆತು ವಿಶ್ರಮಿಸಿದ್ದ ಕಮಲಿನಿಯು ತಾನು
ದರಹಸಿತ ವದನದಿಂದಿನಿಯ ನರುಣತೆಯಾಂತು
ದಳದೆರೆದು ಬಿರಿದರಳ್ದು ಮೊರೆಯುತಿಹಳು.

ವೀಣಾಗಾನ

ಶ್ರೀರಂಜನಿ

ಗಂಧರ್ವ ಗಾನಕಿದು ಮಿಗಿಲೆನಿಸಿ ರಂಜಿಪುದು
ಚಂದದಿಂ ಗಾಂಧಾರ ನುಡಿಯುತಿಹುದು — ॥
ತಂಬುರಿಯ ಇನಿನಾದದೊಡನೈಕ್ಯವೊಂದುತಲಿ
ತಂಬಿದಾನಂದದಿಂ ಮೊಳಗುತಿಹುದು ॥

ಎಳದುಂಬಿ ಮಧುವಿಂಗೆ ಬಾಯಾರುತೈತಂದು
ತಳಿತ ಮಾಮರನೇರಿ ಮೊರೆಯುವಂತೆ
ಅಲರ ಪರಿಮಳವೆಳಸಿದೆಳಗಾಳಿ ಸುಳಿವಂತೆ
ನಲವಿಂದ ಬಳಿವರುವ ಇನಿಯಳಂತೆ.

ಬಳಿವಂದು ನಗುನಗುತೆ ಮೊಗದಿ ಮೊಗವಿರಿಸುತ್ತೆ
ನಲಿಯುತುಲಿಯುತಲಿರುವ ಹಸುಳೆವೋಲು
ಸುಳಿಗಾಳಿಯೊಡನಾಡಿ ವಿಹರಿಸುವ ಮಲ್ಲಿಗೆವೊ
ಲೆಳಮಿಂಚು ಗಗನವನು ತಿವಿದು ಹೊಳೆವಂತೆ.

ಮನದ ಸಂತಸವೇಗದೊಳಗೆದ್ದು ಮುಳುಗುತ್ತ
ಲನಂನಯದಿ ರಸ ರಾಗ ಪೂರ್ಣವಾಗಿ
ಧನಿಯೊಳಗೆ ದನಿ ಸೇರಿ ತನಿಗೊಂಡು ಮೆರೆವಂತೆ
ಮನದಾಳವನ್ನಳೆದ ಮನ ಸೋಲುವಂತೆ.

ನಾದದೇವನು ತಾನು ಸೇವೆಗೊಳ್ಳಲು ಬಂದು
ಅದರದಿ ಗಾಯಕನ ಮೈಸೋಕುತಿಹನೊ !
ಮೇದಿನಿಯ ಸೌಂದರ್ಯ ಇಂಬುವೆತ್ತುದ ಕಂಡು
ಸೋದರತೆಯಿಂ ದನಿಯ ಸೇರಿಸುತ್ತಿಹನೊ.

ನಮಿಸುತ್ತೆ ಭ್ರಮಿಸುತ್ತೆ ಕ್ರಮದೊಳಾಕರ್ಷಿಸುತೆ
ಗಮಕ ಲಯ ತಾನಗಳಿನಾವರಿಸುತಿಹುದು
ಅಮರರನು ಗೆಲ್ದೊಲಿಪ ಮೇಲ್ಗಾನ ತನತೆಂದು
ಮಮತೆಯಲಿ ದೆಸೆದೆಸೆಗೆ ಸಾರುತಿಹುದು.

ಹೊಸಪರಿಯ ಸೊಬಗೊಂದು ಹರಿದು ಬಂದಿಹುದೆಂದು
ಮಿಸುಪ ಕಳೆ ತಳೆದಿಳೆಯು ನಲಿಯುತಿಹುದು
ರಸಭಾವದನುಭವವು ಹೃದಯ ತಂತ್ರಿಯ ಮಿಡಿತೆ
ಸರಸತಮ ಭಾವದಲಿ ಅನುಸರಿಸುತಿಹುದು.

ಹೇಮಂತ ಸಾಮ್ರಾಜ್ಯ

ಸುತ್ತಣಾವರಣದಲಿ ಸೊಗವಿಲ್ಲ ನಗೆಯಿಲ್ಲ
ಮುತ್ತಿಬಹ ಭ್ರಮರಿ ಝಂಕಾರವಿಲ್ಲ
ಎತ್ತರಕೆ ಬೆಳೆದಿರುವ ವಿಧುರ ತರುಶಾಖೆಗಳೊ
ಳೊಂದರೊಳು ಕಾಯಿಲ್ಲ ಹಣ್ಗಳಿಲ್ಲ
ಹತ್ತಿರದ ಮರಗಳಿಂದುಲಿಯೆ ಕೋಗಿಲೆಯಿಲ್ಲ
ಉತ್ತರವ ಮಾರುಸಿರೆ ಕುಸುಮವಿಲ್ಲ
ಎತ್ತೆತ್ತಲಿರುತಿಹುದು ವಿಗತ ಸೌಂದರ್ಯಗಳ
ನಿಟ್ಟುಸಿರು ಕರೆಯುತಿಹ ಶೂನ್ಯಲೋಕ.
ಶಾರದದ ಶುಭ್ರಾಂಶುವಿಂದು ಕಳೆಗುಂದಿಹನು
ನಭದ ತಾರೆಗಳೆಲ್ಲ ಮಲಿನವಾಗಿಹವು
ಕಿರಣ ತೀಕ್ಷ್ಣತೆಯಿಂದ ಧರೆಯ ದಹಿಸುವ ಸೂರ್ಯ
ಕುಳಿರ ಶರಘಾತದೊಳು ನೊಂದು ಕಂದಿಹನು
ಸಂಜೆ ಹೊತ್ತರೆಗಳಲಿ ಮಂಜು ಮುಸುಕೆಲ್ಲವನು
ಅಂಜಿಸುತ ಸಂಕೋಚಗೊಳಿಸುತಿಹುದು
ಪತ್ರಫಲ ಪತನದಿಂ ಬಂದ ರಿಕ್ತತೆಯಿಂದ
ಶುಷ್ಕ ಪ್ರೇತಗಳಂತೆ ತರುಗಳಿಹವು.
ವಸಂತದುಜ್ವಲಕಾಂತಿ ಸಿಂಗರ ಬೆಡಂಗುಗಳು
ಮಂಗಳದ ಗೀತಗಳು ಕಂಗಳುತ್ಸವವು
ಸಂತಸದ ಕೂಟಗಳು ಕಂಗೊಳಿಪ ನೋಟಗಳು
ಚೆಂಗುಡಿಗಳುಯ್ಯಾಲೆಗಳೆಲ್ಲ ಹೋಗಿಹವು.

ಉಲಿವ ಗಿಳಿ ಕೋಗಿಲೆಗಳುಲ್ಲಾಸ ಮರೆತಿಹವು
ಮಲರ್ದಣ್ಪು ಬಾಣದೊಲು ತನುವ ಸೀಳುವುದು
ಕುದಿವ ಪ್ರಾಯವು ಹೋಗಿ ಅದಿರ್ಮುಪ್ಪು ಬಂದಿಹುದು
ಮೊನೆಮುಳ್ಗಳುಳಿದಿಹವು ಸುಮರಾಜಿ ಹೋಗಿ.

ಸೂರ್ಯ

ಮೋಹನ

ಕಾಲಕ್ಕೆ ಚಲನೆಯನ್ನಿತ್ತು ನಿರ್ಧರಿಪಾತ
ಲೀಲೆಮಿಗೆ ಋತುಧರ್ಮ ನಡಸುವಾತ
ಕಾಲಾಗ್ನಿರುದ್ರನ ಫಾಲದಲ್ಲುರಿವಾತ
ಮೂಲೋಕ ಸೌಂದರ್ಯ ಸೌಖ್ಯದಾತ.

ಜಗದುದಯಕಾರಣಗೆ ಕಣ್ಣ ಹೊಳಪಾಗಿರುತೆ
ನಿಜಸತ್ವದಿಂ ಖಗಣ ನಲಿಸಿಹಾತ
ಕರಸೂತ್ರದಿಂ ಪಿಡಿದು ಆಯುಗಳನೀಯುತ್ತೆ
ತ್ರಿಜಗಮಂಡಲಗಳಿಗೆ ಗತಿಯಿತ್ತಿಹಾತ.

ಒಂದೆಡೆಯೊಳೊಂದು ಪರಿಯೊಂದು ಕ್ಷಣ ನಿಲ್ಲದೆಯೆ
ಒಂದು ಬಿಡದೆಲ್ಲವನು ಬೆಳಗುವಾತ,
ಕುಂದದಿಹ ಶ್ರದ್ಧೆಯಿಂ ದಮಿತ ಸೌಹಾರ್ದದಿನ
ನಂತ ಸಂಸಾರವನು ಹೊತ್ತಿಹಾತ.

ಹಗಲಿತ್ತು ನಿಶಿಯಿತ್ತು ಮಾಸ ವರುಷಗಳಿತ್ತು
ಮಿಗಿಲಾಗಿ ಸಂಜೆಯುಷೆ ಸಂತಸಗಳಿತ್ತು
ಯುಗಭಾಗ್ಯ ಹರಿವನ್ನ ಸಾವು ಬಾಳ್ಕೆಗಳಿತ್ತು
ಬಗೆಯನುದ್ದೀಪಿಸುತೆ ಜ್ವಲಿಸುವಾತ.

ಪ್ರತಿಧ್ವನಿ

ದೇಶಿ ತೋಡಿ

ಕಡೆ ನುಡಿಯ ನುಡಿಯುತಿದೆ ಮಾರುದನಿ ಮೊಳಗುತಿದೆ,
ಆಲಿಸಾಲಿಸದನು ! — ॥

ಹೇಳಿದುದ ಹೇಳುತಿದೆ — ಕೇಳಿದುದ ಕೇಳುತಿದೆ
ಆಲಿಸಾಲಿಸದನು ! ॥

ಪ್ರಶ್ನೆಯೆಂತಿದ್ದರಂತು ಬಹುದುತ್ತರವು
ಪ್ರಶ್ನೆ ನಿಲ್ಲಲು ನಿಂತು ಮೌನವಾಗಿ ; ಆ
ದರ್ಶ ರೂಪವನು ಪ್ರತಿಬಿಂಬಿಸುವವೋಲು
ದಾರ್ಶನಿಕನೊರ್ವನೊಲು ಸತ್ಯವುಸಿರುವುದು.

ಪ್ರಕಾಂಡ ಗಿರಿಸಾನು ತಿವಿತಿವಿದು ಬರುತಿಹುದು
ಅಖಂಡ ವ್ಯಾಪ್ತಿಯ ತೋರಿ ಸುತ್ತಿಬಹುದು
ಅಜಾಂಡ ಮಂಡಲ ಬಳಸಿ ಉತ್ತರವ ತರುವಂತೆ
ನಿಜಾಂಶವುಸಿರುತಿಹ ಭೃತ್ಯನಂತೆ.

ಭಾವದುದ್ರೇಕದಾವೇಶದಲಿ ಕೂಗಿ
ಕಾವ ದೇವನು ಒರ್ವನಿರ್ಪನೋ ಎನಲು
ಆವ ದೇವನು ಒರ್ವನಿರ್ಪನೋ ಎಂಬುದದು,
ಕರುಣೆಯೇನೆಂದೆನಲು ಋಣೆಯೆಂಬುದು.

8K1·7
S17

ರಾಜನ ಮೃತ್ಯುಶಯ್ಯೆ

5589

ಯಮನ ಸದನಕೆ ಪೋಪಿಂದು ಭಯವಿದೇಕೆ?
ಮನವೆ ನೀ ಹಿಂದೆಗೆವೆಯೇಕೆ?
ಇನಿತಸಂತುಷ್ಟಿಯೇಕೆ?— ||

ನಾಲ್ವರಿಗೆ ಅತಿಶಯಂದ ಬಾಳನೊಂದಿದ್ದೆಯೇ
ಆಳ್ವರಸುತನಗಳಿಂ ಸುಖಿಸಿದ್ದೆಯೇ ||

ವಿದ್ಯೆಗಳ ಕಲಿತಾಯ್ತು ವಿನಯವಾರ್ಜಿಸಿಯಾಯ್ತು
ಬುದ್ಧಿಗಳನರುಹಾಯ್ತು ದಾನವಿತ್ತಾಯ್ತು
ಯುದ್ಧರಂಗದಿ ನಿಂದ ವೈರಿಗಳನೊರಸಾಯ್ತು
ಉದ್ಧತರ ಗರುವಗಳ ಮುರಿದುಂದಾಯ್ತು.

ಸಾಕೆಂದು ತೋರುವಿನಮೀಭವದ ಸೌಖ್ಯಗಳ
ಲೋಗರಿಗೆ ಮೇಲಾಗಿ ಪಡೆದಿದ್ದೆಯೇ
ಭೋಗದಾಸೆಗಳೆಲ್ಲ ಆರಿ ತೀರಿದುವೆಂದು
ಹೋಗುಗಾಲದ ಬರವ ಬಯಸಿದ್ದೆಯೇ.

ಧಮನಿಯೊಳಗಣ ರಕ್ತ ತಣ್ಪನೊಂದಿಹುದೀಗ
ಮಮತೆ ಮಚ್ಚರದೆಲ್ಲ ಕುದಿಯುಂ ಹೋಯ್ತು
ಅಮಿತ ವೃತ್ತಿಗಳಲ್ಲಿ ಮೊದಲೆ ಬೇಸರ ಬಂದು
ಸ್ತಿಮಿತದಲಿ ಈವರೆಗು ಮನವಿದ್ದುದೇ.

ಯೌವನವು ಉಡುಗಿಹುದು ದಾಹಗಳಡಂಗಿಹವು
ಯೌವನದ ಸಂಗಡಿಗರೆಲ್ಲ ತೀರಿಹರು;
ಜವನ ಸೇವಕರಿಂದು ಕರೆಯೆ ಬಂದಿರುವಾಗ
ಅವನಿಜೀವನದಾಸೆ ತೀರದಿಹುದೇ!

ಋತುಗಳ ಹೇಳಿಕೆ

ಭೂಪಾಳಿ

ಕರ್ತವ್ಯಕರ್ಮವಿದು, ನಿತ್ಯ ಕರ್ಮವಿದು
ಸತ್ಯ ಸಂಕಲ್ಪನ ನಿತ್ಯ ನಿಯಮವಿದು — ॥

' ಮೊಳೆವುದನು, ಬಾಲ್ಯದಲಿ ಕಲಿತು ಬೆಳೆವುದನು,
ಬೆಳೆದು ಫಲಗಳ ತಳೆದು ಸೇವೆಗೈವುದನು,
ಫಲವಿತ್ತ ಬಳಿಕಂತೆ ಬಲಗುಂದಿ ಕಳೆಗುಂದಿ
ಕಳಿಕಳಿತು ಕೊಳೆಕೊಳೆತು ಅಳಿದು ಹೋಹುದನು,

— ಜೀವನದ ನಾಟ್ಯವನು, ಆಡಿತೋರಿರಿ ' ಎನಲು
' ದೇವನಾಣತಿ ' ಎಂದು ಬಾಗಿ ಹೊತ್ತಿಹೆವು
ಕಾವಪಿತನವನಾವ ಕಾರ್ಯಸಾಧನೆಗೆಮ್ಮ
ಜೀವನವ ಸಮೆದಿಂತು ಗೈದಿಹನೊ ಕಾಣೆವು.

ಜೀವವಿತ್ತವನವನು ಜೀವ ನಡಸುವನವನು
ಜೀವರಿಗೆ ಚೈತನ್ಯದಾತನವನು
ಜೀವನದ ನಾವೆಯನು ನಡಸುವಂಬಿಗನವನು
ಯಾವ ಪರಿಣಾಮಕೊ ಎಳೆಯುತಿಹನು.

ನಮಗಿತ್ತ ಕರ್ಮಗಳ ಆಚರಿಸುತಿಹೆವಾವು
ಕ್ರಮವೇಕಿದಿಂತೇಕೆ ಎನ್ನಲಂಜುವೆವು
ಭೂಮಿ ಹುಟ್ಟುವ ಮುನ್ನ ನಮಗಿತ್ತ ಆಜ್ಞೆಯಿದು
ಅವನಿಗತಿ ಹರಿವನ್ನ ನಡಸಿಕೊಳ್ಳುವೆವು.

ನಾಟಕದ ನಟರಂತೆ ಪಾತ್ರಗಳ ವಹಿಸಿಹೆವು
ನಾಟಕದ ಸೂತ್ರಗಳ ಹಿಡಿದಿರುವನವನು
ಆಟ ಮುಗಿಯುವವರೆಗು ನೋಟ ದಣಿಯುವವರೆಗು
ನಾಟ್ಯ ನಟರಾವುಗಳು ನೋಟ ತೋರುವೆವು.

ಮುಂಗಾರು

ಯಮುನ್

ಭೀಷಣ ವರ್ಷಧಾರೆ ! ಕಾರ್ಮುಗಿಲ ಸಿಡಿರೋಷ !
ದಿಗ್ಭಿತ್ತಿಯೊಡೆವಂತೆ ವಜ್ರ ನಿರ್ಘೋಷ !
ಬೇಸಗೆಯ ತೇಜಃ ಪ್ರಭಾವದಿಂ ಬಸಿವೊತ್ತ
ಶ್ರಾವಣದ ದುರ್ದಮ್ಯ ಮೇಘಮಾಲೆ !

ಸಾಗರ ನಿಗೂಢ ಗಹ್ವರಗಳಿಂದೆದ್ದು
ಸಾಗಿ ಸಂತತವಾಗಿ ಮದಮಾಂದ್ಯದಿಂದ
ಕೂಗಿ ಭೋರಿಡುತಿರುವ ಬಿರುಗಾಳಿಗಳ್ವೆರಸು
ರೇಗಿ ರೌದ್ರದಿ ಕವಿದು ಸುರಿಯುತಿಹುದು.

ಹೆಸರ್ಗೆ ಸಾರ್ಥಕ್ಯವನ್ನಿತ್ತ ಸೂರ್ಯನು ಅತ್ತ
ಕಿಸುರುರದ ಕರ್ಬಸಿರ ಮರೆಯೊಳಿಹನತ್ತ
ಹೊತ್ತ ವರ್ಷದ ಭಾರವೆಳೆಯುತಿರಲೆಮ್ಮತ್ತ
ಮತ್ತಗಜ ನಿಕುರುಂಬದಂತೆ ಬರುತಿಹುದು.

ಏಂ ಭಯಂಕರ ಸೌಂದರ್ಯವೊ ಇದು ಕಾಣೆ
ಕಂಗಳಲಿ ತಿವಿಯುತಿದೆ ಮಿಂಚಿ ಗುಡುಗುತಿದೆ !
ಭೂಮ್ಯಂತರಿಕ್ಷಗಳ ಬಲಿದೊಂದಗೈಯುತ್ತ
ಭೂಮ್ಯಂತರಾಳಗಳ ಹೊಕ್ಕು ನಡುಗಿಸುತ !

ಶಾಂತಿ

ಶಾಂತಿ ಮನಕಂದುಬಹುದಂದುಬಹುದು — ॥
ನೆನಪಳಿಸಿ ಹೋಹಾಗ ಮನವು ಮನ್ನಿಸುವಾಗ
ಜಗದ ಬಗುಳುವ ಬಾಯಿ ಮುಚ್ಚುವಾಗ ॥

ಏಳ್ಗೆಯಲಿ ಬೀಳಿನಲಿ ನಾಲ್ದೆಸೆಯ ಕಷ್ಟದಲಿ
ಆಳ್ವರಸುತನದಲ್ಲಿ ಆಳುತನದಲ್ಲಿ
ಕೀಳ್ಜನಂಗಳು ಸೇರಿ ದೂಷಿಸುವ ಕಾಲದಲಿ
ಮೇಲ್ಮತಿಯ ಭಾವದಲಿ ಮನವು ನಿಲುವಂದು.

ಹೆಣ್ಗಳೋರೋರ್ವರಲಿ ಸಹನೆ ಬರುವಂದು
ಹೊನ್ನು ಹೆಣ್ಗಳಿಗಾಸೆ ತೊಲಗುವಂದು
ಮಂಗಳಾಮಂಗಳದಿ ಸಮಭಾವ ಬರುವಂದು
ಸಂಗ ಸೌಖ್ಯದ ದಾಹವಡಗುವಂದು.

ಜಗವಿತ್ತುದನು ಕೊಂಡು ಜನ ತುಷ್ಟಿವಡುವಂದು
ಹಗೆಯ ಉತ್ಕರ್ಷೆಯಲಿ ನಲಿಯುವಂದು
ಜಗದ ವೈರಗಳತ್ತ ಪ್ರತಿಚಿಂತನಗಳಿತ್ತ
ಬಗೆಯ ಪಟದಿಂ ತೊಡೆದು ಹೋಗುವಂದು.

ದುರ್ಮದದ ಹೆಮ್ಮೆಯಲಿ ಈಶ್ವರರು ನಾವೆಂಬ
ಧರ್ಮಮರ್ಮಗಳೆಲ್ಲ ನಮ್ಮ ಸುಖವೆಂಬ
ಬ್ರಹ್ಮಸೃಷ್ಟಿಯೊಳಾವು ಕೊನೆಮೆಟ್ಟಿಲವರೆಂಬ
ಬ್ರಹ್ಮನಿಚ್ಛೆಯ ನಾವು ಬಲ್ಲೆವೆಂಬ,

ನಮ್ಮ ಶಕ್ತಿಗಧೀನವಭ್ಯುದಯ ಪತನಗಳು
ನಮ್ಮಧೀನದ ದಾಸಿ ಪ್ರಕೃತಿಯೆಂಬ
ನಮ್ಮ ಸಿದ್ಧಾಂತಗಳೆ ನಿತ್ಯಸತ್ಯಗಳೆಂಬ
ನಮ್ಮಸತ್ವದ ತರ್ಕ ಉರುಳಿಬೀಳ್ವಂದು.

ಪ್ರಿಯರು

ಮಾಂಡು

ಎನ್ನರಸಿ ನೀನಲ್ಲಿ
ನಿನ್ನರಸಿ ನಾನಲ್ಲಿ
ಚೆನ್ನರಸಿ ನೀನಿರುವೆ
ಎನ್ನೊಲುಮೆ ರಾಜ್ಯದಲ್ಲಿ.

ತಣ್ಣೆಳಿಯ ದೆಸೆಯಲ್ಲಿ
ತಿಂಗಳಿನ ಬೆಳಕಲ್ಲಿ
ಸಂಪಗೆಯ ತಳದಲ್ಲಿ
ತಂಗಾಳಿಯೊಯ್ಯನೆ ಬೀಸುವಲ್ಲಿ.

ಎಲೆವೊಲಾನಿದ್ದಂದು
ಹೂವಿನೊಲು ನೀನಿದ್ದೆ
ಸಂಮುದೊಲಾನಿರುತಿರಲು
ನೀನಂ ಪರಿಮಂಳವು;

ಫಲದೊಲಾನಿರುವಂದು
ಸವಿಯಂವೊಲು ನೀನಿರುವೆ
ಎನ್ನ ಹೃದಯವು ನೀನು
ನಿನ್ನ ನಲ್ವನೆಯುಂ ನಾನು.

ನಿನ್ನ ಕಣ್ ಹೊಳಪಿನಲಿ,
ಸ್ನೇಹದಲಿ ಪ್ರೇಮದಲಿ,
ನಿನ್ನ ಕಣ್ವಾಲಯುಗಳ
ಜ್ವಲಿಪ ಜೊನ್ನದಲಿ,

ಎನ್ನ ಪ್ರಾಣದ ಪುರುಳ
ಎನ್ನ ಜೀವನ ರುಚಿಯು
ಎನ್ನ ಗರಿವೆಂಯು ತೆನೆಯು
ಕಾಣುತಿಹೆ ಸುಖವ.




ಪ್ರಳಯ ತಾಂಡವ


ಶ್ರೀಮಾನ್ ನಂದಲಾಲ ಬಸು ಅವರ ಕೃತಿ



ಕಾರಂಜಿ ಕೆರೆ ದಾರಿ, ಮೈಸೂರು



ವೀಣೆ ಶೇಷಣ್ಣನವರು
ಶ್ರೀಮಾನ್ ಕೆ. ವೆಂಕಟಪ್ಪನವರ ಕೃತಿ



ಶಿವ ತಪೋನಿಷ್ಠ

ಶ್ರೀಮಾನ್ ನಂದಲಾಲ ಬಸು ಅವರ ಕೃತಿ

ನನ್ನ ನಿನ್ನ ಕಾರ್ಯಗಳು

ಕಾರ್ಯಗಳನು ಕೊಂಡು ಯತ್ನಗೈವುದೆನ್ನದು
ಪ್ರಯತ್ನಗಳನು ಸಫಲಗೊಳಿಪ ಭಾರ ನಿನ್ನದು.

ಹೊಸತ ಸೃಜಿಸಿ ಬಲಗಳೀವ ಕ್ರಿಯೆಯು ನಿನ್ನದು
ಒಸೆದು ಕೊಂಡು ಸಾಧಿಸುವ ಕ್ರಿಯೆಯು ನನ್ನದು.

ಮನದ ಶಕುತಿ ಕೈಯ ಕುಶಲವೆಲ್ಲ ನಿನ್ನದು
ಘನತೆಯಾಸೆ ಮಾಳ್ಪ ಕರ್ಮವಿವುಗಳೆನ್ನವು.

ಕರಣಗಳನು ಶುದ್ಧಗೊಳಿಪ ಪಾಲು ನಿನ್ನದು, ಆ
ಕರಣಗಳು ಹೂಡಿ ಪಡೆವ ಫಲಗಳೆನ್ನವು.

ವಿವಿಧ ವಸ್ತುಗುಣದ ಜ್ಞಾನ ದಾನ ನಿನ್ನದು
ವಿವಿಧ ವಿಧದಿ ಹಿತವ ಗಳಿಪ ಕರ್ಮವೆನ್ನದು.

ಮನಕೆ ಬಂದ ಕೊಂಕು ಪರಿಯೊಳೆಂತೊ ಗೈವೆವು
ಮರಳಿ ವಿಧಿಯನೊಂದ ಶಪಿಸಿ ಬಳಲುತಿರುವೆವು.

*　　　　*　　　　*

ಹಾರಲೆಂದು ಪಕ್ಷಿಗಳಿಗೆ ಗರಿಗಳಿತ್ತೆ ನೀ
ಹಾರದೆಯೇ ಬರಿದೆ ಚೀರೆ ದೋಷವಾರದೋ !

ಏಳಿ

ಹಂಸಧ್ವನಿ

ರೋದಿಸಿದರೇನು ಫಲವೇಳಿರೇಳಿರಿ ಸಖರೆ
ಸಾಧಿಸುವ ಜನತೆಯು ಜಯವ ಮಂಗಳವ
ಹೋದುದು ಹೋಗಲೇಳಿರದಕೇಕೆ ಬರಿ ಚಿಂತೆ
ಆದುದಾಗಲಿಯೇಳಿ ಭಯವದೇಕೆ?

ನಾವು ಗೈಯದೊಡಿನ್ನಾರು ಗೈವರು ಕಾರ್ಯ
ನಾವು ನಿಲ್ಲದೊಡಾರು ಮುದೆ ನಿಲುವವರು
ನಾವು ದೇಶದ ಯಶದ ಮಂದಿರಕೆ ತಳಪಾಯ
ನಾವು ನಾಳಿನ ಮಾನ ಕಾಯ್ವ ಭಟರು.

ಹುಟ್ಟಿಸಿದ ದೇವನೆಂತೊ ಪೊರೆಯುವನೆಂಬ
ಕಷ್ಟಗಳನಿತ್ತವನೆ ಪರಿಹರಿಪನೆಂಬ
ಸೃಷ್ಟಿಸಮಯದಿ ಬರೆದ ಹಣೆಯಬರಹವಿದೆಂಬ
ನಷ್ಟಸತ್ತ್ವರ ತತ್ತ್ವ ದೂಡಿಬಿಡಿರೇಳಿ.

ಅಜ್ಞಾನ ತಿಮಿರವನು ಹೋಗಲಾಡಿಸಿರೇಳಿ
ಸುಜ್ಞಾನ ದೀಪಗಳ ಬೆಳಗಿರೇಳಿ
ಸಜ್ಜನರ ದುರ್ಬಲರ ಪಕ್ಷವನು ವಹಿಸುತ್ತೆ
ದುರ್ಜನದ ದುರ್ಮದವ ಮುರಿಯಿರೇಳಿ.

ನಮ್ಮ ಹಿರಿಯರ ಧರ್ಮ ನಮ್ಮ ಕಾಲದ ಕರ್ಮ
ನಮ್ಮ ಭಾರತಭೂಮಿ ದಿವ್ಯ ಮರ್ಮ
ನಮ್ಮ ಸಂಕಲ್ಪಗಳ ಸಂಪೂರ್ಣ ಲಕ್ಷ್ಯಗಳ
ಒಮ್ಮನದ ಯತ್ನಗಳನರುಹಿರೇಳಿ.

ಹಂದೆತನವಲಸತನದಿಂದ ಬಿಡುಗಡೆಯೊಂದಿ
ಅಂದಂದಿನಪಮಾನ ತೊಳೆಯಿರೇಳಿ
ಇಂದು ನಿರ್ಭಯದಿಂದ ರಂಗದಲಿ ಕಾದಿದೊಡೆ
ಹಿಂದಿನಪಮಾನಗಳು ತೊಳೆವುವೇಳಿ.

ಪ್ರಾರ್ಥನೆ

ತಿಳಿಗಾಳಿ ತೀಟದಲಿ
ಮಳೆಗಾಳಿ ಬಿರುಸಿನಲಿ
ಬಿರುಗಾಳಿ ಬೀಸಿನಲಿ

ಬರುವ ಮೂರುತಿಯೆ,
ಚಲನೆಯನು ಬರಿಸಯ್ಯ
ಹೃದಯ ನಿಂದಿಹುದು.

ಸರದ ಕಲ್ಲೋಲದಲಿ
ನದಿ ತರಂಗಗಳಲ್ಲಿ
ಕಡಲ ನೊರೆ ತೆರೆಗಳಲಿ

ಮೊರೆವ ಮೂರುತಿಯೆ
ಚೇತನವ ಬರಿಸಯ್ಯ
ಉರುಬು ಹೋಗಿಹುದು.

ಚಿಗುರು ಗೊಂಚಲಿನಿಂದ
ಅರಳ್ವ ಹೂದಳದಿಂದ
ಬಿರಿವ ಹಣ್ ಬೆಡಗಿಂದ

ಮೆರೆವ ಮೂರುತಿಯೆ
ಚೆಲುವ ನೀ ತಾರಯ್ಯ
ಬಣ್ಣಗೆಟ್ಟಿಹೆನು.

ಹಕ್ಕಿಯಿಂಚರದಲ್ಲಿ
ಮಗುವ ತೊದಲುಲಿಯಲ್ಲಿ
ಕೆಳೆಯ ನಗೆನುಡಿಯಲ್ಲಿ

ನಲಿವ ಮೂರುತಿಯೆ
ಸುಖವುಸಿರೆಯೇನಯ್ಯ ?
ಬಾಳು ಬೆಂದಿಹೆನು.

ಗುಡುಗಿನಲಿ ಗುಡುಗುತ್ತೆ
ಸಿಡಿಲಿನಲಿ ಸಿಡಿಯುತ್ತೆ
ಮುಗಿಲ ರಥದಲಿ ನಡೆವ

ಭೀಮ ಮೂರುತಿಯೆ
ನಿನ್ನ ಅದಟಿನೊಳಿನಿಸ
ಕೊಟ್ಟು ಹೋಗಯ್ಯ.

ಹುಲ್ಲೆಗಣ್ಣುಗಳಿಂದ
ನಲ್ಮೆ ನೋಟಗಳಿಂದ
ಗೆಲ್ವ ಕರುಣೆಗಳಿಂದ

ಬೆಳೆವ ಮೂರುತಿಯೆ
ನಿನ್ನ ಕರುಣೆಯಿನೆನ್ನ
ತೊಳೆದು ಹೋಗಯ್ಯ.

ಸತ್ವದಾವೇಶದಲಿ
ಸತ್ಯ ದಾನಗಳಲ್ಲಿ
ನಿತ್ಯ ತ್ಯಾಗಗಳಲ್ಲಿ

ಬಲಿವ ಮೂರುತಿಯೆ
ಬಲದ ಬೀಜವನೊಳಗೆ
ಬಿತ್ತಿ ಹೋಗಯ್ಯ.

ಸ್ಥೈರ್ಯದುತ್ಸವದಲ್ಲಿ
ಧೈರ್ಯ ಸಂಭ್ರಮದಲ್ಲಿ
ಶೌರ್ಯ ಸಂಧಾನದಲಿ

ಸುಳಿವ ಮೂರುತಿಯೆ
ಎದೆಯ ಸಂದೇಹಗಳ
ನಳಿಸಿ ಹೋಗಯ್ಯ.

ಸಾಗರವ ತಾರೆಗಳ
ಸೂರಿಯನ ಚಂದಿರನ
ಮಾನವನ ಬಗೆಯೆದೆಯ

ಹುದಿದ ದೇವತೆಯೆ
ಹಿರಿಯ ಸಂದಣಿಯಲ್ಲಿ
ಹೊಗಿಸಿ ಹೋಗಯ್ಯ.

ಒಡಲ ಕಟ್ಟನು ಬಿಟ್ಟು
ಭವಬಂಧವನು ನೀಗಿ
ಏರುವಾತ್ಮದೊಳಡಗಿ

ಪಾರ್ವ ಮೂರುತಿಯೆ
ಸದ್ಗತಿಯ ನೀಡಯ್ಯ
ನೀನೆ ಗತಿಯೆನಗೆ.

ಹರಹರ ಮಹಾದೇವ

ಹರ ಹರ ಮಹಾದೇವ ಶಂಭೊ!

ಬಾಲದಳದವರಾವು ಕಾಲಿಗೆರಗುವೆವು
ಬಾಲಭಟರಾವುಗಳು ಹರಕೆ ಬೇಡುವೆವು.

ಜಗದೆಲ್ಲ ಐಸಿರಿಗೆ ಈಶ್ವರನು ನೀನು
ಜಗದೆಲ್ಲ ತಾಪಗಳ ಹರಿಸುವನು ನೀನು.

ಸಜ್ಜನರ ಬಲಕೆಲ್ಲ ಮೂಲಕಾರಣನು
ದುರ್ಜನರ ಪಾಪಿಗಳ ಹಿಡಿದು ಶಿಕ್ಷಿಪನು.

ಜನಪದಗಳೇಳುವುವು ನಿನ್ನೊಂದು ದಯದಿ
ಜನತೆಗಳು ಕೂಲುವುವು ನಿನ್ನ ನಿರ್ದಯದಿ.

ಎಲ್ಲ ಕೀರ್ತಿ ಸುಮಾನ ನಿನ್ನ ಕೃಪೆಯಿಂದ
ಎಲ್ಲ ಸಿರಿ ಏಳ್ಗೆಗಳು ನಿನ್ನ ಸಂತಸವು.

ಪೌರುಷವು ಫಲಿಸುವುದೆ ನೀನು ಒಲಿಯದಿರೆ
ವೀರ ಬಲ ಸಾಹಸಗಳುರುಳಿಬೀಳುವುವು.

ತಾಪಸನೆ, ವೈರಾಗ್ಯಚಕ್ರವರ್ತಿ,
ತಾಪಸರ ಮರ್ಮಗಳ ನರುಹು ನಮಗೆ.

ಕದಲದಿಹ ಭಕ್ತಿಯನು, ನಂಬಿಕೆಯನು,
ಕದಡದಿಹ ತಿಳಿಮನದ ನಿರ್ಮಲವನು,

ಪರಹಿತವ ಚಿಂತಿಸೆ ವಿಶಾಲ ಬುದ್ಧಿಯನು
ಪರಸೇವೆ ಗೈಯುತಿರಲಮಿತ ಶ್ರದ್ಧೆಯನು,

ಯಾವ ಸಮಯದಿ ಯಾರು ಸಾಹ್ಯ ಬೇಡಿದರೂ
ನಾವೊಡನೆ ಸಿದ್ಧರಾಗಿರುವ ವೃತ್ತಿಯನು,

ದೇವ, ನೀನೆಮಗಿತ್ತು ಕಾಯಬೇಕಯ್ಯ
ನಾವು ನಿನ್ನನೆ ನಂಬಿ ಸೇವಿಸುತ್ತಿಹೆವು.

ಬಲ ಮದಾಂಧರ ಮುಂದೆ ಬಾಗದೊಲು ಮಾಡು
ಬಲದಲ್ಲಿ ಸಂಪದದಿ ವಿನಯವನು ನೀಡು.

ಭೀಮಬಲವನು ನಮ್ಮ ಬಾಹುವಿಗೆ ಬರಿಸು
ನಮ್ಮ ದಂಡದೊಳಿರಿಸು ಭೀಮ ಗದೆಯ.

ಭಾರತ ಜಗದಂಬಾ

ಪೂರ್ವಿಕಲ್ಯಾಣಿ

ಜಯ ಜಯ ಭಾರತ ಜಗದಂಬಾ
ನಮಿಪೆವು ಕುವರರು ಹರಸಮ್ಮಾ—।
ಹರಸುತೆ ರಂಗಕೆ ಕಳುಹಮ್ಮಾ
ಧರೆಯೇ ನೋಡಲಿ ಅಚ್ಚರಿಯ ॥

ಗಡಿ ನಾಡಿನ ಗಿರಿ ದುರ್ಗದರು
ಗಡಿ ಕಾಯುವ ಕಲಿ ಸಾಗರನು
ಗೆಡೆ ತಳ ತಂತ್ರಕೆ ಸಿಂಹಳರು
ಒಡೆಯಳನುಜ್ಞೆಗೆ ಕಾದಿಹರು.

ಎಡಬಲದಲಿ ಭಟ ಕೋಟಿಗಳು
ದೃಢ ಸಂಕಲ್ಪರು ನಿಂದಿಹರು
ಬಿಡುಗಣ್ಣರ ಪಡೆ ನೋಡುತಿರೆ,
ಪಡೆದಾಣತಿಯನು ನಡಸಲಿಕೆ.

ಬೆಳ್ಗೊಡೆ ಚಾಮರ ಸೇವೆಗಳು
ಎಲ್ಲೆಡೆ ಮಂಗಳ ಘೋಷಗಳು
ಚೆಲ್ವ ಸುಸಜ್ಜಿತ ಮಂಟಪದಿ
ಫುಲ್ಲನಯನೆ, ಅಣಿಯಾಗಿಹವು.

ತನು ಮನ ಧನ ಕಾಣಿಕೆಗಳನು
ಘನತರ ಪ್ರೇಮದುತ್ಸಾಹವನು
ಜನನಿ, ನಿನ್ನಯ ಯಶ ಬೆಳಗಲಿಕೆ
ನಿನಗೆಂದರ್ಪಿಸೆ ತಂದಿಹೆವು.

ನಿಡುತೋಳ ಬಲ ನೂರ್ಮಡಿಯುಪ್ಪುದು
ನುಡಿ ತಾಯೆ, ನಿನ್ನಯ ನುಡಿ ಬಲದಿ
ನುಡಿಯ ಮಧುರತಾನ ಹೃದಯವನು
ನುಡಿಸಿ ಸಂಜೀವನವೆರೆಯುವುದು.

ಧ್ವಜವ ನಡುವರತ್ತ ನೋಡಮ್ಮ
ದ್ವಿಜರ ಮಂತ್ರದ ಮೇಲೇರಿಸುತೆ
ಧ್ವಜದ ಗೌರವ ಚಿರ ಕಾಯಲ್ಕೆ
ನಿಜ ದೀಕ್ಷಿತರಾವು ನಿಂದಿಹೆವು.

ದುಂದುಭಿ

ಮೊಳಗು! ಮೊಳಗು ದುಂದುಭಿಯೆ!
ನಿದ್ರೆ ಸಾಕಿನ್ನೇಳಿರೆಂದು ಎಚ್ಚರಿಸು—॥

ಎಲ್ಲಿದ್ದದವರನಲ್ಲೆ ಸಿದ್ಧರಾಗಲು ಹೇಳು
ಕಾಳೆಗಕೆ ಸಾಧನಕೆ ಅನುವಾಗಿರೆಂದು
ದೇಶಕ್ಕೆ ಕೀರುತಿಗೆ ಮಡದಿ ಮಕ್ಕಳಿಗಾಗಿ
ಕಾದಲಿಕೆ ಮನೆಮಠದ ಸ್ವಾತಂತ್ರ್ಯಕೆ.

ಅಲಸತನ ಸಾಕೆಂದು ಚೀರಿ ಹೇಳು
ಅಣಕಿಸುವ ನಿರ್ಭಾಗ್ಯರರಿಯೆ ಹೇಳು
ಬೇರೆಲ್ಲ ಕೂಗು ಕರೆಯಧಿಕಾರ ನಿಲಲೆಂದು
ತಾರಸರದಲಿ ಕೊರಲನೆತ್ತಿ ಹೇಳು.

ಮರೆವು ಮತ್ಸರಗಳಿಗೆ ವಿಪರೀತ ಮತಿಗಳಿಗೆ
ಕುಹಕ ವಿಮುಖತೆಗಳಿಗೆ ಸಮಯವಿಲ್ಲೆನ್ನು;
ಕರೆಯುವರು ತಾಯಿಯರು ದೇವ ದೇವಿಯರೆಲ್ಲ
ಹಿಂದೆ ಸೆಣಸಿದರೆಲ್ಲ, ಮುಂದೆ ಹುಟ್ಟುವರೂ.

ಕರ್ತವ್ಯ ಕರೆಯುವುದು ಏಳಿರೆನ್ನು
ಶಿಶುಗಳಿಹ ತೊಟ್ಟಿಲನು ಕಾಯಿರೆನ್ನು
ಅಬಲೆವೆಂಡಿರ ತಾಳಿ ಸತಿತನಗಳನ್ನು—
ಕೆರಳಿಸೆಬ್ಬಿಸು ಹೋಗು ಸತ್ವಗಳನು.

ಭಾರತರ ಧಮನಿಯಲಿ ಬಿಸಿರಕುತ ಕುದಿಸುತ್ತೆ
ಅಭಿಮಾನಗಳ ಹೊಮ್ಮು ಹರಿಸು ಹೋಗು
ಹುರಿಪಿಂದ ಕೆಚ್ಚಿಂದ ಉರ್ಕಿಂದ ಸೊರ್ಕಿಂದ
ನರ ನಾಡಿ ಹುರಿಗೊಂಡು ಬಿಗುಪೊಂದುವಂತೆ.

ನಮ್ಮ ನಾಡಿನ ಚರಿತೆ ದ್ರೋಹಗಳ ಕಥೆಯಾಯ್ತು
ಬಲುಕಾಲ ಬೀಳಾಯ್ತು ಹೇಡಿತನವಾಯ್ತು
ಹೊಲೆದಾಸ್ಯ ಪರತಂತ್ರ ತಿರುಕತನವಾಯ್ತು
ಹಲಕಾಲ ಮಣ್ಮುಕ್ಕಿ ಕೂಲಿದ್ದುದಾಯ್ತು.

ನಿನ್ನ ದನಿ ಕೇಳಿದವರೆಲ್ಲಿದ್ದರವರಲ್ಲಿ
ಕನಲೆದ್ದು ಹೊಸ ದೀಕ್ಷೆ ಕೊಳ್ಳುವಂತೆ
ಕೂಲಿರುವ ಬಾಳನ್ನು ಮೇಲೆತ್ತಿ ನಿಲಿಪಂತೆ
ನಾಳಿನೇಳ್ಗೆಯ ಚರಿತೆ ರಚಿಸುವಂತೆ.

ಗುಂಡುಗಳ ಮಳೆಯಲ್ಲಿ ರಣಭೇರಿ ಹುಯಿಲಲ್ಲಿ
ನೊಂದವರ ಸಾಯುವರ ನರಳಾಟದಲ್ಲಿ
ಇಂದು ತನುವನು ತೆತ್ತು ಕಾದುವರ ಸತ್ವಗಳು
ಉಳಿದರೆಲ್ಲರ ದೃಢವ ಹೊಕ್ಕು ಬಲಿಪಂತೆ.

ರಣದಲ್ಲಿ ನಡುಂಗಟ್ಟಿ ಹಿಮ್ಮೆಟ್ಟದೊಡಲೊಡ್ಡಿ
ಯತ್ನದಲಿ ಬಲು ಬಳಲಿ ಮನ ತಗ್ಗಿದವರ
ಎದೆಯಲ್ಲಿ ಹೊಸ ಗಂಡು ವೀರ ಚೈತನ್ಯಗಳು
ನಿನ್ನಮೃತವಾಣಿಯಿಂ ತುಂಬುವಂತೆ.

ನಮ್ಮ ಒಲುಮೆಯ ನಾಡು ನಮ್ಮ ಬೆಡಗಿನ ಬೀಡು
ನಮ್ಮೆಲ್ಲ ಪುಣ್ಯಗಳ ಮಂಗಳದ ಬೀಡು
ನಮಗೆ ಜೀವವನೆರೆದು ಬಾಳಿಸಿರುವೀ ನಾಡು
ಧೀರರಜಿತರ ಸಗ್ಗವಾಗುವಂತೆ.

ಈ ನಾಡ ಜಸವಿನ್ನು ದಿನ ದಿನಕೆ ಬೆಳೆವಂತೆ
ದಿನದಿನಕೆ ಹೊಸಮೆರುಗು ವಿಭವಗಳಲಿ
ದಿನದಿನವು ಸಾಧನದಿ ಮಿಕ್ಕವರ ಮೇಲಾಗಿ
ಮೊದಲಿಗರು ನಾವಾಗಿ ನಿಲ್ಲುವಂತೆ.

ಸಾಂತ್ವನ

ದೇಶಿ

ಇಂದಿನಿನಿಸೀಗಿಂಗೆ ಹಿರಿದಾಗಿ ಕಾಣುವುದು
ನಾಳಿನದು ಆಗಿಂಗೆ ಸೈಸಲಸದಳವು
ಹಿಂದೆ ಆದುದು ಎಲ್ಲ ಬಂದು ಹೋದುವವೆಲ್ಲ
ಇಂದು ಯೋಚಿಸಲೊಂದು ಕ್ರಮದೊಳಾಗಿಹವು.

ಒಂದು ತೀರಲು ಇನ್ನೊಂದು ದುರ್ಭರ ಶೋಕ
ಬಂದು ಹೃದಯವನಿರಿದು ತಿನ್ನುತಿರುವಾಗ
ಮಂದಮತಿಗೇನೊಂದು ಗೋಚರಿಸದಾಯ್ತೆಂದು
ಮುಂದಿನಾ ಯೋಚನೆಯೆ ಹಾಯದಾಯ್ತು.

ಅಂದಿನಂತೆಯೆ ಇಂದು ಮುಂದು ಕಾಣಿಸದಿಹುದು
ಭಂಗ ಜೀವದ ಭಯವು ನಿಂದು ಕಾಡುವುದು
ಎಂದಿನಂತೆಯೆ ಮನವು ಅಂಜಿ ಹಿಂಜರಿವೀಗ
ಹಿಂದಣದರರಿವೊಂದು ಮಾತ್ರ ಕಾಯುವುದು.

ಕುಳಿತಲ್ಲಿ ಕೂಡಿಸದೆ ನಿಂತಲ್ಲಿ ನಿಲ್ಲಿಸದೆ
ನಡೆ, ನಿಲಲ್ ಬೇಡೆಂದು ಮುಂದೆ ನಡಸುವುದು
ಪೊಡವಿಗತಿಗೀ ನಿನ್ನ ಅಡಿಯ ಗತಿಯನುವಡಿಸು
ತಡೆಮಾಡದಿರು ಸಾಗು ಎಲ್ಲ ಸರಿಯುಹುದು.

ವಿಶ್ವ ಸಂಸಾರದೊಳು ನಿನ್ನಂಶವೆನಿಸರದು
ನಿಶ್ಚಯವು, ನಿನ್ನಿನಿಸನಂತವಹುದು,
ಸತ್ಸೇವೆಯಿಂದವನನೊಲಿಪ ಯತ್ನಗಳೆಲ್ಲ
ವಿಶ್ವ ಸಂಕಲ್ಪದಲಿ ಪೂರ್ಣಗೊಳ್ಳುವುವು.

ಇಂದು ಕಾಣದ ದಾರಿ ಮುಂದೆ ಕಾಣುವುದೇನೊ
ಅಂದು ಕರುಣೆಗಳನ್ನು ಅಳೆಯಬಹುದೇನೊ
ಇಂದಿನಂತೆಯೆ ಮುಂದು ಕ್ರಮವು ತೋರುವುದೇನೊ
ಇಂದಿನದೆ ಹಿರಿದೇನು ?—ನಾಳೆ ತಿಳಿಸುವುದು.

ಸ್ನೇಹ

ದೇಶಿ

ಸ್ವರ್ಗದೊಳಗೀ ಸ್ನೇಹ ದೊರೆವುದೇನು?
ಈ ಪರಿಯ ಸೌಹಾರ್ದ ಕೆಳೆಯ ವೈಭವವು?
ಇಲ್ಲದಿರೆ ನನಗಿಲ್ಲೆ ನೂರು ಜನ್ಮಗಳಿರಲಿ
ಎಲ್ಲ ಪರಿ ಮಮತೆಗಳಸತ್ಯಜೀವನವು!

ನಿತ್ಯ ಸಂತೋಷದಲಿ ಅಮೃತಪಾನಗಳಲ್ಲಿ
ನಿತ್ಯ ನಿಶ್ಚಿಂತತೆಯ ಶಾಂತಿಸೌಖ್ಯದಲಿ
ಮರ್ತ್ಯಲೋಕ ದಶಾಂತ ಲಹರಿ ಬುದ್ಬುದದಲ್ಲಿ
ಎತ್ತಲಿಹುದೇಳೆಮ್ಮ ಪೂರ್ಣತೆಗೆ ನೆಲೆಯು?

ಇಹದಲ್ಲಿ ಇಹುದೆಲ್ಲ ನಮ್ಮವೊಲೆ ಇರ್ದಪುದು
ನಮ್ಮವೊಲೆ ಕ್ಷಣಕಾಲವಾಳಿ ಬಾಳುವುದು
ನಮ್ಮವೊಲೆ ಸುಖದಲ್ಲಿ ದುಃಖದಲಿ ಮಿಂಯುತ್ತೆ
ನಮ್ಮವೊಲೆ ಭ್ರಮೆಗಳನು ಬಾಚಿ ತಬ್ಬಿಹುದು.

ಇರದಿರುವ ಬೆರೊಂದನನವರತವರಸುತ್ತೆ
ತೆರತೆರದಿ ಹೊಯ್ದಾಡಿ ಭಂಗವಡೆಯುವೆವು
ಮರಳಿ ಸನ್ನಾಹವನು ಗೈಸುವುದು ಮೋಹಿಪುದು
ಬರಿ ಮಾಯೆಯೆಂದಿಹವ ದೂಡದಿರು ಮನವೆ.

ಮಾಯೆಯೇ ಸತ್ಯ ಮಾಯೆಯೇ ಸೌಂದರ್ಯ
ಮಾಯೆಯೇ ಸಂಸಾರ ಸಾರ ಸರ್ವಸ್ವ
ಮಾಯೆಯೇ ಅಖಿಳ ತಳಧರ್ಮದಾಧಾರ
ಮಾಯೆಯೇ ಮಾನವನ ಮೂಲಬಲವು.

ಈ ಮಾಯೆ ಬಯಲಲ್ಲಿ ಸಿಂಗರದ ಖನಿಯಿಹುದು
ಬಳ್ಳಿಗಳು ಹುವ್ವುಗಳು ಹಣ್ಣು ಪರಿಮಳವು.
ಈ ಎಲ್ಲ ಹೂ ಹಣ್ಣು ಸವಿ ಕಾಂತಿಗಳ ಮೀರಿ
ಬೆಳಗುತಿದೆಯೆಲ್ಲವನು ಸ್ನೇಹ ಸುಮವು.

ಪರೀಕ್ಷೆಯ ಸಮಯ

ಸತ್ವವನು ಪರಿಕಿಸುವ ಸಮಯ ಬಂದಿಹುದು
ಬಲ ಕುಶಲ ಸಾಹಸಗಳು ಇಹವೆ ನೋಡು—॥

ಆರು ಯೋಜನ ನೀರ ನೀಸಿ ಬರಬಲ್ಲ್ಯಾ
ನೂರು ಮೈಲಿಯ ಓಟ ಓಡಬಲ್ಲ್ಯಾ.

ಮೇರು ಹಿಮಗಿರಿ ಶಿಖರವೇರಬಲ್ಲ್ಯಾ
ವೈರಿ ಶಿಬಿರದೊಳರಿಯ ಮುತ್ತಬಲ್ಲ್ಯಾ.

ಕಾಡುಕೋಣದಬೇಟೆಯಾಡಬಲ್ಲ್ಯಾ
ಕೋಡುಬಂಡೆಗಳೆತ್ತಿ ಬಿಸುಡಬಲ್ಲ್ಯಾ.

ಬೀಸು ಬಲೆಯಲಿ ಹುಲಿಯ ಹಿಡಿಯಬಲ್ಲ್ಯಾ
ಕೇಸರಿಯ ಕೆಣಕಿ ನೀ ಸೆಣಸಬಲ್ಲ್ಯಾ.

ದಂತಿ ಸಲಗನ ಹಿಡಿದು ಕಟ್ಟಬಲ್ಲ್ಯಾ
ಪಂಥದಲಿ ಮಲ್ಲರನು ಮುರಿಯಬಲ್ಲ್ಯಾ.

ಕುಡಿಮಿಂಚಿನದಟಿಂದೆ ಇರಿಯಬಲ್ಲ್ಯಾ
ಸಿಡಿಲ ಸಮ್ಮುಖದಿ ನೀ ನಡುಗದಿರಬಲ್ಲ್ಯಾ.

ಉರಿವ ಪಾಳೆಯ ಹೊಕ್ಕು ಉಳಿಸಬಲ್ಲ್ಯಾ
ಉರಿವಗ್ನಿಮುಖಿಯಲ್ಲಿ ದುಮಿಕಬಲ್ಲ್ಯಾ.

ಛತ್ರಪತಿಗಳ ವೈರ ಸಹಿಸಬಲ್ಲ್ಯಾ
ಕ್ಷಾತ್ರದೊಳು ನಿಂದವರ ಜಯಿಸಬಲ್ಲ್ಯಾ.

ಮೂರು ಲೋಕವು ಮಲೆತು ಕ್ರೋಧ ಬೆಳಸಿದರೂ
ಸ್ಥೈರ್ಯದಿಂದೊರ್ವನೇ ನಿಲಲುಬಲ್ಲ್ಯಾ.

ಗುಡುಗು ಗರ್ಜನೆಯಣಗೆ ಅಬ್ಬರಿಸಬಲ್ಲ್ಯಾ
ಬೆಡಗಿಂದ ಸ್ವರ್ಗವನು ಇಳಿಸಬಲ್ಲ್ಯಾ.

ಶಿವರಾತ್ರಿ

ವಸಂತ

ಕಾಮನನು ಸುಟ್ಟವನು ಹುಟ್ಟಿದಾ ದಿನವಂತೆ
ಕಾಮವನು ಸುಟ್ಟವನನರ್ಚಿಸುವ ಬಾ, ಬಾರ—॥
ಭೂಮಿ ಬರ್ದಿಲಗಳನು ಮಂಗಳದಿ ಮುಳುಗಿಸುತೆ,
ಸಾಮಗಾನದಿ ನಲಿವನ—ನಾಟ್ಯವನು ಗೈವವನ ॥

ಭವದಘವ ಪರಿಹರಿಪ ವೀರನಂತೆ, ಭೈ
ರವನು, ಉರಿಗಂಗಳಿಂ ತಮವ ಸುಡುವನಂತೆ,
ಜವನ ದಂಡಿಸುತಲೆಲ್ಲವನು ನಿಷ್ಠುರದ
ನವ ನಿಯಮ ಬಂಧನದಿ ಬಂಧಿಸುವನಂತೆ.

ಊರವರು ದೇಗುಲಕೆ ಹೋಗಿ ಪೂಜಿಪರು
ಊರ ಹೊರಗಣ ಬಯಲಿಗಾವು ಸಾರುವೆವು
ಏರುದಾಣಕೆ ಹೋಗಿ ದೂರದಗ್ರವ ಸೇರಿ
ಮೂರು ಲೋಕಗಳಂತಕನ ತ್ರ್ಯಂಬಕನ.

ಗಂಗೆ ಜಲವಭಿಷೇಕಕಿಲ್ಲ ; ಮೃ
ದಂಗ ತಾಡನ ಮಂಗಳಾರತಿಗಳಿಲ್ಲ
ಚಂದನಾಗರು ಬಿಲ್ವ ಕರ್ಪುರಗಳಿಲ್ಲ
ತುಂಬೆವೂವಿನ ತುಂಬಿದಂಜಲಿಗಳಿಲ್ಲ.

ತ್ಯಾಗವೇ ಭೋಗವೆಂದರುಹಿ ಕಾಯ್ದುವನು
ಸಾಗರದೊಲತಿಗೂಢ ಗಂಭೀರನಿವನು
ಭೋಗದೈಸಿರಿಯನರ್ಥಿಗಳಿಗೀಯುತ್ತೆ, ವಿ
ರಾಗದೇಕಾಂತ ನಿಶ್ಚಿಂತೆಯಿಂದಿಹನು.

ವರುಷಗಳು ಕಳೆಯುತಿರೆ ಕ್ಷೀಣಿಸುತೆ ನಶಿಸುತ್ತೆ
ಧರೆಯು ಜೀವಿಗಳೆಲ್ಲ ಕೊಳೆವುವೆನುತೆ
ಮರಣವೆಂಬುದ ಸೃಜಿಸಿ ಹೊಸಬಲವನೀಯುತ್ತೆ
ನಿರತಿಶಯ ಸಮತೆಯಿಂದೆಮ್ಮ ಪೊರೆಯುವನು.

ವರ ತಪೋನಿಷ್ಠನಿವನು ; ಅಖಿಲ ಲಯಕಾರಕನು
ಮೆರೆವಹಂಕಾರಗಳ ಮುರಿದು ತೂರುವನು ;
ಅರಿಭಯಂಕರನಿಹದ ಚಪಲ ಚಂಚಲತೆಗಳ
ತಿರುಳಿಲ್ಲದಾ ತಿರುಕತನದಿರವ ತೋರುವನು.

ಭಕ್ತರಿಗೆ ಸ್ವರ್ಗಸುಖವೀಯುನಿವನು ; ವಿ
ರಕ್ತಿಯಿಂದೆಲ್ಲವನು ಬಿಟ್ಟಲೆಯುತಿಹನು
ಮುಕ್ತಿ ಕೇಳ್ದೊಡೆ ಕೈವಲ್ಯ ತೋರುವನು
—ಯುಕ್ತಿಯನು ಕೇಳ ನೀ ಶಿವನಚಲನು !

ಕಾರಂಜಿಕೆರೆ ದಾರಿ

೧

ಹುಟ್ಟಿದೂರ ಮಮತೆಯಿಂದ
ಬಿಟ್ಟುಹೋಗಲೊಂದು ವಾರ
ಅಟ್ಟಿ ಬಂದು ನಿನ್ನ ಸ್ನೇಹ
ಕೂಗಿ ಕರೆಯಿತು ;
ಬಿಟ್ಟು ಇರಲು ಆರೆನೆಂದು
ಬೇಡಿ ಕರೆಯಿತು.

ನಮ್ಮ ಕೆಳೆಯತನವು ಮೊಳೆತು
ಇಂದಿಗೆಂಟು ವರುಷವಾಯ್ತು
ಅಂದಿನಿಂದಲಿಂದುವರೆಗು
ಬೆಳೆದು ಬಂದಿತು ;
ತಳಿತು ಹೂವ ತಳೆದು ಬೇಗ
ಫಲಗಳಿತ್ತಿತು.

ಎಂಟು ದಿನಗಳಗಲಿಕೆಯದು
ಕಂಡಿತೊಂದು ಕಲ್ಪದಂತೆ
ದೂರದೂರಿನಲ್ಲಿಯೊಡಲು
ಮರಳಲೆಳಸಿತು ;
ನಿನ್ನ ಬಳಿಯೊಳಿರಲು ಮನವು
ತವಕಪಟ್ಟಿತು.

ಹಗಲು ಇರುಳು ನಿನ್ನ ಧ್ಯಾನ
ನಿನ್ನ ಚೆಲುವು ಜೊನ್ನ ಪಾನ
ನಿನ್ನನಂತ ಪ್ರೇಮಗಾನ
ವೆನ್ನ ಸೆಳೆವುವು;
ಮಂತ್ರ, ಬೊಂಬೆಯೆಳೆಯುವಂತೆ
ನನ್ನ ಸೆಳೆವುವು.

೨

ನನ್ನ ಕೆಲದಿ ನೀನು ಬೆಳೆದೆ
ನಿನಗು ಮೇಲು ನಾನು ಬೆಳೆದೆ;
ನಿನ್ನ ಏರು ಕಳೆಗಳನ್ನು
ನಾನು ತಳೆದಿಹೆ ;
ನನ್ನ ಬೆಳಸು ಹಣ್ಣುಗಳನು
ನೀನು ಉಂಡಿಹೆ.

ಎನಿತು ಸೊಗಸು ನೋಟಗಳನು
ಎನಿತು ಸವಿಯ ಗಾನಗಳನು
ಎನಿತು ಹರುಷ ಬಿನದಗಳನು
ಬೀರಿ ನಲಿಸಿದೆ !
ಮುಗುಳುನಗೆಯ ಸವಿಯ ಕೆನೆಯ
ನೆರೆದು ಸಲಹಿದೆ !

ಎರಡು ಕೆಲದಿ ಹಸುರು, ಹೂವು,
ಕೆರೆ ವನಂಗಳೆಲರು ಸೇವೆ,
ಗಿರಿ ತರುಗಳ ಬೆಡಗು ಲೋಕ,
ಹುಲ್ಲು ಕಾವಲು ;
ನೀರು ಧಾರೆ ಎರಚಿ ಸುರಿವ
ಚಿಲುಮೆ ಸರಗಳು.

ಎದುರಿಗಿಹವು, ನೇರವಾಗಿ
ತೆರೆದ ನಿನ್ನ ಹೃದಯ ಪಥದಿ
ತೋರಮುತ್ತಿನಂತೆ ಬೆಳಗಿ
ಸಾಲು ದೀಪವು;
ಗಿರಿಯುಂ ಮುಗಿಲ ಮುಟ್ಟುವಲ್ಲಿ
ಮಾಲೆ ದೀಪವು.

ನಿನ್ನ ಕೆರೆಯ ಮಡಿಲಿನಲ್ಲಿ
ಬಾನು ಇಳಿದುಬಂದು ನೆಲೆಸಿ,
ನೀಲಿ ಉಡುಗೆ ತಾರೆ ತೊಡುಗೆ
ತೊಡಿಸುತಿರುವುದು;
ಬಾಲ ಶಶಿಯುಂ ನಗುತೆ ಬಂದು
ಆಡುತಿರುವನು.

ಕೊಳದ ನೀಲಿಯಂಚಿನಲ್ಲಿ
ತಿಳಿಯು ನೀರಿನಾಳದಲ್ಲಿ
ಅಲೆಗಳೇಳಲಗ್ರದಲ್ಲಿ
ದಿವ್ಯ ಬಿಂಬವು;
ಸಾಲು ನಿಂತ ದೀವಿಗೆಗಳ
ಮುತ್ತಿನಾರತಿ.

ಕೊಳದ ಹೃದಯದಲ್ಲಿ ಹುದುಗಿ
ನಮಗೆ ತಿಳಿಯದಾಳದಿಂದ
ಮಿರುಗಿ ಮಿರುಗಿ ತಾರೆ ಲೋಕ
ಕರೆಯುತಿರುವುದು;
ಉರಿಯನುಳಿದ ಬೆಳಕು ಲೋಕ
ಸನ್ನೆ ಗೈವುದು.

೩

ನಿನ್ನ ಚೆಲುವ ನೋಡಿ ನೋಡಿ
ನಿನ್ನ ಒಲವನುಂಡು ಹಾಡಿ
ನಿನ್ನ ಲತೆಗಳೊಡನೆ ಆಡಿ
ಹಿಗ್ಗುತಿರುವೆನು;
ನಿನ್ನ ತಣ್ಪು ಶಾಂತಿ ಸವಿದು
ಶಾಂತಿಗೊಳುವೆನು.

ನಿಡುವಗಲಿನ ಬೆಳಕಿನಲ್ಲಿ
ನಡು ನಿಶಿ ಬೆಳುದಿಂಗಳಲ್ಲಿ
ಕರಿ ನಿಶಿ ಕಳ್ತಲೆಗಳಲ್ಲಿ
ಕೊಳನ ನೋಡುತೆ,
ಅಲ್ಲಿ ಜ್ವಲಿಸುತಿರುವ ಲೋಕ
ಗಳಲಿ ಚರಿಸುವೆ.

ಸುಳಿವ ಗಾಳಿ ಚಲನೆ ನಿಂತ
ವಿಜನದೇಕಾಂತಗಳಲಿ
ಬಳಲಿ ನಿನ್ನ ಸಂಗವರಸಿ
ಮನವ ಹೇಳಲು,
ಮನದ ಬೇಗೆ ಹರಿಸಿ ಹೊಸದು
ಜೀವವುಸಿರುವೆ.

೪

ನಿನಗೆ ಜೀವವಿಲ್ಲವೆಂದು
ಹೇಳುವವರು ಮರುಳರಲ್ತೆ !
ನಿನ್ನ ಮಮತೆ ನಿನ್ನ ಸ್ನೇಹ
ವದನು ತೋರವೆ !
ನರರು ನಂಬದಿದ್ದರೇನು
ನಿಜವು ಅಳಿವುದೆ ?

ನನ್ನ ನಿನ್ನ ಇರ್ವರಲ್ಲಿ
ಒಂದು ಜೀವದಾತ್ಮಭಾವ
ಹೊಂದಿ ಬಲಿದ ಹೃದಯಭಾವ
ಹರಿದು ಬರುತಿದೆ ;
ಒಂದನಂತ ಪ್ರೇಮಭಾವ
ಬೆರೆದು ಬರುತಿದೆ.

ನನ್ನ ನೆನೆವ ಜನರು ಎಲ್ಲ
ಹೋದಮೇಲು ಅಳಿದಮೇಲು,
ನನ್ನದಿವುಗಳೆಂಬುವೆಲ್ಲ
ಮಾಯವಾದರೂ
ನನ್ನ ಉಸಿರು ನಿಂತಮೇಲು
ನೀನು ಉಳಿಯುವೆ.

ಆಗ ನಿನ್ನ ಕೆಳೆಯತನದ
ಭಾಗ್ಯ ಭೋಗಿಸಿರುವ ನನ್ನ
ಕೂಗಿ ಕರೆದು ಎಂದಿನಂತೆ
ನೆನಸಿಕೊಳುವೆಯ ?
ಈಗ ಪಟ್ಟ ವಿರಹವ್ಯಥೆಯ
ಆಗ ಪಡುವೆಯ ?

ಇಂದು

ಭೈರವ

ರಸರಹಿತವಾಗಿಹುದು ಇಂದು ಜೀವನವು —॥
ಒಣಗಿದೆಳಗಾಯಿನೊಲು,
ಅಳಿದನೆದೆಗೂಡಿನೊಲು,
ಹಾಳು ತೋಟದ ತರುಗಳಾಲವಾಲದೊಲು ॥

ಮೆಲ್ಲೆಲರು ಸುಳಿಯುತಿರೆ ಅರಳಿ ಎಳಯೆಲೆಯು ತಾ
ನುಲ್ಲಸದ ಸೊಂಪಿನಲಿ ಆಡಿ ನಲಿವಂತೆ
ಚೆಲ್ವ ಕೆಂಪಿನ ರಾಗ ತಳೆದು ನಲಿಯುತಲಿದ್ದ
ನನ್ನ ಹೃತ್ಪಲ್ಲವವು ಬಾಡಿ ಬಿಳುಪಾಯ್ತು.

ಚಿಂತಿಸುತ ಚಿಂತಿಸುತ ಹೋದ ಭಾಗ್ಯದ ನೆನಪು
ಸಂತತವು ಮೇಲೆದ್ದು ಅಣಕಿಸುವುದು
ಅಂತರಂಗವು ಕೊರಗಿ ಯಾತನೆಗಳನುಭವಿಸಿ
ಚಿಂದಿ ಬಟ್ಟೆಯವೋಲು ಛಿದ್ರವಾಗಿಹುದು.

ಹಿಂದೆ ಕಾಣುತಲಿದ್ದ ಸೊಬಗು ಗೋಚರಿಸದಿದೆ
ಬೆಂದ ಮನದೀ ಪಾಳು ಒಂದೆ ಕಾಣುತಿದೆ
ರೆಂಬೆ ಕೊಂಬೆಗಳೆಲ್ಲ ಮುರಿದೊಣಗಿ ನಿಂದಿರುವ
ಮೊಂಡುಮರದೊಲು ಕಳೆದ ಕಥೆಯು ಹೇಳುತ್ತೆ.

ಆ ಮೊಗವು ಆ ಚೆಲುವು ಆ ಬಲವು ಮೈಸಿರಿಯು
ಆ ಮೊಗದ ಬಿಂಬದಿಂದುಗಿವ ಕಾಂತಿಗಳು
ಏ ಮೊಗದಿ ಹೋದವೊ ಬಾಳು ಮರುಭೂಮಿಯೆನೆ
ಈಗಳೆಲ್ಲವ ಸಹಿಸೆ ಸಹನೆಯೊಂದುಳಿಸಿ.

ನೈವೇದ್ಯ

ಭೈರವ

ಮುರುಕು ಮನವಿದನೊಂದ ಹರಿದ ಹೃದಯವಿದೊಂದ
ಪರಮ ಕರುಣಾಮೂರ್ತಿ ! ನಿನಗೆ ಅರ್ಪಿಸುವೆ — ।
ಇದುವೆ ನೀನುಳಿಸಿರುವ ಸರ್ವ ಸಂಪದವೆನಗೆ
ಇದ ನಿವೇದಿಪೆ ನಿನಗೆ ಕೊಂಡು ಸುಖಿಸಯ್ಯ ॥

ಪ್ರೇಮಮಯನೆಂದೆನಲು ಒಲಿವವೊಲು ಯತ್ನಿಸಿದೆ
ಕಾಮಿಸಿದೆ ಶ್ರಮಿಸಿದೆ ಬರಿದೆ ಬಲು ಬಳಲ್ದೆ
ಪ್ರೇಮಿಯೊ ಕ್ರೂರಿಯೊ ನೋಳ್ಪೆಯೋ ನೋಡೆಯೊ
ಸಾವಧಾನದೊಳೆಲ್ಲೊ ಮಲಗಿ ನಿದ್ರಿಪೆಯೊ.

ಆ ಗುಣವು ಈ ಗುಣವು ನಿನದೆಂದುಕೊಳ್ಳುತ್ತ
ನೀ ಕರುಣಿ ಕಾವನೆಂದಾವು ಭ್ರಮಿಸಿಹೆವೊ
ಈವುಳಿವು ಹೊಂದುಗಳ ನೀ ಭ್ರಮೆಯ ಭಾವಗಳ
ನೀ ದೂರದಿಂ ನೋಡಿ ನಗುತಲಿಹೆಯೊ.

ಇಳೆಯೊಳಾಗುವುದೊಂದು ನಿನ್ನ ಗಮನಕೆ ಬರದೊ
ಇಲ್ಲದಿರೆ ಇಲ್ಲಿನದು ಕೈಮೀರಿ ಇಹುದೊ
ಇಲ್ಲದಿರೆ ನಡೆವುದಿದು ನಡೆಯಲೆಂದಿಹೆಯೊ
ಎಲ್ಲಿಯಾದರೂ ಹಾಳು ಹೋಗಲೆಂದಿಹೆಯೊ.

ಇಂತಾಗಬೇಕೆಂಬ ನಿಯಮವಿಲ್ಲವೊ ನಿನಗೆ
ಇಂಥುದೇ ಅಹುದೆಂಬ ನಿಶ್ಚಯವು ಇರದೊ
ಇಂತಿದರ ಸಂಗಡಲೆ ನೀನು ಬಳಲುತಲಿಹೆಯೊ
ಕೊಂಕು ವಿಧಿ ನಿನ್ನನೂ ನಡೆಯಿಸುವುದೊ.

ಹಾಳು ಮನವಿದು ಒಂದು ಗಳಿಗೆ ವಿಶ್ರಮಿಸಿರದು
ಮೇಲ್ಮೇಲೆ ತಂದೊಡ್ಡುವುದು ಶಂಕೆಭೀತಿಗಳ
ಕೇಳುವುದು ಬೇಡುವುದು ಹೇಳದಿರೆ ಬಾಡುವುದು
ಹೇಳಿದುತ್ತರ ಕೊಂಡು ಸುಮ್ಮನಾಗದಿದು.

ದೇವನ ಬರವು

ಆನಂದಭೈರವಿ

ಎನ್ನ ಭಾಗ್ಯದ ದೇವ, ಬಂದುಳಿಸಿದೆ ಜೀವ,
ನಿನ್ನ ಬರವಿಗೊಂದು ಯುಗ ಕಾಯ್ದೆ
ಅನ್ಯರವೊಲು ಮನಮರೆಯದಾ ದಿನಗಳ
ಬನ್ನವಡುತೆ ಬಲು ತೊಳಲಿದುದು.

ಈ ನಾಲ್ಕು ವರುಷಗಳನುದಿನದೊಳು ನೀ
ನೇ ನಿಮಿಷದೊಳೆಂತೊ ಬರುವೆಯೆಂಬ
ಆ ನಿರೀಕ್ಷಣೆಯೊಳು ಕಂಗಳು ಬಳಲ್ದುವು
ಕಿವಿ ನಿನ್ನ ದನಿ ಕೇಳೆ ತಪಿಸಿದವು.

ಹೃದಯ ಪದುಮ ಸುಮ ದಳದೆರೆದರಳುತೆ
ಅನುವಾಗಿದ್ದುದು,— ಬಾಡಿದುದು
ಹೃದಯದೀಶನ ಪದ ಸ್ಪರುಶದ ಪುಳಕದಿ
ಮರಳಿ ಮುದವನಿಂದು ತಾಳಿಹುದು.

ಮರುವಿನ ಮಧ್ಯದಿ ತಿಳಿನೀರ ಕೊಳನಂತೆ
ಬರಗಾಲಕೆ ಬಂದ ಭಾಗ್ಯದಂತೆ
ಸುಡುವ ಬಿಸಿಲ ಝಳದುರಿಯ ಹರಿಸೆ ಬಂದ
ಪರಮಾತ್ಮ, ಬಂದೈಯ, ತೆಂಬೆಲರೊಲ್

ಇತ್ತಿನಿಸುಂಡು ವಿಶೇಷವೆಂದೆಣಿಸಿದೆ.
ತುಷ್ಟಿಯಾನಂದದಿ ತೇಗಿದ್ಯೆಯು
ಇಷ್ಟು ದಿನದ ತನು ಮನದ ರಿಕ್ತತೆಗಳು
ಎತ್ತಲೋಡಿದವೊ ನೀ ಕಾಣುತ್ತಲೆ.

ಶಿಶಿರದಿ ವನ ಚಿಗುರ್ವಿಡಿದವೊಲಾದುದು
ಕುಸುಮವನಾಕ್ಷಣ ತಳೆದವೊಲು
ಎಸೆವ ನಿನ್ನಯ ಕೈ ಎನ್ನ ಕೈವಿಡಿಯಲು
ಒಸೆದು ಸೇರುತಲಲ್ಲೆ ಫಲಿಸಿದುದು.

ಕಸ್ಮೈ ದೇವಾಯ ?

ಯಮುನ್ ಕಲ್ಯಾಣಿ

೧

ಅಂದಿನಾ ದೇವರುಗಳೆಲ್ಲ ಮಡಿದುರುಳಿಹರು
ಇಂದ್ರ ವರುಣರು ಧನದ ಮಿತ್ರ ಪೂಷಣರು —॥
ಸಂದಿದ್ದ ದೈವತ್ವದಗ್ಗಳಿಕೆ ಹೋಗಿಹುದು
ಅಂದಿನವರುನ್ನತಿಯ ಕಲಶ ಕೂಲಿಹುದು ॥

ಮಾನವರ ಸುಪ್ರಖರ ಮನದ ಮೊನೆಯಲುಗಿನ
ಘಾತದಲಿ ಕಡುನೊಂದು ಸೋಲನೊಪ್ಪಿಡುದು
ಧ್ಯಾನ ಪೂಜೆಗಳಿನ್ನು ತಮಗೆ ಸಲ್ಲವು ಎಂದು
ಮಾತಿನೊಪ್ಪಿಗೆಯಿತ್ತು ಶರಣು ಬೇಡಿದರು.

ಅಚ್ಚರಿಯ ಮೋಹದಲಿ ಆಗಸವ ನೋಡುತ್ತೆ
ಉಚ್ಚಕಂಠದಿ ಹಾಡಿದಾ ಭಕ್ತರಳಿದಿಹರು
ನಯದಿಂದ ಭಯದಿಂದ ಅವರನೊಲಿಸುವ ಪಾಡು
ಭುವಿಯಿಂದ ಜನದಿಂದ ತೊಲಗಿ ಹೋಗಿಹುದು.

ಸಾಗರನ ಸುರನೀಲ ನೀಲಿಮತೆಯನು ನೋಡಿ
ಭೋರ್ಗರೆಯುತುರ್ಕುವಾರ್ಭಟೆಯ ಕೇಳಿ
ನಾಲ್ದೆಸೆಯೊಳೊಡ್ಡಿರು ವಪಾರ ಗಂಭೀರತೆಗೆ
ಬಾಗಿ ಗೈಯುವ ವರುಣ ಪೂಜೆ ಕಾಣಿಸದು

ನಭದೆಡೆಗೆ ಮೊಗವೆತ್ತಿ ಹೂಪತ್ರವೆರಚುತ್ತೆ
ಕರುಣಿಸೈ ಪರ್ಜನ್ಯ ಎಂಬುದಿಲ್ಲಾಯ್ತು
ಗುಡುಗು ಗರ್ಜನೆ ಕೇಳಿ ನಡುಗಿ ಬಲಿಯೊಪ್ಪಿಸುತೆ
ಒಡೆಯ ರುದ್ರನ ರೌದ್ರವಿಳಿಪ ಪರಿ ಪೋಯ್ತು.

ಗೋಧನವನುಳುಹೈಯ ಹೆಚ್ಚಿಸೈ ಹೇ ಪೂಷ !
ದವಸ ಧಾನ್ಯಗಳೀಯೊ ದೇವ ದೇವೇಶ !
ಧನ ಕನಕ ವಾಹನವ ಕರುಣಿಸೈ ಧನಧ, ಭೋ
ಘನರನರ್ಘರೆ, ಎಂಬ ಮೊರೆಯು ಕೇಳಿಸದು.

೨

ಅನ್ಯದೇವರ್ಕಳು ದಾಳಿಟ್ಟರೇರಿದರು
ಸುಮನಸರು ಪರಬ್ರಹ್ಮ ಹರಿಹರಾದಿಗಳು
ಇನ್ನೈದುಸಾವಿರ ವರುಷವಾಳಿದರಿವರು
ಇಂದಿವರ ಆಳಿಕೆಗು ಚ್ಯುತಿಯು ಬಂದಿಹುದು.

ಹಳೆಯ ಕಾಲದ — ತಂದೆತಾತದಿರ ದೇವರುಗ
ಳಳಿದು ಹೋಗುವ ಕಡಿದು ಕಾಲ ಬರುತಿಹುದು
ಇಳಿದಿಹುದು ಕಡುನಿಡಿದು ನೆಳಲೊಂದು ಮೇಲಿಂದ
ಅಳಿಸಿ ಹೋಗುತಲಿಹವು ಅವರ ಮೂರ್ತಿಗಳೂ.

ಹೋಹವರ ಪದವಿಗಳಿಗಿನ್ನಾರು ಬಂದಪರೊ
ಕೋಪಿಗಳೊ ಕರುಣಿಗಳೊ ತಿಳಿಪ ಕೋವಿದರೊ
ಯಾರನರಸುತೆ ಹೋಗಿ ಹವಿಸನೀಯಲು ಬೇಕೊ
ಯಾವ ಶೀಲವನವರು ಜಗದಿ ಬಿತ್ತುವರೊ.

ಇಲ್ಲದಿರೆ ಬೇರಾವ ದೇವರೇ ಬಾರರೊ
ಇಲ್ಲದೊಂದಕೆ ಹೆಸರನಿತ್ತು ಕರೆಯುವೆವೊ
ಇಲ್ಲದಿರೆ ಮಾನವನ ಸುಗುಣವೇ ದೈವವೊ
ಎಲ್ಲಿಗೂ ಹರಿಯದಿಹ ಸಂಶಯವೆ ಕೊನೆಯೊ!

ತರವೆ!

ಸಿಲುಕದೆ ಪಾರುವ ಪರಿ ಸರಿಯೆ,
ಇದು ತರವೆ,
ನೀಂ ಬರಿರೇ
ಅರಿಯಿರೆ ಎನ್ನಯ ಶೀಲವನು, ಮನದಾಳವನು?—॥

ದಿನ ದಿನ ನಿಮ್ಮನು ಅರಸುತಲಿರುವೆನೆ
ಅನುಸರಿಸುತಲಿಹೆನೆ — ಏಂ ಚಲಮೆ? ॥

ಪಾಲ್‌ಶಿಲೆ ಮಂದಿರವನು ರಚಿಸಿ
ನೆಲೆಯನುಕೂಲವನನುವಡಿಸಿ
ಪಲ ಪಲ ಪರಿಯಲಿ ಬೇಡುವೆನೆ!

ಹೇ ಚೆಲುವೆ,
ಹೇ ಸುಖಮೆ,
ನೀಂ ಬರಿರೆ!

ಕೊಳಲಲಿ ಹೃದಯವ ತುಂಬಿಹೆನೆ!
ಗಾನದಿ ಪ್ರೇಮವು ಸೂಸಿಹುದೆ!
ಮನದಿಹ ಕಾತರ ಕಾಣಿಸದೆ

ಏಂ ಸರಿಯೆ,
ನೀಂ ಬರಿರೆ,
ನೀಂ ನಿಲಿರೆ!

ಮೃದುಪದ ಬಂಧದ ಗೀತವನು
ಗೀತದಿ ಹೃದಯದ ರಾಗವನು
ರಾಗದಲಡಗಿಹ ಜೀವವನು,

ನೀಂ ಕೊಳಿರೆ
ಏಂ ಚಲಮೆ
ಇದು ತರವೆ!

ಆರ್ತೆ

ಯಾರಿಗೋಸುಗವೀ ಸೊಗಸೆ, ಮುಗುದೆ
ನಳಿತೋಳ್ ಸುಮಹಾಸದ ಬಿನ್ನಣಮೆ?

ವರನಾವನದಾವನು ಬಂದಪನೆ?
ಮನಸೀಪರಿ ಸೋತಿಹುದೆ, ತಿಳಿಸೆ.

ಅವನಾವ ಶರೀರದಿ ಬಂದಪನೇ
ನಶರೀರನೆ ಕಣ್ಣಿಗೆ ಕಾಣಿಸನೆ?

ಬರುವಾತನ ನೇತೆರ ಕಾಣುವೆಯೆ,
ನಡೆಯಿಂದಮೆ, ನೋಟದೆ, ರೂಪಿನೊಳೆ?

ಪರಿವಾತನ ಕಂಗಳ ಚೇಷ್ಟೆಗಳೆಗೆಲ್ಲಕು
ಮುಂದಿಳಿವೀಯುತೆ ರಾಜಿಪುದೆ?

ಇನಿವಾತನದಾವುದನಾಲಿಸುತೆ, ಸಖಿ,
ನಿನ್ನೆಡೆಗಾತನು ಬಂದಪನೆ?

ನಿಶಿ ಭೀಕರ ಕಳ್ತಲೆ ನಿಮ್ಮಯ ಪಾಲಿಗೆ
ಹುಣ್ಣಿಮೆ ಜೊನ್ನವದಾಗುವುದೆ?

ಪೆರರೆಮ್ಮಯ ಆಸೆಯ ಉಲ್ಲಸವೆಲ್ಲವು
ನಿಮ್ಮಯ ಮೇಳಕೆ ಕಾಣಿಕೆಯೆ?

ಒಲವೆ, ಚೆಲುವೆ, ಬೆಡಗೆ, ದನಿಯೆ,
ತನಿ ರಾಗದ ಸಾರದ ಸೋನೆಗಳೆ?

ಮೊದಲಾವ ವಿಲಾಸದಿ ಸೋಲಿಸಿದೆ
ಮರುಳಾದನ ಮೋಹದಿ ನಿಲ್ಲಿಸಿದೆ?

ಪರಿ ತೋರಿಸೆಯೇತಕೆ, ಬೇಡುವೆನೆ
ಉರೆ ಕಾರುವ ಕಂಬನಿ ಕಾಣಿಸದೆ?

೨

ನಿಡುಸುಯ್ಯುತೆ ದಿನ ದಿನ ಕಾದಿಹೆನೆ
ಎದೆ ಕಲ್ಲೆದೆ ನಿನ್ನದು ಕರಗಿದುದೆ?

ಸಖಿ, ಮುನ್ನಿನ ಸಖ್ಯವು ಸಾರ್ಥಕವೆ
ಸುಖ ಕಾಲದಿ ಸಖಿಯರ ದೂಡುವರೆ?

ಸರಿ ಸೋದರಿ ನೋಯುತೆ ಬೇಯುತಿರೆ
ಮನಸೇಪರಿ ಸೌಖ್ಯದಿ ತೀವುವುದೆ?

ನೆರೆಯುಲ್ಲಸ ಸಂತಸದಿಂದಲರಲ್ದಿಹ
ನಿನ್ನಯ ಚೆಲುಮೊಗವೀಕ್ಷಿಸುತೆ

ನಿನ್ನಯ ಪುಣ್ಯದ ದೇವನನರ್ಚಿಸೆ
ಮನವಿದೆ ಹಂಬಲದಾತುರದೆ —

ಹೊಸ ಜೀವನದಾಸೆಯು ಬಂದಪುದೇ ಸಖಿ
ನಿನ್ನಯ ನಗುಮೊಗ ನೋಡುತಿರೆ,

ಮನಸಿನ ಬೇಸರವೋಡುವುದೇ ಕ್ಷಣ
ವಾತನ ಚೆಲುಮೊಗ ತೋರಿಸೆಲೆ!

ಸಿರಿವಂತರು ಕೈತೊರೆದೀಯದಿರೆ
ಬಡವರ್ಕಳದೇಪರಿ ಬಾಳುವರೇ?

ಇಡು ಬೇಡುವ ದಾನವನಾರ್ತರಿಗೆ
ನಿಜ ಸಂಪದ ಸಂತತ ಪೆರ್ಚುವುದೆ!

ಅಳಿಸದ ನೆನಪು

ದೇಶಿ

ನಿನ್ನ ನಡೆದಂತಿಹುದ ಮರೆವೆನೆಂತು ?
ನನ್ನ ಕಣ್‌ಗಳ ಮುಂದೆ ಚಿತ್ರಕಟ್ಟಿದೊಲಿಹುದು —॥

ಚಕ್ರವಾಕಗಳಂತೆ ಕೂಡಿ ಮೆಲ್ಲುಲಿದೆವೇ
ಮಿಕ್ಕ ಲೋಕವ ಮರೆತು ಒರ್ವರೊರ್ವರೊಳು ॥

ಉದ್ಯಾನದಲಿ ಗರುಕೆ ಹಸುರು ಹಾಸಿಗೆ ಮೇಲೆ
ಸುತ್ತಲಿನ ಸೌ ಗಂಧದಾಯತನದಿ
ಮತ್ತನುಣ್ಡನಿಯಿಂದೆ ಹೂಪಕ್ಷಿ ಸಖರು ನಾವ್
ಎತ್ತು ಕಂಠದಿ ಹಾಡುತಮೃತವೀಂಟಿದುದ.

ದಿನಾಂತದಲಿ ನದಿಯ ದಂಡೆಯ್ಞನು ನಾವ್ ಸೇರಿ
ಬಿಳಿಮಳಲ ಮಧ್ಯದಲಿ ನಲುಗಿಟ್ಟುದನ್ನು
ತಿಳಿನೀರ ವಾಹಿನಿಯು ಹರಿವುದೊ ನಿಂದಿಹುದೊ
ಬಳಿ ಸೇರಿ ಪರಿಕಿಸುವೆವೆಂದು ಹೋದುದನು.

ವನಾಂತದಿಂದೊಯ್ಯೊಯ್ಯನೆಮ್ಮೆಡೆಗೆ ಬರುತಿದ್ದ
ಸಂಜೆಯೆಲರಿಗೆ ತನುವನೊಡ್ಡಿ ಸುಖಿಸಿದುದ
ಸಂಜೆಸೂರ್ಯನ ಸೌವರ್ಣರಾಗದ ಕಾಂತಿ
ಹೊಂಚಿ ನಮ್ಮಿಬ್ಬರನು ಹೊದಿಸಿ ಬೆಳಗಿದುದ.

ಆಶ್ವೀಜದಾಗಸದ ಚಂದ್ರವೀಧಿಯೊಳೆಲ್ಲ
ಸಿಂಗರದಿ ಮಿರುಮಿರುಗಿ ತೋರ್ವ ತಾರೆಗಳು
ಭೃಂಗಕುಂತಳೆ ನಿನ್ನ ಜ್ವಲಿಪ ಕಂಗಳ ನೋಡಿ
ಭಂಗವನು ಪಡೆದವೊಲು ನಾಚಿ ಮಿಡುಕಿದುದ.

ಚಂದ್ರಮನ ತಂಗದಿರ್ಗಳಿಳಿದು ನಿನ್ನಯ ಮೊಗದ
ನುಣುಪು ಬಿಳುಪಿನ ಕಳೆಯನೇರಿಸುತ್ತಿರಲಾ
ತಣ್ಪುಕರಗಳ ಕೊಂಡು ತೆರೆದು ಕಣ್ವಲಯವನು
ನನ್ನ ಕಣ್ಣಲಿ ನಟ್ಟು ನಗುತೆ ನೋಡಿದುದ.

ನನ್ನ ಮನದಲಿ ನೀನು ನಿನ್ನ ಮನದಲಿ ನಾನು
ನಮ್ಮ ಕಣ್‌ಪಾಪೆಯೊಳು ನಾವು ನಾವುಗಳು
ಚೆನ್ನರಿನಿಯರು ನಾವು ಏಕಜೀವದೊಳಲ್ಲಿ
ಪ್ರಿಯುವ ಪ್ರೇಮವ ಸುಖವನುಸಿರುತಿದ್ದುದನು.

ಏಕೆ ಬಂದಿರಿ ?

ಅವರ ಬಿಟ್ಟು ಬಂದಿರೇಕೆ ?
ನಮ್ಮ ನರಸಿ ಬಂದಿರೇಕೆ
ನಮ್ಮ ಜೀವದಾವ ಭೋಗ
ಯಾವ ಸೋಗಿನೊಲುಮೆ ರಾಗ

ನಿಮ್ಮ ನಿಂತು ಬರಿಸಿತಿಲ್ಲಿ, ನಿಮ್ಮ ನಿಂದು ನಿಲಿಸಿತಿಲ್ಲಿ ?
ಉಣಲು ಸವಿಯ ಊಟವಿಲ್ಲ, ಉಡುಗೆಯಿಲ್ಲ, ತೊಡುಗೆಯಿಲ್ಲ
ಆಟ ಪಾಟ ಕೂಟ ನೋಟದೊಂದು ಸೌಖ್ಯವಿನಿಸುಮಿಲ್ಲ
ಏಕೆಬಂದಿ ರೇಕೆಬಂದಿ ರೇಕೆಬಂದಿರಿ ?

ಬೆಳಕು ಹರಿದ ಕಾಲದಿಂದ
ಬೆಳಕು ಕಳೆದು ಹೋಗುವನ್ನ
ಕಲ್ಲನೊಡೆದು ಮುಳ್ಳ ಮುರಿದು
ಕೊಳೆಕಿತ್ತು ನೆಲವನುಳುವೆವು

ಎಳೆಯ ಮೊಳಕೆಗಳನು ಎತ್ತಿ ತೊಳೆದು ನಡುವೆವು ;
ನಾಳೆ ಬೆಳಸು ಬೆಳೆಯಲೆಂದು, ಮೇಲು ದವಸ ದೊರೆಯಲೆಂದು
ಕೀಳು ಕಳೆಯ ಕಿತ್ತು ಬಿಸುಟು ನಾವು ದುಡಿವ ಕೆಲಸವೆಂದು
ಮುಗಿಯದಿಲ್ಲಿ ಗೇಕೆಬಂದಿ ರೇಕೆಬಂದಿರಿ ?

ಕೊಳೆಯು ತೊಳೆಯು ಬೇಹಂದಿಲ್ಲಿ
ಒಡಲ ತೇಯು ಬೇಹುದಿಲ್ಲಿ
ಕೊರಗುವವರ ಮಧ್ಯದಲ್ಲಿ
ನರಳುವವರ ಮಧ್ಯದಲ್ಲಿ

ಮಳೆಯು ಚಳಿಯು ಗಾಳಿ ಗಾಸಿ ನಿಲಿಸವೆಮ್ಮನಂ;
ಬೇಸರಾಯಸಂಗಳೆಂದು, ಕ್ಲೇಶ ತಾಪ ಭಯಂಗಳೆಂದು
ಆಸೆಯಳಿದ ಚಿಂತೆಯೆಂದು, ಗಾಯ ಮಾಯದಿರುವುದೆಂದು
ಹೇಳಲಾಗದು. ಏಕೆಬಂದಿ ರೇಕೆಬಂದಿರಿ?

ನಿಲಲು ಬಯಲೆ ನೆಲೆಯುಂ ಇಲ್ಲಿ
ನೆಲನೆ ಮಲಗು ಹಾಸಿದಿಲ್ಲಿ
ಮುಗಿಲ ಸಾಲೆ ಹೊದಿಕೆಯಿಲ್ಲಿ
ಫಲವು ಹಸಿವು ಹಾಸ್ಯವಿಲ್ಲಿ

ಮರೆಯುವವರು ಜರೆಯುವವರು ತೊರೆಯುವವರನೇಕ
ರಿರುವರು;
ಸರಿಯ ಜನರು ನಗುತಲಿಹರು, ಕರುಳಿನವರು ಕೊರೆಯುತಿಹರು
ಕೊರಳನಪ್ಪಿ ಒಲಿಪ ಚೆನ್ನೆ ಅಳುವ ಮಗುವ ತೋರಿ ತೋರಿ
ಬೇಡುತಿರುವಳು
— ಬಯಸಿ ಬಯಸಿ ನೀವು ಇಲ್ಲಿ ಗೇಕೆಬಂದಿರಿ?

ಎರಡು ದನಿಗಳು

‘ ಓಡಿ ಹೋಗು ಜಗವು ಬೇಷ ’
ವೆಂದು ನುಡಿದು ಮನವು ಮತ್ತೆ
ಬೇಡ ನಿಲ್ಲು ಹೇಡಿತನವು ’ ಎಂಬುದೊಡನೆಯೆ.

ಧರ್ಮವೇಕೆ ? ಕರ್ಮವೇಕೆ ?
ಪೆರ್ಮೆಗಾಗಿ ದಣಿವುದೇಕೆ
ಬ್ರಹ್ಮ ಬರೆದುದಾಗಿ ನಡೆದುಹೋಹುದಲ್ಲವೆ ?

ನಮ್ಮ ಮನವು ರಚಿಸಿದೊಂದ
ಬ್ರಹ್ಮಕೊಂಡು ಬೇರೆ ಗೈಯೆ
ಸುಮ್ಮನೇಕೆ ಬಳಲಿ ಬರಿದೆ ಗಾಸಿಪಡುವುದು ?

ಚೆಲುವು ನಿಲದು, ಒಲವು ನಿಲದು
ಬಲವು ಚಲಗಳೊಂದು ನಿಲದು
ಗೆಲವು ಗೈಮೆಯೊಂದು ನಿಲದು
ಸುಲಿವುದೆಲ್ಲ ಸೊಬಗ ವಿಧಿಯು ಮರುಕವಿಲ್ಲದೆ.
ಕುಲವು ಮಾನ ಶೀಲ ಕೀರ್ತಿಯೊಂದನೆಣಿಸದು
ಧನವು ದಾನ ಗಂಡುತನಗಳೊಂದು ಪೊರೆಯದು.

ಫಲವು ಕೈಗೆ ಬರುವುದೆಂದು
ಗೆಲವು ಒಲಿದು ಬರುವುದೆಂದು
ನಲವು ಊರಿ ಬಲಿವುದೆಂದು
ಎಲ್ಲ ಕಾಲವಿಂತೆ ನಡೆದುಬರುವುದೆಂಬ ಆಸೆಯೊಂದು
ಎಂದುಂ ಮನದಿ ಮೊಳೆವುದಂದೆ ಮುಂಜುಗಾಳಿ ಬೀಸಿಬಂದು
ಬಂದ ಮೊಳಕೆ ಬೇರಕಿತ್ತು ಅಂದೆ ಅಂತೆ ತೂರಿಕೊಂಡುಂ
ಹೋಹಂದೆತ್ತಲೊ

ಯಾವುದೂರೆಯೆಂದು ನಂಬಿ
ನಾವು ಚಿಂತೆ ತೊರೆದು ಇಹೆವೊ
ಯಾವುದಳಿವವರೆಗು ಬೆಳೆದು
ಯಾವುದೆಮ್ಮನುಳಿಪುದೆಂದು ತಿಳಿಯುತಿದ್ದೆವೊ
ಕಾವು ಕಳಚಿ ಜಾರಿ ನೆಲಕದುರುಳಿಹೋಹಂದು
ನಾವು ಅಳಿವ ಮುನ್ನಮೇ ತಾನು ಅಳಿವುದುಂ.

ಬಣ್ಣದಿಂದ ಚಿತ್ರದಿಂದ
ಕಣ್ಣ ಮೋಹಿಸುತ್ತಲಿರುವ
ಸಣ್ಣ ಹೂವು ತನ್ನ ಬಳಿಗೆ
ಬಂದ ಹುಳುವ ಬಂದಿ ಹಿಡಿದು ಕೊಂದು ತಿಂಬುದುಂ;
ನುಣ್ಗೊರಲಿನ ಗಾನಸೊದೆಯು ಲೋಗರಿಂಗೆ ಬೀರುತಿರುವ
ಚಿಣ್ಣವೈಯ ಚೆಲುವ ಪಕ್ಷಿ ತಾಯ ಕೊಲುವುದುಂ !

ಕೊರಳ ಬಂಧ ಕರುಳ ಬಂಧ
ತರಳ ತನಯರೊಲುಮೆ ಬಂಧ
ಪ್ರಣಯಿಜನರ ಪ್ರಿಯದ ಬಂಧ
ಹಗಲುಂ ಇರುಳು ಕೂಡಿ ಬೆಳೆದ ಸಖರ ನೇಹವು
ವಿಷದ ಗಳಿಗೆ ಕೂಡಿಬರಲು ಕಡಿದುಬೀಳ್ವವು
ಎಡರು ಬೇಂಟೆಯಾಡಿ ಬರಲು ಸಡಿಲಬೀಳ್ವವು.

— ಒಡೆವುದೆಲ್ಲ ಒಡೆಯಲೇಳು
ಮಡಿವುದೆಲ್ಲ ಮಡಿಯಲೇಳು
ಎಡರ ಬೇಟೆಯಲ್ಲಿ ಸಿಲುಕಿ
ಉಳಿವು ಬೇಸರಾಗಿ ಪ್ರಾಯವುಡುಗಿ ಹೋಗಲಿ
ಮನದ ಧೈರ್ಯಗಳನು ಮುರಿವ ಸೋಲು ಕಾಡಲಿ
ನಾಲ್ಕು ಕಡೆಗಳಿಂದ ವಿಧಿಯು ಕೆರಳಿ ಕವಿಯಲಿ.

ಪೆರ್ಮೆ ಮೇಲ್ಮೆಯೆಂದು ಬರಿದೆ
ಗಾಸಿಪಟ್ಟು ಬಳಲಿ ಸೊರಗಿ
ಆಗದುದಕೆ ಹೋಗದುದಕೆ
ಆಸೆಪಟ್ಟು ಭಂಗವಡುತೆ ನವೆವುದೇತಕೆ?
ಚೆಲುವು ನಿಲ್ಲದಿದ್ದರೇನು ಬಲವು ಕುಗ್ಗುತಿದ್ದರೇನು
ಪ್ರಿಯರ ಸಖರ ಒಲವು ನೇಹ ಕುಂದುತಿದ್ದರೇನ್?

ಚೆಲುವು ಒಲವು ಬಲವು ನೇಹ
ಇರುವವರೆಗು ಸವಿಯೆ ಅಲ್ತೆ!
ಬರುವುದೆಲ್ಲ ಬರಲಿಯೆಂದು
ಕೊಟ್ಟ ಕಾಲ ಕೊಂಡುಹೋಹುದೆಂದು ನಂಬುತೆ
ವಿಧಿಯ ಕೆರಳು ಕೋಪವೆಂದು ಅಳುಕದಂತಿರು;
ಎಡರ ಶರದ ಘಾತವೆಂದು ಮಣಿಯದಂತಿರು.

— ಒಂದು ಬಾರಿ ಅದಕೆ ಜಯವು
ಒಂದು ಬಾರಿ ಇದಕೆ ಜಯವು
ಒಂದು ಸಮಯ ತೀರದಿರುವ ವೀರ ವೈರವು
ಒಂದು ಬಾರಿ ಮುಸುಕು ನಸುಕು
ಒಂದು ಬಾರಿ ಬೇಸರಾಸ
ರೊಂದು ಬಾರಿ ಈಸು ಜಯಿಸು ಎನ್ನುತಿರುವುದು.

ಕಾಣಿಕೆ

೧

‘ ಅಂಥ ಭಾಗ್ಯವೆನಗೆ ಬಹುದೆ ? ’
ಎಂದು ನುಡಿದು ನಿಡಿದು ಸುಯ್ದು
ಅಡಿಯ ಹಿರಿಯ ಬೆರಲಿನಿಂದ
ನೆಲದಿ ಬರೆದು ಬರೆದು ಬರೆದು ನೋಡಿ ನಿಂದುದ

— ಮರೆವೆನೆಂತು ಮರೆವೆನೆಂತು ಮರೆವೆನೆಂತದ ?—

ಈಗಲಿನಿಸು ಕಾಲಕಳೆದು
ಹೋಗಿ ಮುಪ್ಪುಬರುತಲಿರಲು
ಆಗ ಕೇಳ್ದ ನಿನ್ನ ನುಡಿಯ
ಸೋಗು ಹೆಚ್ಚಿ ಹೆಚ್ಚಿ ಹೆಚ್ಚಿ ಧ್ವನಿಸುತಿರುವುದು.

ಕಿವಿಯು ನುಡಿಯ ಕೇಳ್ವ ಮುನ್ನ
ಹೃದಯವರಿತುಕೊಂಡಿತದನು
ತುಟಿಗಳದನು ನುಡಿವ ಮುನ್ನ
ಮೊಗದಭಾವ ಹೇಳಿ ಹೇಳಿ ಹೇಳುತಿದ್ದುದ.

ದೇವನಿತ್ತ ಒಲವನೆಲ್ಲ
ಕಂಗಳಲ್ಲಿ ಕೆನ್ನೆಗಳಲಿ
ಬೆಳಗಿಸುತ್ತೆ ಉಕ್ಕಿಸುತ್ತೆ
ನೋಟನಟ್ಟು ನೋಡಿ ನೋಡಿ ನೋಡುತಿದ್ದುದ.

ಜಗದೊಳಿರುವ ಸವಿಯನೆಲ್ಲ
ಕೊರಲಿನಲ್ಲಿ ನುಡಿಗಳಲ್ಲಿ
ನುಡಿಯ ಸೊದೆಯ ಸೋನೆಯಲ್ಲಿ
ಕರಸಿ ಸುರಿಸಿ ಸುರಿಸಿ ಸುರಿಸಿ ಎರೆಯುತಿದ್ದುದ.

೨

ನನ್ನ ಮನೆಯ ಲಕುಮಿಯಂತೆ
ನನ್ನ ಭಾಗ್ಯ ತಾರೆಯಂತೆ
ನನ್ನ ಬಾಳ ಬೆಳಕಿನಂತೆ
ನಿಲುವೆಯೆಂದು ನಲಿದು ನಲಿದು ನಲಿಯುತ್ತಿದ್ದೆನೇ !

ಯಾವ ಯಾವ ಯೋಗ ಭೋಗ
ವೆಳಸಿ ರಚಿಸಿ ಸುಖಿಸುತಿದ್ದು
ಯಾವ ಪರಿಯ ಬಯಕೆ ಬೆಳಸಿ
ಬೆಳಸಿ ಬಲಿಸಿ ಬಲಿಸಿ ಬಲಿಸಿ ಹಾಡುತಿದ್ದೆನೋ ! —

ಸಿಡಿವ ಸಿಡಿಲ ಹಿಡಿದುತಂದು
ಮಿಂಚುಬಳ್ಳಿಯಿಂದ ಬಿಗಿಸಿ
ಗುಡುಗ ರಥಕೆ ಕಟ್ಟುತೆಳಸಿ
ಮುಂಡಿಗೆ ಉಡುವ ತರುವೆ ತರುವೆ ತರುವೆನೆಂದೆನೇ ! —

೩

ಅಂದು ಒಂದು ಗಳಿಗೆ ನನ್ನ
ಮುಂದೆ ನಿಂದೆ ಹಾದೆ ಹೋದೆ
ಅಂದು ಕೊರಲನೆತ್ತಿ ಹಾಡಿ
ಸವಿಯೊಲುಮೆಯ ಬೀರಿ ಬೀರಿ ಬೀರಿ ಹೋದೆಯೋ !

ಹೂವು ಪರಿಮಳಂಗಳನ್ನು
ಬಿರಿದ ತನಿಯ ಹಣ್ಗಳನ್ನು
ಉಡುಗೆ ತೊಡುಗೆಗಳನು ನೋಡಿ
ನಿನ್ನ ನೆನಪು ಬಂದು ಬಂದು ಬಂದು ನಿಲುವುದು.

ಎಳಬಿಸಿಲಿನ ಬೆಳಕಿನಲ್ಲಿ
ಇಳಿಸಂಜೆಯ ಪೊಳ್ತಿನಲ್ಲಿ
ಬೆಳುದಿಂಗಳ ರಾತ್ರಿಯಲ್ಲಿ
ಕೊಳ ಸರಗಳ ಮಡಿಲಿನಲ್ಲಿ ತೇಲಿ ತೇಲಿ ತೇಲಿ ಕಾಣುವೆ.

ದಿನವು ಮಾಸವಾಗುತಿರಲು
ಮಾಸ ವರುಷವಾಗುತಿರಲು
ವರುಷಗಳಿವು ಕಳೆಯುತಿರಲು
ಆ ದಿನದಿನಿನೆನಪಿದೂರಿ ಊರಿ ಊರಿ ಊರುತಿರುವುದು.

೪

ನಿನ್ನನಿಂತು ನೆನಸಿಕೊಳುವ
ನನ್ನ ಪಾಪಿಯೆಂಬರೇನೊ
ಅಂದುಕೊಳುವರಂದುಕೊಳಲಿ
ನಿನ್ನನಿಂತೆ ಇಂದು ಮುಂದು ಇಂದು ಮುಂದು ನೆನೆಯುತಿರುವೆನು

ನೆನಪಿನಲ್ಲಿ ಜೀವವಿಹುದು
ನೆನಪಿನಲ್ಲಿ ಸೌಖ್ಯವಿಹುದು
ನೆನಪಿನಲ್ಲಿ ತಾಳ್ಮೆಯಿಹುದು
ನಿನ್ನ ಪಡೆವ ಭಾಗ್ಯವೆನಗೆ ಇಲ್ಲ ಇಲ್ಲ ಇಲ್ಲವಾದರೂ.

ಆಗದುದಕೆ ಚಿಂತೆಯೇಕೆ
ಆಗುವುದದು ಆಗಲೇಳು
ನಿನ್ನ ಹೆಸರ ಹೇಳಿ ಕೊಡುವೆ
ನಿನ್ನದೀ ತನು—ನಿನ್ನದೀ ಧನ, ನಿನ್ನ, ನಿನ್ನ, ನಿನ್ನದೀ ಮನ.

ನಚ್ಚು

ನೆನಪಿನಲಿ ಕನಸುಗಳು ನೆಯ್ದುಕೊಂಡಿಹವು
ಕನಸಿನಾಸೆಗಳೆಲ್ಲ ಫಲಿಸಲೆನಿಸುವುದು
ಮನಸಿನಂತರದಲ್ಲಿ ಸೊರಗಿದ್ದ ಸಂತಸವು
ಚಿಲುಮೆ ನೀರೊಲು ಚಿಗಿದು ಚಿಗಿದು ಏಳುವುದು.

ಎನಿತು ಬಡತನವಿರಲಿ ಎಡರು ಕವಿದಿರಲಿ
ಎನಿತರಾಯಸ ತೋರಿ ಬೇಸರಾಗಿರಲಿ
ಎನಿತು ಮಹದಾಸೆಗಳು ಭಂಗವಡೆದಿರಲಿ
ಮರುಳು ಹೃದಯವು ಸುಖವ ಬಯಸಿ ಬಯಸುವುದು.

ಕಣ್ಣು ಕಾಣದ ಬಯಕೆ ಕಾಳ್ಗಿಚ್ಚಿನಂದದಲಿ
ಸಂತತವು ಉರಿದುರಿದು ಜ್ವಲಿಸುತಿಹುದು
ಉಡುಗಿರುವ ಮೈಗೆ ಹೊಸ ಚೇತನವನೀಯುತ್ತೆ
ಮರಣದಿಂದಲೆ ಉಳಿವ ಹೀರಿ ಬೆಳೆಯುವುದು.

ಉರಿಮರಳುಕಾಡಿದೋ ಮಳೆ ನಿರೀಕ್ಷೆಯೊಳಿಹುದು
ತಿರುಕ ಮಹದೈಶ್ವರ್ಯ ಬರುವುದೆಂದಿಹನು
ಅರೆನಿಮಿಷ ಕಾಲದಲಿ ಸಾಯಲಾಗಿರುವೀತ
ವರುಷವೈವತ್ತಿನ್ನು ಬಾಳ್ವೆನೆಂದಿಹನು.



ಸಿದ್ಧಾರ್ಥನ ರಾಜ್ಯ ಪರಿತ್ಯಾಗ
ಶ್ರೀಮಾನ್ ಕೆ. ವೆಂಕಟಪ್ಪನವರ ಕೃತಿ

ಸಿದ್ಧಾರ್ಥನ ರಾಜ್ಯಪರಿತ್ಯಾಗ

ನಾದನಾಮಕ್ರಿಯೆ

ನಡೆ ಹಯವೆ ನಡೆ ಮುಂದಕೀಗ !
ಸಾರವಿಲ್ಲದ ಸುತ ಸತೀ ವ್ಯಾಮೋಹದಿಂ ದೂರ
ಸಾರಿ ಹೋಗುವ ನಾವು ಮುಂದಕೀಗ — ॥

ನಡುರಾತ್ರಿ ಮೀರಿಹುದು ಜಗ ನಿದ್ರಿಸುತ್ತಿಹುದು
ಗಡಿನಾಡುಗಳ ದಾಟಿ ದೂರ ಸಾರುವೆವು
ತಡೆಯುವಿನ್ನೆನ್ನನೀ ರಾಜ್ಯಸುಖದಾಸೆಗಳು
ನಿಡು ಕಾಡುದಾರಿಗಳ ಹಿಡಿದು ನಡೆ ಹೋಗು.

ತಿರುತಿರುಗಿ ನನ್ನ ಮೊಗ ನೋಡದಿರು ಬೇಡದಿರು
ಕೊರಗದಿರು ಮರುಗದಿರು ನನ್ನಸಲುವಾಗಿ
ಅರಿವಿನಾ ಮಾರ್ಗವಿದು ಪರದ ಸನ್ಮಾರ್ಗವಿದು
ಧರೆಯ ದುಃಖದ ಭಾರವಿಳಿಪ ಮಾರ್ಗವಿದು.

ಜನರು ಸುಳಿಯದ ದಗಮ್ಯ ಕಾನನವ ಸೇರುತ್ತೆ
ವನದ ಏಕಾಂತದಲಿ ಶಾಂತಿಯಾರ್ಜಿಸುವ,
ಮನವನೊಮ್ಮೊನೆಯಲ್ಲಿ ನಿಲಿಸಿ ಜಾನಿಸುತಲ್ಲಿ
ಗಹನ ತತ್ತ್ವ ರಹಸ್ಯವರಿಯುತಾನಂದಿಸುವ.

ವಿಶ್ವಹೃದಯುವನಿರಿದ ವಿಷಬಾಣವೀ ವಿಧಿಯ-
ಸಹ್ಯ ಹಿಂಸೆಯನಿತ್ತು ಪೀಡಿಸುತ್ತಿಹುದು;
ಸ್ವಸ್ಥಚಿತ್ತದೊಳಿನ್ನು ಎಂತು ತಾಳುವುದಿದನು
ಅಶ್ವವರ ತಡವೇಕೆ ದೃಢವ ಕಂಡಿರುವೆ.

ಅರಿದ ಬಳಿಕೀಯೆನ್ನ ಧರೆಗೆ ಹಿಂದಿರುಗುತ್ತೆ
ನರರ್ಗೆ ಬಳಲಿದವರ್ಗೆ ದಾರಿ ತೋರುವೆನು;
ಉರಿಯುತಿದೆ ಈ ಒಡಲು ನೆನೆ ನೆನೆದು ಹಿಂಸೆಗಳ
ದಯೆಯಹಿಂಸೆಯ ಧರ್ಮವಿವರ ಹೇಳುವೆನು.

ಚಿತ್ರ

೧

ಚಿತ್ರದಲಿ ನಾನಿನ್ನ ಬರೆವೆನೆಂದೆ
ದಿವ್ಯ ಮೋಹನ ರೂಪು
ಕಳೆಗೊಂಡು ಬೆಳಗುವುದು
ಎಂದು ನಾನಂದುಕೊಂಡೆ.

ಹನ್ನೆರಡು ವರುಷಗಳು ತಪವ ಗೈದೆ,
ಪರಿ ಪರಿಯ ಜಾನದಲಿ ನಿಲಿಸಿಕೊಂಡೆ,
ನಿಲಿಸಿಕೊಂಡುದ ಮನದಿ ಬರೆದುಕೊಂಡೆ,
ಮನದ ಚಿತ್ರವನೀಗ ಬರೆವೆನೆಂದೆ.

ಮನದ ಚಿತ್ರವ ಜಗವು ನೋಡಲೆಂದೆ,
ನೋಡುತ್ತ ಬಹುಕಾಲ ನಲಿಯಲೆಂದೆ,
ನಲಿದವರ ಭಾವಗಳ ತಳೆಯಲೆಂದೆ,
ತಳೆದಲ್ಪಮತಿಗಳನು ಕಳೆಯಲೆಂದೆ.

ಬಣ್ಣಪಾತ್ರೆಯ ಮುಂದೆ ಇರಿಸಿಕೊಂಡೆ,
ಅವುಗಳನು ಕಿರಿಕಿರಿದು ಕಲಸಿಕೊಂಡೆ,
ಕಲಸಿ ಕಳೆ ಕಾಂತಿಗಳ ಬರಿಸಿಕೊಂಡೆ,
ಬರಿಸಿ ಕೈಯಲಿ ಕುಂಚ ಹಿಡಿದುಕೊಂಡೆ.

ರೇಸಿಮೆಯ ಮಿೂರಿಸುವ ನಯದ ಎಳೆಗಳನಂ
ಕುಯಿದು ಕಟ್ಟಿದ ಕುಂಚಿ ಕೈಗೆ ಕೊಂಡೆ
ಕುಂಚಿಯನು ತಿಳಿಯಾಗಿ ಎಳೆದು ಹರಿ ಹರಿಸುತ್ತೆ
ಗೆರೆಗಳಿಗೆ ಲಾವಣ್ಯ ಬರಿಪೆನೆಂದೆ.

ಕೋಟಿ ಕಳೆವೆತ್ತಿರುವ ನಿನ್ನ ಲಾವಣ್ಯವನು
ಬರಿ ಮಣ್ಣು ಬಣ್ಣದಲಿ ಬರಿಪುದೆಂತೆಂದೆ,
ಬಾರದಿರೆ ನೀ ಹೋಗಿ ಕರೆದುತಾರೆಂದು
ದೆಸೆದೆಸೆಗೆ ಕಣ್ಬೆಳಕ ಕಳುಹಿಕೊಟ್ಟೆ:

— ಎಲೆಗಳನು, ಲತೆಗಳನು, ಹೂವು ದಳಗಳನು
ಅವುಗಳಲಿ ಅಡಗಿರುವ ಜೀವ ಗುಣಗಳನು
ಹಣ್ಗಳನು ಮಣಿಗಳನು ಬಾನ ಬಿಲ್ಗಳನು
ಅವಕೆ ಸಿಂಗರವೀವ ಜೀವ ಶಕ್ತಿಯನು;

ಹೊತ್ತಾರೆ ದಾಳಿಂಬದರುಣಕಾಂತಿಯನು
ಸಂಜೆಯಿಳಿನೇಸರಿನ ಕಿತ್ತಿಳೆಯನು
ಎಳವುಲ್ಲುಕಾವಣದ ಪೈರುಪಚ್ಚೆಯನು
ಹಿಮಬಿಂದು ಮುತ್ತುಗಳ ಧವಳ ಭೋಗವನು;

ಅಪರಾಹ್ನದಾಗಸದ ಮೃದುಲ ನೀಲಿಯನು
ನಡುರಾತ್ರಿ ಇಳೆಗೀವ ತುಂಬು ಶಾಂತಿಯನು
ಕಡಲನೆಲಸಿನೊಳಿರುವ ಅರಸು ಗಂಭೀರವನು
ನಭದ ಮುಂಗಾರ್ಮುಗಿಲ ರೌದ್ರಗಳನು;

ಎಳೆಮಂಜ ತಿವಿದು ಬಹ ತರಣಿ ಕಿರಣವನು
ಶರದಿಂದುಮಂಡಲದ ರಜತ ಕರಗಳನು
ತಾರೆಯಲಿ ಮಿಂಚಿನಲಿ ಉರಿವ ಮಿರುಗುಗಳನ್ನು
ಎಳೆಯ ಮಕ್ಕಳ ನಗುವ ಕಣ್ಣ ಕಾಂತಿಯನು.—

೨

ರೂಪು ರೇಖೆಗಳಿಂದ ಸಿಂಗರವ ಗೈಯುತ್ತೆ
ಮೈಯ ನಿಲವನು ಅಳೆದು ಮೊದಲು ವಿರಚಿಸಿದೆ;
ಉಕ್ಕಿನಂದದ ಸುಪ್ಟು ಕಾಯಕ್ಕೆ ರೂಪಿತ್ತು
ದಾತ್ತ ಭಂಗಿಯನಿತ್ತು ನಿಲಿಸಿ ನೋಡಿದೆನು.

ತನುವಿನಂಗಾಂಗದಲಿ ದೈವ ಗುಣ ಸಂಚಾರ
ತೋರಿ ಸೂಸುವವೋಲು ಕಾಂತಿ ತುಂಬಿದೆನು,
ಮೊಗದ ಮುದ್ರೆಯೊಳಿರುವ ದೇವ ಭಾವಗಳಿಂದ
ಚೆಲುವುಗೊಂಡಿಹ ಬಾಯಿ ಕಣ್ಣು ಹಣೆಗಳಿಗೆ.

ಭುವನ ಮೋಹನ ರೂಪ ನೋಡಿ ಆನಂದಿಸುತೆ
ಮನದ ಚಿತ್ರದೊಳದನು ತೂಗಿ ನೋಡಿದೆನು
ಮೊದಲು ಕಾಣಿಸದಿದ್ದ ಭಾವವೊಂದಾಹಾಹ!
ಧ್ಯಾನ ಚಿತ್ರದ ಮೊಗದ ಮೇಲೆ ಕಾಣಿಸಿತು.

ಕರುಣೆಯಿಂದರಳಿದ್ದ ಕಣ್ಣುಗಳ ತಾಣದಲಿ
ಆಳ ತಿಳಿಸದೆನೋಳ್ಪ ಕಣ್ಣು ಕಾಣುವುದು!
ಪ್ರೇಮದೊರತೆಯವೋಲು ಬಿರಿದಿದ್ದ ತುಟಿಗಳಲಿ
ಕೊರೆದೆಯ ನಿಶ್ಚಲವು ಕೊರೆಯು ಕಾಣುವುದು!

ಮೊಗದ ಮುದ್ರೆಯೆ ಬೇರೆ
ಹಣೆಯ ನೆಲಸೇ ಬೇರೆ
ಅರಿವಿಗಳವಡದಿರುವ
ಭಾವವೆದ್ದು ಕಾಣುವುದು !

ಧ್ಯಾನ ಚಿತ್ರವ ಬಿಟ್ಟು ಬರೆದ ಚಿತ್ರವ ನೋಡೆ
ಏನಿದಚ್ಚರಿ ! ಇಲ್ಲು ಅಂತೆ ಕಾಣುವುದು !
ನಿನ್ನ ನಗೆಮೊಗ ನೋಡಿ ನಲಿಯುತಿದ್ದವಗೆ
ದೇವ, ಏನನ್ಯಾಯ ಇಂತುಗ್ರೈಯುವರೆ ?

ವಿಚಿತ್ರ ಸಿಂಗರದಿಂದ ಇಲ್ಲಿ ಕಾಣುತಿಹೆ,
ವಿಚಿತ್ರದಚಲತೆಯನ್ನು ತೋರುತಿರುವೆ,
ವಿಚಿತ್ರ ವಿಮುಖತೆಯೇಕೆ ತೋರುತಿರುವೆ,
ಭಕ್ತರನು ಇಂತೇಕೆ ಗಾರುಗೊಳಿಸುತಿಹೆ !

ಈ ಪರಿಯೊಳಿರುವವನ ಆ ಪರಿಯೊಳಿಹನೆಂದು
ನಾ ಬರಿದೆ ಈವರೆಗೆ ಭ್ರಮಿಸಿದ್ದೆನೊ !
ನಾವ್ ನಿನ್ನ ಗುಣಗಳನು ಎಣಿಸುತಿರುವುದ ನೋಡಿ
ಏಂ ಮರುಳರೆಂದೆಮ್ಮ ಗಣಿಸದಿಹೆಯೊ !

ಅನಂತ ಚರಿತೆಯನರಿವ
ಅಖಂಡ ವ್ಯಾಪ್ತಿಯನಳೆವ
ಅಲ್ಪಮತಿಗಳ ಯತ್ನ
ನೋಡಿ ನಗುತಿಹೆಯೊ !

ಪಾಪ ಅರಿಯದರೆಂದು
ಪಮ್ಮಲನೆ ಮರುಗುವೆಯೊ
ಅರಿಯದರ ತಿಳುಹಲ್ಕೆ
ಯಾವ ದಾರಿಯನೆಮಗೆ ತೋರಿಸಿರುವೆ !

ಹೃದಯ ಗತಿ ನಡಸಲ್ಕೆ
ಮನದೋಟವೋಡಲ್ಕೆ
ನಿಜದಾತ್ಮವರಿಯಲ್ಕೆ
ಬೇರಾವ ಅನುಕೂಲ ಕಲ್ಪಿಸಿರುವೆ !

ನಮ್ಮ ವರ್ಣನೆಯಂತೆ ನೀನಿಲ್ಲದಿದ್ದೊಡೆ
ಬೇರಾವ ರೂಪದಲಿ ನೀನಿದ್ದಪೆ !
ಶುಚಿಗೊಳಿಸು ಕರಣಗಳ ಜಾನಗಳ ಕೊಳೆ ಹರಿಸು
ಒಲಿದೆಮಗೆ ಸತ್ಯವನು ಅರುಹು ಬಾರೈ.

ಶಿವನಕೋಪ

‘ ದೂತರನು ಕಳುಹಾಯ್ತು
ನಯವ ಹೇಳಾಯ್ತು
ಸವಿನುಡಿಯು ನುಡಿದಾಯ್ತು
ಬೆದರಿಸಿದುದಾಯ್ತು ;

ಅಂತುಗೈವುದು ಪಾಪ
ವೆಂದು ಸೂಚಿಸಿಯಾಯ್ತು
ದೇವ ಮನ್ನಿಸನೆಂದು
ಎಚ್ಚರಿಸಿಯಾಯ್ತು ’

— ಎಂದು ಸಭೆಯಲಿ ನುಡಿಯೆ
ಕೋಪದಲಿ ಶಿವನ ಮೊಗ
ಗಂಟಿಕ್ಕಿ ಕಿಚ್ಚಿಡಿದುದು—
ಕೆಂಡದೊಲು ಕಣ್ಣುರಿದುದು.

—‘ ಅಂತೇನು ? ತಿರುಗನೇನು ?
ತಾನು ಮಾಡಿದ ಕರ್ಮ
ಫಲವುಂಡು ಭೋಗಿಸಲಿ
ಆಗಲನುಭವಿಸಲೇಳು ! ’—

ತಿಸುಲವನು ಕೈಕೊಂಡು
ಕೂರ್ವೊನೆಯ ಸರಿ ನೋಡಿ
ಕಾಳ ಕೂಟವ ಬಳಿದು
ಕೈಬೀಸಿ ಎಸೆದನವನು.

*　　　　*　　　　*

ವಿಷದ ಉರಿಮೊನೆ ಹೋಗಿ
ಕೊರೆ ಕೊರೆದು ಒಳವೊಕ್ಕು
ಮರ್ಮದೊಳಗನು ತಿವಿದು
ಚಿತ್ರಹಿಂಸೆಯನೀಯುತ್ತಿತ್ತು.

— ಕಾಲನಿಗೆ ಆಜ್ಞೆಯಾಯ್ತು:
‘ ಮರಳಿ ಹೇಳುವವರೆಗು
ನೀಂ ಚಲನೆ ನಿಲ್ಲಿಸಿರು
ಒಂದಡಿಯ ಮುಂದಿಡದಿರು;

‘ ನೋವು ಹೊಸತಾಗಿರಲಿ
ಗಾಯ ಮಾಯದೆ ಇರಲಿ
ಹೆರರಾರು ಬೇನೆಯನು
ಹರಿಸಲಾಗದವೋಲಂ ನಿಲಲಿ ನೋವು.’—

ಹಗಲಲ್ಲಿ ಬೇಗೆಯಲಿ
ಖಂಡಮಾಂಸವ ಕೊರೆದು
ಕೊರೆದಂ ಪಾಪವನಟ್ಟಿ
ತನುವನದು ತಿನ್ನುತಿತ್ತು.

ನೆನಪಿನುರ್ಕಲೆಗಳು !
ಉರಿವೊನೆಯ ಯಾತನೆಯು
ನಿದ್ರೆಯಿಲ್ಲದ ತೆರವು
ದಾಹ ದಾರುಣತೆ !

ಮನಸಿನಲಿ ನರಕಗಳು
ಸೃಷ್ಟಿಯಾಗುವುವು !
ಕನಸಿನಲಿ ಸ್ವರ್ಗಗಳು
ನಿಂದು ಕಾಣುವುವು !

ನರಕ ಸ್ವರ್ಗಗಳಲ್ಲಿ
ಬೀದಿಗಳ ಕಲ್ಲುಗಳು
ಇವನ ನೋವನು ತಿಳಿದು
ಮರುಗುತಿಹವು ! —

ಸಭೆಯವರು ಬೇಡಿದರು
ಕಣ್ಣೀರ ಸುರಿಸಿದರು
ಕರಗದಾದನು ಶಿವನು
ಮೊಗದ ಕೆರಳಿಳಿಯದಾಯ್ತು.

‘ನಾಲ್ವತ್ತು ವರ್ಷಗಳು ನೋಡಿಯಾಯ್ತು
ಬೇಡ ಬೇಡೆಂದೆಂತೊ ಕ್ಷಮಿಸಿಯಾಯ್ತು
ಇಂದಲ್ಲದಿರೆ ನಾಳೆ ಸರಿಯುಪ್ಪು
ದೆಂದೆಂತೊ ಕಾದುದಾಯ್ತು;

'ಕರುಣೆಗಿಂಥವರಿನಿಸುಮರ್ಹರಲ್ಲ
ಸಹನೆಗಿಂಥವರಿನಿಸುಮರ್ಹರಲ್ಲ
ನಿರ್ದೋಷಿಗಳ ವಂಶವನು ಹಾಳುಗೈಯುವರು
ಭೂಮಿಯನು ಪಾಪಿಗಳು ಮಸಣಗೈಯುವರು'—

ಇನಿತು ಕೋಪವನೆಂದು
ಕಾಣದಿದ್ದವರು
ಬೆರಗಾಗಿ ತಮ್ಮೊಳಗೆ
ಬೆದರಿ ನಡುಗಿದರು.

ಕಣ್ತೆರೆದು ತಿಳಿಯಿತಾ ಪಾಪಿಗಂದು:
ಪಾಪಕ್ಕು ಮೇರೆಯೊಂದಿರುವುದೆಂದು
ಪಾಪವನು ಶಿಕ್ಷಿಸುವನಿರುವನೆಂದು
ಶಿಕ್ಷೆ ತಪ್ಪದು ಗೈದ ಕರ್ಮಕೆಂದು.

ಕಾಮ — ಚಂದ್ರ

ಏನು ಮರುಳರಿವರು ನೋಡು
ಏನು ಹುಚ್ಚರಿವರು ನೋಡು
ನನ್ನ ಸುಟ್ಟುಬಿಡುವೆವೆಂದು
ನನ್ನ ಬೂದಿಮಾಳ್ಪೆವೆಂದು
ಕೂಗುತಿರುವರು;
ನನ್ನ ತೇಜವಳಿದುದೆಂದು
ಹಾಡುತಿರುವರು.

ಮನೆಯಲಿದ್ದ ಹಾಳುಮೂಳು
ಹಳೆಯಪಳೆಯ ಚೂರುಪಾರು
ತಂದು ರಾಸಿಹಾಕಿ ಇಲ್ಲಿ
ನನ್ನ ಪಟವ ಮೇಲೆ ನಿಲಿಸಿ
ಕಾಮನೆಂಬರು;
ಶಿವನು ನನ್ನ ಸುಟ್ಟವೋಲು
ಸುಡುವೆವೆಂಬರು.

ಸಖರು ನಾವು ಮೇಲಿನಿಂದ
ಅವರ ನೋಡಿ ನಗುವೆವೆಂದು
ನಮ್ಮ ಅಮೃತರಾಜ್ಯವನ್ನು
ಹೂಡಿ ಹರಡಿ ಬಲಿವೆವೆಂದು
ಅವರು ಅರಿಯರು;
ಕಾಮನಲ್ಲ ಸುಡುವುದೆಂದು
ಅವರು ಅರಿಯರು.

ಜಗವು ಜೀವಿಸಿರುವವರೆಗು
ಜನರ ಹುಟ್ಟು ನಿಲುವವರೆಗು
ಮನದ ರಚನೆ ಮುರಿವವರೆಗು
ಮನುಜರಾಸೆ ಈಗಿನಂತೆ
ಇರುವವರೆಗೆಯೂ,
ನರರ ಹೃದಯ ರಾಜ್ಯದಲ್ಲಿ
ನಾವು ದೊರೆಗಳು.

ಅತ್ತ ನೀನು, ಇತ್ತ ನಾನು
ರಜತಕರನು, ಚೆಲುವುಮೊಗನು
ಸೋಮ ನೀನು, ಕಾಮ ನಾನು
ಸುತ್ತಲೆಲ್ಲ ಸಂತಸವನು
ಬಿತ್ತುತಿರುವೆವು:
ಸಂತಸದಲಿ ಬೆಳೆದ ಬೆಳಸ
ಹಂಚುತಿರುವೆವು.

ಹಳೆಯ ಕಾಲವೆಲ್ಲ ಮುಗಿದು
ಚಳಿಯ ಕಾಲವೆಲ್ಲ ಕಳೆದು
ಇಳೆಯ ಕೊಳೆಗಳೆಲ್ಲ ಹೋಗಿ
ನಾಳೆ ಹೊಸದು ವರುಷವೊಂದು
ಓಡಿ ಬರುವುದು;
ಇಳೆಗೆ ಹೊಸದು ಭಾಗ್ಯವೊಂದು
ನೆಲಸೆ ಬರುವುದು.

ಹಳದಿ ಹಣ್ಣು ಎಲೆಗಳೆಲ್ಲ
ಒಣಗಿ ಮುದುರಿ ಉದುರಿ ಕೆಳಗೆ
ಬಿದ್ದು ಎದ್ದು ಗಾಳಿಯಲ್ಲಿ
ತಂಡ ತಂಡವಾಗಿ ತೂರಿ
ತೂರಿ ಹೋದುವು;
ತಮ್ಮ ಪಟ್ಟವಾಯಿತೆಂದು
ತಿಳಿದು ಹೋದುವು.

ಹಿಮಗಳಿಂದ ಬಿರಿಯಿಸುತ್ತೆ
ಶ್ರಮಗಳಿಂದ ಬಳಲಿಸುತ್ತೆ
ಚಳಿಗಳಿಂದ ನಡುಗಿಸುತ್ತೆ
ಗಾಳಿಯಿಂದ ಕೊರೆಯಿಸುತ್ತೆ
ಇದ್ದ ಶಿಶಿರನು
ಜನದ ಶಾಪದುಸಿರು ತಗುಲಿ
ಅಳಿಯುತಿರುವನು.

ಹಿರಿಯ ಸೈನ್ಯವನ್ನು ತಂದು
ನನ್ನ ಸಖನು ದಾಳಿಬಂದು
ಅರಿಯ ರಾಜ್ಯದೊಳಗೆ ನಿಂದು
ಅವನ ಹೃದಯದಲ್ಲಿ ಪ್ರಭವ
ಹೂಡುತಿರುವನು;
ಚೈತ್ರಯಾತ್ರೆಗಾಗಿ ಬಂದು
ಚೈತ್ರ ನಿಲುವನು.

ತಳಿರ ಲೋಕದಗ್ರದಿಂದ
ಶುಕಿಯ ಕೊರಲು, ಪಿಕದ ಕುಕಿಲು
ಹೊಸದು ಲೋಕ ಬರುವುದೆಂದು
ಸುಖದ ಹಸಿರು ಲೋಕವೆಂದು
ಸಾರುತಿರುವುವು;
ಮಂದಿತನಗಳು ಹೋಗುವೊಸಗೆ
ಬೀರುತಿರುವುವು.

ಬರುವ ಚೈತ್ರಮಾಸದಲ್ಲಿ
ನೀನು ಇಂತೆ ಬರಲು ಜನರು
ನಿನ್ನ ತುಂಬು ಕಳೆಗಳಲ್ಲಿ
ಸೊದೆಯ ಸೋಗು ಸರಸಗಳನು
ಇಲ್ಲಿ ಕಾಂಬರು;
ಮಧುವಿನೊಡನೆ ನಿನ್ನ ಸಖ್ಯ
ನೋಡಿ ನಲಿವರು.

ಅಡಗಿ ಮುದುರಿ ಇದ್ದ ಹರುಷ
ವೆಲ್ಲ ಹಿಂದೆ ತಿರುಗಿ ಬಂದು
ಹೃದಯುವನ್ನು ಮನಗಳನ್ನು
ನಲಿಸಿ ಕಲಿಸಿ ಕಾಮುವನ್ನು
ಬೆಳಸುತಿರುವುದು;
ಹೂವನೇರಿ ನಾನು ಬಂದು
ಕೆಲದಿ ನಿಲುವೆನು.

ಎಲ್ಲಿ ಪ್ರಾಣದುಸಿರು ಇಹುದೊ
ಎಲ್ಲಿ ಜೀವದಾಸೆಯಿಹುದೊ
ಎಲ್ಲಿ ರಾಗ ಭಾವವಿಹುದೊ
ಎಲ್ಲಿ ಇಂದ್ರಿಯಂಗಳಿಹವೊ
ಅಲ್ಲಿ ನಿಲುವೆನು.
ಎಲ್ಲಿ ಸಂಗ ಸೇರಿಸುವುದೊ
ಅಲ್ಲಿ ಬೆರೆವೆನು.

ತಳಿತ ತಳಿರಿನರಮನೆಗಳು
ಅರಲ್ವ ಹೂವ ಪರಿಮಳಗಳು
ಮೊರೆವ ಪ್ರಿಯರ ಎದೆ ಮನಗಳು
ಉಲಿವ ಹಕ್ಕಿ ಸವಿ ಸರಗಳು
ಸಂಚುಗಾರರು;
ನನ್ನ ಅರಸುತನವ ನಿಲಿಪ
ಸಾಲುಗಂಬವು.

ಶಿವನು ಸುಟ್ಟುಬಿಟ್ಟನೆಂದು
ನಾನು ಬೂದಿಯಾದೆನೆಂದು
ನನ್ನ ಬಲುಮೆ ಬರಿಯದೆಂದು
ತಮ್ಮ ಶಕುತಿ ಹಿರಿಯದೆಂದು
ಬರಿದೆ ಭ್ರಮಿಸುತೆ
ವೀರ ಸಾಸ ಗೈವೆವೆಂದು
ಹೆಮ್ಮೆಗೊಳುವರು.

ನನ್ನ ಚೆಲುವು ಜಾಲಗಳಿಗೆ
ನನ್ನ ಮೋಹ ಮಾಟಗಳಿಗೆ
ನನ್ನ ನಾಟ್ಯ ಗಾಡಿಗಳಿಗೆ
ನನ್ನ ಹೂವು ಬಾಣಗಳಿಗೆ
ಸೋಲದಿರುವರಾರ್ ?
ಉರಿವ ತಪವ ಗೈವ ಶಿವನೆ
ಬಂದಿ ಬಿದ್ದನು !

ಜಗದ ಮೇಲ್ಮೆಗೆಂದು ಕರೆಯೆ
ಹೋಗಿ ತಪವ ಹಾಳು ಗೈದೆ
ದೈತ್ಯರಳಿಯಲೆಂದು ಗೈದೆ
ಅಂದು ಸಾಂಗನಾಗಿ ನಿಂತು
ಶಿವನ ಗೆಲ್ದೆನು;
ಇಂದನಂಗನಾಗಿ ಜಗಕೆ
ನೋಡಬೇಯುನಂ !

ಅರ್ಧನಾರೀಶ್ವರ

ಕಂಡವರು ಕಂಡಂತೆ ಅರ್ಚಿಸುವರೈ ನಿನ್ನ
ಇಂತೆಂದು ಅಂತೇದು ಅಂತಲ್ಲವೆಂದು —
ಎಲ್ಲ ವರ್ಣನೆಯೆಲ್ಲೆಯೇರಿ ಮೀರುತೆ ದಾಟಿ
ಎಲ್ಲ ಹೊಗಳಿಕೆಗಳ್ಗತೀತನಾಗಿರಲು

ಒಂದು ಮೊಗ ಕಂಡವರು ಕಠಿಣವನೆ ಕಾಣುವರು
ಗಂಡನ್ನೆ, ನಿಯಮವನೆ, ನಿಷ್ಠುರವನೆ;
ಉರಿಗಣ್ಣು ಕೈಶೂಲ, ವಿಷವಕಾರುವ ಸರ್ಪ,
ಉಕ್ಕಿನಲಿ ಸಮೆದಂತೆ ಇರುವ ಒಡಲನ್ನು.

ಎಂತಭಯ ಹಸ್ತವನು ತೋರಿಸುತ್ತಿರು ನೀನು
ಎಂತು ಮೇಗಡೆ ಮೃದುವ ಮೆರಸು ನೀನು
ಎಂತು ತುಂಬಿದ ಮೊಗದಿ ಶಾಂತಿಯನು ಬೀರುತಿರು
ತಂದೆ, ನಿನ್ನಯ ಗಂಡು ಬಲ್ಪೆ ಕಾಣುವುದು.

ಬೇರೊಂದು ಮೊಗದಲ್ಲಿ ಕಾಣುವರು ತಾಯನ್ನು
ಉಕ್ಕಿ ಹರಿಯುವ ಕರುಣೆಯೊರತೆಯನ್ನು
ಅಕ್ಕರನು ಸ್ನೇಹವನು ಅರಳಿದೆಳನಗೆಯನ್ನು
ತೆರೆಗೈಯಿನಿಂದೀವ ಔದಾರ್ಯವನ್ನು.

ಬೆಳ್ಳಿ ಮೈಯಿನ ಚೆಲುವು ತುಂಬು ಕೆನ್ನೆಯು ಪೆರ್ಮೆ
ಕೈಯೊಳಿಹ ಖಳ್ಗದಾಜ್ಞಾನ ದಾನ,
ಮಮತೆಯಲಿ ಪ್ರೀತಿಯಲಿ ಅರಳಿರುವ ಆ ಕಣ್ಣ
ಕಾವ ಮೃದುಗಾಂತಿಯನು ಕಾಂಬರಯ್ಯಾ

ಯಾರರಿವರೈ ನಿನ್ನ ನಿಜವನ್ನು ಆಳವನು
ನಿನ್ನ ಹೃದಯದೊಳಿರುವ ಗಂಭೀರವನ್ನು
ಇತ್ತಲೀ ಸುಮಮೃದುತೆ ಅತ್ತಲುಕ್ಕಿನ ಅಲಗು
ತಂದೆ ದೃಢವೊಂದತ್ತ ತಾಯ್ಕರುಣೆಯಿತ್ತ.

ಒಂದನ್ನು ಮರೆವರಿಗೆ ಬೇರೆ ಮುಖವಿಹುದೆಂದು
ನಿಂದು ಸಂತತ ನೀನು ತೋರುತಿರುವೆ
ದಂಡಿಸುವ ಮೊನೆ ಶೂಲ ಭಯವ ಬೀಸುತಲಿರಲು
ನಂಬಿರುವರಿಂಗಭಯ ದಾನವೀವೆ.

ತಾಯಿತಂದೆಗಳ ಗುಣ ನಿನ್ನಲ್ಲಿ ಸೇರಿಹವು
ಒಂದೆ ಒಡಲಲಿ ಕಾಲದಾದಿಯಿಂದ
ಒಂದು ಕೈ ದಂಡಿಸುವೆ ಒಂದು ಕೈ ಕಾಪಿಡುವೆ
ಎಲ್ಲ ತಾಯ್ತಂದೆಗಳ ತಂದೆ ನೀನು.

ಶಿಕ್ಷೆ ರಕ್ಷಣೆ ನಿನದು ವಿಶ್ವಹರಣದ ಭಾರ,
ವಿಶ್ವ ಮೋಹನ ದಿವ್ಯ ಪೂರ್ಣಸತ್ವ !
ವಿಶ್ವ ಸಂಸಾರವನು ನಿಯಮದಿಂ ತೂಗುತಿಹೆ
ಶಿವ ಶಾಂತನದ್ವೈತನಾನಂದನು.

ಮುರಿದ ಸೇತುವೆ

ಒಣನೆಲ ಹೀರಿಹುದು
ಕುದಿ ನರ ರಕುತವನು
ಭಾರತ ರಿಂಗ್ಲಿಷರ
ಫ್ರೆಂಚರ ಸೈನಿಕರ —

ಮುರಿದಿಹ ಸೇತುವೆಯು
ತಳದಿಹ ಕಾಲುವೆಯು
ರಕುತದಿ ಮಿಂದಿಹವು
ಹಗೆತನ ಹಿಂಡಿಹವು —

ಯುಗಗಳ ಮತ್ಸರದ
ಮುಯ್ಯನು ತೀರಿಸಲು
ದೂರದಿ ಬಂದಿಹರು
ದೇಶಿ ವಿದೇಶಿಗಳು —

ಬಲು ಜನ ಕಾದಿಹರು
ಬಲು ಜನ ಮಡಿದಿಹರು
ಕೆಲಜನರಿರಿದಿಹರು
ಹಲಜನ ನರಳಿಹರು —

ಸಮರದ ಮಧ್ಯದಲಿ
ಆಜ್ಞೆಗಳಿತ್ತವರು
ನೆಲದಲಿ ಬಿದ್ದಿಹರು
ಮಣ್ಣಲಿ ಮಲಗಿಹರು —

ಧರ್ಮಕೆ ಬಿದ್ದವರು,
ಧರ್ಮವನೊದ್ದವರು,
ರಾಜರ ಗೆದ್ದವರು,
ರಾಜ್ಯವ ಕದ್ದವರು —

ಮಂತ್ರದ ತಂತ್ರಗಳು
ಆಳ್ವರ ಹೆಮ್ಮೆಗಳು
ಯೋಧರ ಗರ್ವಗಳು
ನೆಲವನು ಅಪ್ಪಿಹವು —

ಹೆರವರ ದೋಷಕ್ಕೆ
ಇವರೊಡಲಿತ್ತಿಹರು
ಅವರ ಅಧರ್ಮಕ್ಕೆ
ಇನಿಬರು ಕೂಲಿಹರು —

ಏನನು ಅರಿಯಂದರು,
ಕಿರಿಯರು ಹಿರಿಯುವರು
ಕಲಿಗಳು ನಾಡಿಗರು
ತನುವನು ತೆತ್ತಿಹರು —

ಮನೆಯಲಿ ಸತಿಯರನು
ಮಕ್ಕಳು ಮರಿಗಳನು
ಮಕ್ಕಳಶಕ್ತರನು
ತಬ್ಬಲಿ ಗೈದಿಹರು —

ಹಡೆದರ ಕಂಬನಿಯಿಾ
ಕಾಲುವೆ ನೀರಿನೊಳು
ಸಂತತ ಹರಿಯುವುದೀ
ಕಲ್ಲೆದೆ ಬೀಡಿನೊಳು —

ಸತ್ತರ ಗೋಳುಗಳು
ಉಳಿದರ ಶಾಪಗಳು
ಬೆಂದರ ತಾಪಗಳು
ಸುಟ್ಟಿವೆ ನಾಡಿದನು —

ಸುತ್ತಣ ದೇಶವನು
ಈಶನು ಶಪಿಸಿಹನು
ಬೆಳೆಯದು ಪುಲ್ ಪಸಿರುಂ
ಸುಳಿಯದು ತೆಂಬೆಲರು —

ನೆಲವಿದು ಹಣ್ಬಡದು
ಸುಯ್ವುದು ಬೇಯುವುದು
ಹಳ್ಳಿಯ ಹಣ್ವನವು
ಕಣ್ಣನು ಕುಕ್ಕುವುದು —

ತೀರದ ವೈರದಲಿ
ಸತ್ತರು ಸತ್ತವರು
ಬಿಟ್ಟರು ಹಾಳಿದನು
ಉರಿಯುವ ಮಸಣವನು.

ವನಗೀತೆ

ಗಾಳಿಯುಂದದಿ ನಾವು
ಹೋದ ಮೇಲೂ
ವನ ಮಧುರವಾಗುವುವು
ಇಂದಿನಂತೇ.

ಇನಕಿರಣ ಕುಣಿಯುವುವು
ಈಗಿನಂತೇ —
ಇಲ್ಲಿ ಪಾಚಿಯು ಮೇಲೆ
ರೆಂಬೆ ತಳದಲ್ಲಿ.

ಮುಂದೆ ಹುಟ್ಟುವ ಜನರು,
ಬಂದು ಕುಳಿತಾರು
ಇಲ್ಲಿ ಈ ವನದಲ್ಲೆ,
ಎಲೆಗಳಿಂ ಬೆಳಗಿ,

ಆಲಿಸುತಲೀಗಿನಂತೇ
ಹಕ್ಕಿಗಳ ಗೀತೆಗಳನು
ಉಸಿರುವರು ನಮ್ಮಂತೆಯೇ
ಅಚ್ಚರಿಯ ಮಾತುಗಳನು.

ಹೆರರು ನಿಡುಸುಯ್ಯುವರು
ನಮ್ಮಂತೆಯೇ—
'ಒಂದು ದಿನ ಮಾತ್ರ!'ವೆಂದು
ತುಂಬಿ ಮೊರೆಯುವುದು.

— ಯೂಜಿನಿ ಲೀ. ಹ್ಯಾಮಿಲ್ಟನ್

ಬಾ ಬಾ ಬಾ ಚೆಲುವೆ

ಸೊಹಾನಿ

ಬಾ ಬಾ ಬಾ ಚೆಲುವೆ, ಬಾ ಕಮಲೆ
ಮರೆಯುವ ಭವ ಭಯದಾಯಸವ —
ಬರುವುದು ಬರಲೇಳಾಲಬ್ಬರಿಸಲಿ
ತೊರೆವುದು ತೊರೆಯಲೇಳುರಿದು ಬೀಳಲಿ.

ಧರೆಯರ ಕಳಚಲಿ ಶರಧಿಗಳಿಂಗಲಿ
ಇರುಳ್ ಪಗಲಾಗದೆ ಕಾಲ ನಿಲ್ಲಲಿ
ಜವನ ಬಯಲಬಾಯ್ ಸೇರಲಿ ಲೋಕವು
ಜವನುಬ್ಬರದೊಳು ಅಳಿದು ಹೋಗಲಿ.

ಮೆಲುಪು ಬಲುಪಿನ ಶಕುತಿಗಳುಡುಗಲಿ
ನೆನಪು ಮರಳದೆ ತೊಡೆದು ಹೋಗಲಿ
ಇಹಪರಗಳ ಬಿಗಿ ಸಡಿಲವಾಗಲಿ
ವಿಧಿಯ ಸೂತ್ರವೇ ಕಡಿದು ಬೀಳಲಿ.

ಒಡಲೆರಡಾದರು ಒಂದು ಮನದಲಿ
ಒಂದು ಹೃದಯದಲ್ಲಂತರಂಗದಲಿ
ಹೊಂದಿ ಬಲಿದ ಮನದೊಂದು ದೃಢದಲಿ
ಒಂದೇ ಒಲವಿನ ವೀರದಲಿ.

ಪ್ರಳಯ ಘನದವೊಲು ಕವಿದೆತ್ತೆತ್ತಲು
ಎಡರು ಅನಾದರ ಘೋಷಿಸಲಿ
ಬಳುಕದದಟಿನಿಂದೆದೆ ಬಲಿದಿಹೆನಿದೊ
ಚಲವೊಂದುಳಿದಿರೆ ಸಾದಿಸುವೆ.

ಶಿವೆ

ವಸಂತ

ನಿಮಿಷಕ್ಕೆ ನೂರಾರು ಮುಖದಲ್ಲಿ ಹರಿಯುತ್ತೆ
ಅರಿವಿನಂಕೆಗೆ ನಿಲದ ಶಿವನೆ, ಶಾಶ್ವತನೆ,
ಚಲಿಪ ಮನ ನಿನ್ನಲ್ಲಿ ನಿಲುವಂತೆ ಮಾಡಯ್ಯಾ
ತಿಳಿಸಯ್ಯ ಸತ್ಯವನು ದೃಢವ ನೀಡು.

ಕ್ಷಣ ಕ್ಷಣಕು ಬೇರಾಗಿ ಕಾಣುತ್ತೆ ಸುಳಿಯುತ್ತೆ
ಗಗನದಲಿ ಓಡುತಿಹ ಮುಗಿಲ ಮೋಹರದಂತೆ
ಯುಗ ಯುಗದಿ ಅರಸಿರುವ ಜನರ್ಗೆ ಋಷಿಗಳಿಗೆ
ಹಲಪರಿಯ ರೂಪಗಳ ತೋರಿ ಮೋಹಿಸಿಹೆ.

ನರರೆಣಿಕೆ ಗುಣದೆಣಿಕೆಯೊಂದಕ್ಕು ಬಾಗದೆಯೆ
ಒಂದು ನೀತಿಯು ನಿಯಮಕೊಪ್ಪಿ ಸಿಲುಕದೆಯೆ
ಒಂದು ಪರಿ ಚಿಂತಿಸಿದರಿನ್ನೊಂದು ಪರಿ ತೋರಿ
ಅರಸುವರ ಕೌತುಕವ ಭ್ರಮೆಯ ಪೆರ್ಚಿಸಿಹೆ.

ಎಂತು ಸಂಶಯಗಳನು ದೂರಗೈವುದು ಹೇಳು
ಎಂತು ನಿನ್ನಯ ನಿಜವನರಿತು ಪೂಜಿಪುದು
ಎಂತು ನಶ್ವರದಲ್ಲಿ ಶಾಶ್ವತವ ಕಾಣುವುದು
ಎಂತು ರಚಿಪುದು ನಿನ್ನನಂತರಂಗದಲಿ.

ಜಗದ ಕಲ್ಯಾಣವನು ಎಂತು ಸಾಧಿಸುತಿರುವೆ
ಆವಾವ ಜೀವಿಗಳನೆಂತು ಪ್ರೇರಿಸುವೆ
ಆವ ಸುಖದುಃಖಗಳನೇತರದಿ ಹಂಚುತ್ತೆ
ದೇವ, ವಿಶ್ವದ ಮೇಲ್ಮೆ ನಡಸುತಿರುವೆ?

ಕೋಗಿಲೆ

ಹಿರಿಮಂಜು ಬಿಟ್ಟಿಲ್ಲ
ಚಳಿಗಾಲ ನಿಂತಿಲ್ಲ
ಮೈನಡುಕ ಹೋಗಿಲ್ಲ
ಇಬ್ಬನಿಯು ಸುರಿಮಳೆಯ ನಿಲ್ಲಿಸಿಲ್ಲ;
ಶಿಶಿರ ಸಾಮ್ರಾಜ್ಯಕ್ಕೆ ಚ್ಯುತಿಯು ಬಂದಿಲ್ಲ;
ಚ್ಯುತಿ ಬರುವುದೆಂಬೊಂದು ಚಿಹ್ನೆಯಿಲ್ಲ.

ತರಗೆಲೆಗಳುದಿರಿಲ್ಲ
ತಾರೆ ಮೊಗವರಳಿಲ್ಲ
ತರುವೊಂದು ಚಿಗುರಿಲ್ಲ
ಚಿಗುರ್ವಿಡಿವುದೆಂಬೊಂದು ಚಿಹ್ನೆಯಿಲ್ಲ;
ಹಿಮಂಕರನ ಬಿಳಿಕಿರಣ ನಗೆ ಬೀರುವಂತಿಲ್ಲ,
ಬೆಳಂದಿಂಗಳುಂಡಾರು ಆಡುವವರಿಲ್ಲ.

ಹಸುರಿನಿಸು ಕಾಣದಿಹ
ಬರಲು ಕೊಂಬೆಗಳೇರಿ
ಮರದ ತುಂದಿಯನು ಸಾರಿ
ಏಕಾಂಗಿ ನೀನೇಕೆ ಉಲಿಯುತಿಹೆ ಇಂತು?
ಯಾವ ಸಂತಸ ನಿನದು ಹೇಳು ಕೋಗಿಲೆಯೆ,
ಏನ್ ಪ್ರಮತ್ತತೆ ಇಂದು ನಿನ್ನ ಕೂಗಿನಲಿ!

ಎತ್ತಲೇಂ ಚೆಲುವಿಲ್ಲ
ಸಂಗಡಿಗರಾರಿಲ್ಲ
ಗಿಳಿವಿಂಡು ಗೊರವಂಕ
ಹೊಂಬಕ್ಕಿ ಹಾಡುಂತಿಹ ಸರ ಕೇಳುಂತಿಲ್ಲ;
ಯಾವ ಸೊಗ ಬರುವುದನು ನೀನಲ್ಲಿ ಕಾಣುತಿಹೆ,
ನಡುಂಚೈತ್ರವೆಂಬಂತೆ ಉಲಿಯುಂತಿರುವೆ !

ನಿಡುಬಯಲನಿರಿಯುಂತಿಹೆ,
ದೆಸೆಗಳನು ತುಂಬುಂತಿಹೆ
ಕಿವಿಗಳನು ಬಿರಿಸುಂತಿಹೆ
ಎದೆವೊಕ್ಕು ಆಸೆಗಳ ಕೆರಳಿಸುಂತ್ತಿರುವೆ !
ಬಂದೀತಂ ಬಂದೀತಂ ನಗುಂಗಾಲ, ಅಕ್ಕ ಓ
ಎಂದು ಕಂಠವನೆತ್ತಿ ಹಾಡುಂತಿಹೆಯೋ !

ನಮಂಗೆ ಗೋಚರಿಸದಿಹ
ಹೆರರಾರು ಅರಿಯದಿಹ
ನೀನೊರ್ವ ಕಾಣುತಿಹ
ಹೊಸ ಜೀವ ಸಂಚಾರವಾವುದಿಹಂದೊ !
ನೆಲದಿಂದ ಬೇರಿಂಗೆ, ಬೇರಿಂದ ತರುವಿಂಗೆ
ಜೀವರಸವೇರುಂವುದ ಕಾಣುತಿಹೆಯೊ !

ಒಣಗಿರುವ ಶಾಖೆಗಳ
ಶಾಖೆಯುಂಪಶಾಖೆಗಳ
ನಾಳ ನಾಳದಿ ಹರಿದು
ಎಳಗೆಂಪು ಮೋಸುಂಗಳು ಕುಡಿಯುಂಟ್ಟವೇನು ?
ಹಸುಂಳೆ ಕಂಡಿ ವೈಗಂಧ ನೀ ಸವಿದೆಯೇನಂ ?
ಶಿಶಿರವಳಿವುದುಂ ಚೈತ್ರ ಬಹುಂದೆಂಬೆಯೇನಂ ?

ಬೇಟೆ

ನೀ ಸಿಗೆ
ನಾ ಬಿಡೆ
ನೀನ್ನಿಲೆ
ನಾನ್ನಿಲೆ.

ಎಲ್ಲಿಗೆ ಓಡುವೆ ಅರಿವೆ
ನಿಲ್ಲದೆ ಅಟ್ಟುವೆ ಬರುವೆ
ಅಲ್ಲಿಗೆ ಸಾರುವೆ ಹಿಡಿವೆ
ಇಲ್ಲಿಗೆ ಗೆಲಿದೆಳತರುವೆ.

ಆ ಗುಣ ನಿನಗಿರುವನಕ
ಈತೆರ ನಾನಿರುವನಕ
ನೀ ಹಟ ನಿಲಿಸುವ ತನಕ
ಈ ಚಲ ನಡೆಯುವ ತನಕ.

ನನ್ನಯ ದೃಢವನು ಅರಿವೆ
ನನ್ನೆದೆಯುದಟನು ಸವಿವೆ
ನಿನ್ನಬಲತೆಯನು ತಿಳಿವೆ
ಎನ್ನರಸೇ ನೀ ಬರುವೆ.

ಉಂಗುರ ರವ ಕೇಳಿ

ಬೇಹಾಗ್

ಉಂಗುರ ರವ ಕೇಳಿ, ಕಾ-ಲುಂಗುರ ರವ —
ಸಂತಸವಾಂತೆದೆ ಮೊರೆಯುತಲಿದೆಯಿದೊ ||

ಮೆಲು ಮೆಲು ನಡೆದು ನೀನಡಿಯಿಡುತಿರಲು
ಕಲುನೆಲ ನಲಿವುದು ಮಾರುಲಿದು,
ಉಲಿಮೆಲು ತಾನಕೆ ಮಿರುಗುವ ಕೈಬಳೆ
ಘಲುಘಲು ನಿನದವು ಸೇರುತಿರೆ — ನಿನ್ನುಂಗುರ

ತರುಗಳ ನೆಳಲಲಿ ತಿಳಿನೀರ್ಗೊಳದಲಿ
ಅರಳುವ ಹೊನ್ನೈದಿಲೆಯಂತೆ
ಬಿರಿದರಳುತೆ ನೀನೆನ್ನ ಮನೆಯೊಳು
ಬೆಳಗಿ ಸಂತಸವನು ಬೀರುತಿಹೆ — ನಿನ್ನುಂಗುರ

ಮುಡಿದಿಹ ಮಲ್ಲಿಗೆ ಜಾಜಿ ಗುಲಾಬಿ
ಹೂಗಳ ಪರಿಮಳ ಹರಡುತಿರೆ
ನಿನ್ನಯ ಮೊಗದಲಿ ನಗುತಿಹ ಕಣ್ಗಳು
ಬರುತಿವೆ ತೇಲುತಲೆನ್ನ ಕಡೆ — ನಿನ್ನುಂಗುರ

ಬಲುದಿನ ಬಾರದ ಮಳೆಗಳು ಸುರಿಯಲು
ನೆಲದಿ ಗರುಕೆವುಲ್ ಹಸಿರುಗಳು
ಚಿಗಿದು ತಣ್ಪು ತಣಿವೀಯುತೆ ಬೆಳೆದಿರೆ
ಬಗೆಯು ನಲಿವವೋಲಾಗಿಹುದು — ನಿನ್ನುಂಗುರ.

ತಾಯಿದೇವಿ

ಎಷ್ಟು ಜನ ನಿನ್ನ ಗತಿಯಣಕಿಸಿಹರಮ್ಮ!
ಎಷ್ಟು ಸಲ ದೂರಿಹರು ಜರೆದಿರುವರಮ್ಮ!
ಎಷ್ಟು ಬಗೆ ದುಮ್ಮಾನ ಹೊರಿಸಿರುವೆವಮ್ಮ!
ಎಷ್ಟು ತೆರ ದಾಸ್ಯಗಳ ಬಿಗಿಸಿರುವೆವಮ್ಮ!

ಹತ್ತಾರು ಶತಮಾನದಪಮಾನವನು ಹೊತ್ತು
ತೊತ್ತುಗಳ ತೆರದಲ್ಲಿ ದುಡಿದಿರುವೆಯಮ್ಮ,
ನಷ್ಟ ಸಂಕಷ್ಟಗಳು ದಿನ ದಿನವು ಬೆಳೆಯುತಿರೆ
ಎಷ್ಟೊಂದು ಸೈಸಿದೆಯೊ ಕಂಡೆವೇನಮ್ಮ

—ನೀನು ತೋರಿದ ಕರುಣೆ ನೀನು ತೋರಿದ ಒಲುಮೆ
ನೀನಿತ್ತ ಆಸರೆಯೆ ಅನ್ನ ವಸನಗಳೆ
ನಿನ್ನನ್ನು ಬಂಧಿಸುವ ಸಂಕಲೆಗಳಾಗಿರಲು
ನಿನ್ನ ಒಡಲನೆ ಕೊರೆದು ತಿನ್ನುತಿಹವು.

ಮೂವತ್ತು ಮುಕ್ಕೋಟಿ ಮಕ್ಕಳನು ಪಡೆದಿದ್ದು
ಅಬಲೆಯರೊಳಬಲೆಯುಂತಾದೆಯಮ್ಮ!
ಇಂದಲ್ಲದಿರೆ ನಾಳೆಯಲ್ಲದಿರೆ ಮುಂದಕ್ಕೆ
ಬಂಧನವ ಬಿಡಿಸುವರು ಎಂದೆಯಮ್ಮ.

ನಿನ್ನೆದೆಯ ದುಃಖಗಳು ಜೀವಗಳ ಮೂಲಗಳ
ಬೇಯಿಸುತೆ ಬದುಕನ್ನು ಕರಗಿಸುತ್ತಿರಲು
ನಿನ್ನ ಕಣ್ಣೀರುಗಳ ಕಡಲುಕ್ಕಿ ಹರಿಯುತ್ತೆ
ದಿನ ದಿನಕೆ ಭರವಸೆಯು ಮುಳುಗಿಸುತ್ತಿರಲು

ತಾಯಿಂಯಂಳಲಲಿ ಕೀಳುಂ ಜೀವಗಳ ಬೆಳಸಂತ್ತ
ಅವಳ ಸ್ವಾತಂತ್ರ್ಯಗಳ ಮಾರಿ ಮೆಂರೆಯುತ್ತ
ತಮ್ಮಲ್ಲೆ ನಾಯ್ಗಳೊಲು ಕಾದಾಡಿ ಕರುಳನ್ನು
ಕುಯ್ಯುತಿಹ ಕುವರರಿದೊ ಬಾಳ್ವೆವಮ್ಮ !

ಧವಳಗಿರಿಯುಲಿ ನಿನ್ನ ಧ್ವಜವನೇರಿಸಲುಳಿದು
ಯುವನ ಪದಧೂಳಿಯುಲಿ ಹೊರಳಿಸಿದೆವಮ್ಮ
ಅವನಿಯುಲಿ ನಾಲ್ವರಿಗೆ ಮೇಲಪ್ಪುದನ್ನುಳಿದು
ಅವನತಿಗೆ ಬಾಳನ್ನು ಕೂಲಿಸಿದೆವಮ್ಮ.

ಎಲ್ಲ ನಾಡಿನ ಪೆರ್ಮೆ ಕಳೆಗಳನು ಸೆಳೆತಂದು
ನಿನ್ನ ಮಕುಟದಿ ರಚಿಪ ಸಾಹಸವನುಳಿದು
ಹಳಿವುಗಳ ಮಲಿನಗಳ ಕಲ್ಲುಗಳ ಮುಳ್ಳುಗಳ
ವಿಷವುಗಿವ ತೊಡವುಗಳ ತೊಡಿಸಿರುವೆವಮ್ಮ.

ಯಾವೊಂದು ಶಕುತಿಯುನು ಏನೆಂತುಂ ಗಳಿಸದೆಯೆ
ಯಾವಿನಿಸು ವಿಧದಲ್ಲು ಗಂಡು ನಿಲ್ಲದೆಯೆ
ನಿನ್ನಮಲ ಕೀರುತಿಯ ನರಕಕ್ಕೆ ಇಳಿಸುತ್ತೆ
ಬೆಳ್ಗಣ್ಗಳಲಿ ಹೆರರ ನೋಡುತಿಹೆವು !

ಸಿರಿಯುಲ್ಲಿ ವಿಭವದಲಿ ಜಸದಲ್ಲಿ ತಣಿವಿನಲಿ
ಬಲದಲ್ಲಿ ಗೈಮೆಯುಲಿ ಹಿರಿಯಾಸೆಗಳಲಿ
ಸರಿಯುವರು ದಿನ ದಿನವು ಏರೇರುತಿರುವಾಗ
ಹೊಲೆದಾಸ್ಯ ಪಂಕದಲಿ ಹೂತಿರುವೆವು.

ಮೂವತ್ತುಮೂರ್ಕೋಟಿ ಕೀಟಗಳು ಮಾನಿಸರೆ
ಒಡಲಿತ್ತು ಬೆಳಸಿದುದ ಪಾಳುಗೈದಿಹರು ?
ಆಸೆಗಳ ಹಿಂಗಿಸುವ ಇದನೆಲ್ಲ ನೋಡುತ್ತೆ
ತಾಳುತ್ತೆ ಕ್ಷಮಿಂಸಂತ್ತೆ ಎಂತುಂ ನಿಂದಿಹೆಯೋ !

ಪ್ರಾರ್ಥನೆ

ನನ್ನೆಲ್ಲಾ ಆಸೆಗಳೂ
ನಿನ್ನನ್ನೇ ಬಯಸುವುವು
ನನ್ನೆಲ್ಲಾ ಕೊರತೆಗಳೂ
ನಿನ್ನಲ್ಲೇ ತುಂಬುವುವು.

ನನ್ನೆಲ್ಲಾ ಭರವಸೆಯೂ
ನಿನ್ನಲ್ಲೇ ನೆಲಸಿಹುದು
ನನ್ನೆಲ್ಲಾ ದುಃಖಗಳೂ
ನಿನ್ನನ್ನೇ ಕರೆಯುವುವು.

ಅಳಲಿನಲಿ ನಗುವಿನಲಿ
ಬೀಳಿನಲಿ ಏಳ್ಗೆಯಲಿ
ನೆನಸಿನಲಿ ಕನಸಿನಲಿ
ಚಪಲದಲಿ ದೃಢದಲ್ಲಿ,

ಕರೆಯುವೆನು ಬಾರಯ್ಯ
ಭ್ರಾಂತಿಗಳ ನಿಲಿಸಯ್ಯ
ನನ್ನೆಲ್ಲಾ ಕರ್ಮವನು
ನಿನ್ನೆಡೆಗೇ ನಡಸಯ್ಯ.

ಮನದೆಲ್ಲಾ ಶಕ್ತಿಗಳೂ
ಅಡಗಿರುವಾ ಭಕ್ತಿಗಳೂ
ನಿನ್ನೆಡೆಗೇ ಬರುವಂತೆ
ಧರ್ಮದಲಿ ಹೂಡಯ್ಯ.

ನಿಜವೆಂದು ಅರಿತುದನು
ನಡಸಲ್ಕೆ ಧೈರ್ಯವನು
ನಿಶ್ಚಲ ನಿಶ್ಚಯಗಳನು
ನೀಡೆನ್ನನು ಸಲಹಯ್ಯ.

5589

ಕೆಲವು ಉತ್ತಮ ಗ್ರಂಥಗಳು

ಪಂಪಾಯಾತ್ರೆ—ವಿ.ಸೀ.	ರೂ. 4.50
ಕವಿಕಾವ್ಯ ದೃಷ್ಟಿ—ವಿ.ಸೀ.	3.50
ನೆಳಲು-ಬೆಳಕು (ಕವನ ಸಂಕಲನ)—ವಿ.ಸೀ.	3.75
ಕದಂಬ (ಕವನ ಸಂಗ್ರಹ)—ವಿ.ಸೀ.	3.50
ಆಗ್ರಹ (ನಾಟಕ)—ವಿ.ಸೀ.	4.00
ಚ್ಯವನ (ನಾಟಕ)_ ವಿ.ಸೀ.	2.50
ಸೀಕರಣೆ (ಪ್ರಬಂಧ ಸಂಗ್ರಹ)—ವಿ.ಸೀ.	4.50
ಬಾ ಹತ್ತರ (ಕವನ ಸಂಗ್ರಹ)—ದ.ರಾ. ಬೇಂದ್ರೆ	5.00
ವಿನಯ (ಕವನ ಸಂಗ್ರಹ)—ದ.ರಾ. ಬೇಂದ್ರೆ	3.50
ವಿಚಾರಮಂಜರಿ (ಬೇಂದ್ರೆಯವರ ವಿಚಾರಧಾರೆ)—ದ.ರಾ. ಬೇಂದ್ರೆ	6.00
ಸಮೀಕ್ಷೆ (ಸಾಹಿತ್ಯಾವಲೋಕನ)—ಹಾ. ಮಾ. ನಾಯಕ	3.75
ಗಂಗೋತ್ರಿ (ಕುವೆಂಪು ಅಭಿನಂದನ ಗ್ರಂಥ)—ಸಂ: ದೇಜಗೌ	60.00
ಕಾರಂತಪ್ರಪಂಚ (ಅಭಿನಂದನ ಗ್ರಂಥ)—ಸಂ: ಕು.ಶಿ. ಹರಿದಾಸಭಟ್ಟ	50.00
ದೀವಿಗೆ (ಗೋವಿಂದ ಪೈ ಸ್ಮಾರಕ ಗ್ರಂಥ)—ಸಂ: ರಾಮದೇವ ಶೇಣೈ	30.00
ಚಂದನ (ಕೆ. ಎಸ್. ನರಸಿಂಹಸ್ವಾಮಿ ಅಭಿನಂದನ ಗ್ರಂಥ)— ಸಂ: ಜಿ. ಎಸ್. ಶಿವರುದ್ರಪ್ಪ	20.00
ಕಟ್ಟೀಮನಿ: ಬದುಕು-ಬರಹ—ಸಂ: ದೇಜಗೌ, ಸಿ.ಪಿ.ಕೆ.	18.00
ವಿಮರ್ಶೆ—ಟಿ. ಎಸ್. ಎಲಿಯಟ್	5.50
ಧರ್ಮದಲ್ಲಿ ಪೂರ್ವ ಮತ್ತು ಪಶ್ಚಿಮ—ಎಸ್. ರಾಧಾಕೃಷ್ಣನ್	7.50
ಚೇತನ (ಕವನ ಸಂಗ್ರಹ)—ಕಯ್ಯಾರ ಕಿಞ್ಞಣ್ಣ ರೈ	5.00
ಸಜೀವ ಸಾಹಿತ್ಯ (ಪ್ರಬಂಧ ಸಂಗ್ರಹ)—ಅ.ನ. ಕೃಷ್ಣರಾಯ	4.00
ಪಾಶ್ಚಾತ್ಯ ಕಾವ್ಯಚಿಂತನ—ಅನು: ಸಿ.ಪಿ.ಕೆ.	15.00
ದಶಕುಮಾರ ಕಥೆ—ಎಂ. ಕೇಶವಭಟ್ಟ	4.00
ಕೋಣನ ಮಂತ್ರ (ಪ್ರಬಂಧ ಸಂಗ್ರಹ)—ಕೆ. ವೆಂಕಟರಾಮಪ್ಪ	5.00
ಗೋವಿಂದ ಪೈ ವಾಙ್ಮಯದರ್ಶನ—ಸಂ: ನಾಯಕ, ಹಾವನೂರ	8.00
ಕವಿರಾಜಮಾರ್ಗ ವಿವೇಕ—ಮುಳಿಯ ತಿಮ್ಮಪ್ಪಯ್ಯ	20.00
ಕನ್ನಡ ಭಾಷಾಶಾಸ್ತ್ರ—ರಾ.ಯ. ಧಾರವಾಡಕರ	15.00
ತುಳುನಾಡಿನ ಇತಿಹಾಸ—ಕೆ. ವಿ. ರಮೇಶ್	12.50
ಕೆಲವು ನೆನಪುಗಳು—ನವರತ್ನ ರಾಮರಾವ್	12.50
ನಾಡೋಜ ಪಂಪ—ಮುಳಿಯ ತಿಮ್ಮಪ್ಪಯ್ಯ	ಅಚ್ಚಿನಲ್ಲಿ
ಕನ್ನಡ ಮಧ್ಯಮ ವ್ಯಾಕರಣ—ತೀ.ನಂ. ಶ್ರೀಕಂಠಯ್ಯ	5.00

ಗೀತಾ ಬುಕ್ ಹೌಸ್ : : ಪ್ರಕಾಶಕರು : : ಮೈಸೂರು

ರೂ. 7.50